ಸೂ. 120

5. ಅಲ್ ಮಾಇದಃ

ರು. 16

سُوْرَةُ الْمَآئِدَةِ مَدَنِيَّةٌ

اٰيَاتُهَا ١٢٠ — رُكُوْعَاتُهَا ١٦

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ۝

1. ಓ ಸತ್ಯವಿಶ್ವಾಸಿಗಳೇ, ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಿ.[1] ನಿಮಗೆ 'ಅನ್‌ಆಮ್' ವರ್ಗದ ಎಲ್ಲ ಪ್ರಾಣಿಗಳನ್ನು ಧರ್ಮ ಸಮ್ಮತಗೊಳಿಸಲಾಗಿದೆ;[2] ಮುಂದೆ ತಿಳಿಸಲ್ಪಡುವ ಪ್ರಾಣಿಗಳ ಹೊರತು - ಆದರೆ ಇಹ್ರಾಮಿನ ಸ್ಥಿತಿಯಲ್ಲಿ ನೀವು ಬೇಟೆಯನ್ನು ಧರ್ಮಸಮ್ಮತಗೊಳಿಸಿಕೊಳ್ಳಬೇಡಿರಿ. ನಿಸ್ಸಂದೇಹವಾಗಿಯೂ ಅಲ್ಲಾಹನು ತಾನಿಚ್ಛಿಸುವ ಆಜ್ಞೆಯನ್ನು ನೀಡುತ್ತಾನೆ.

يٰٓاَيُّهَا الَّذِيْنَ اٰمَنُوْٓا اَوْفُوْا بِالْعُقُوْدِ ؕ اُحِلَّتْ
لَكُمْ بَهِيْمَةُ الْاَنْعَامِ اِلَّا مَا يُتْلٰى عَلَيْكُمْ
غَيْرَ مُحِلِّى الصَّيْدِ وَاَنْتُمْ حُرُمٌ ؕ اِنَّ
اللّٰهَ يَحْكُمُ مَا يُرِيْدُ ۝١

2. ಓ ಸತ್ಯವಿಶ್ವಾಸಿಗಳೇ, ದೇವೋಪಾಸನೆಯ 'ಲಾಂಛನ'ಗಳನ್ನು ಅವಮಾನಿಸಬೇಡಿರಿ.[3] ನಿಷಿದ್ಧ ಮಾಸಗಳ ಪೈಕಿ ಯಾವುದನ್ನೂ ಧರ್ಮಸಮ್ಮತಗೊಳಿಸಬಾರದು. ಬಲಿ ಪ್ರಾಣಿಗಳನ್ನು ಪೀಡಿಸ ಬಾರದು. ಅಲ್ಲಾಹನಿಗೆ ಮುಡಿಪಾಗಿರಿಸಿದ್ದರ ದ್ಯೋತಕವಾಗಿ ಕೊರಳಲ್ಲಿ ಪಟ್ಟಿಯಿರುವ ಪ್ರಾಣಿಗಳನ್ನು ಪೀಡಿಸಬಾರದು. ತಮ್ಮ

يٰٓاَيُّهَا الَّذِيْنَ اٰمَنُوْا لَا تُحِلُّوْا شَعَآئِرَ اللّٰهِ
وَلَا الشَّهْرَ الْحَرَامَ وَلَا الْهَدْيَ وَلَا
الْقَلَآئِدَ وَلَآ آٰمِّيْنَ الْبَيْتَ الْحَرَامَ
يَبْتَغُوْنَ فَضْلًا مِّنْ رَّبِّهِمْ وَرِضْوَانًا ؕ

المنزل ٢

---

1. ಅರ್ಥಾತ್- ನಿಮ್ಮ ಮೇಲೆ ವಿಧಿಸಲಾಗಿರುವ ಮೇರೆ ಮತ್ತು ನಿಬಂಧನೆಗಳನ್ನು ಪಾಲಿಸಿರಿ.
2. 'ಅನ್‌ಆಮ್' ಎಂಬ ಪದವು ಅರಬಿ ಭಾಷೆಯಲ್ಲಿ ಒಂಟೆ, ಹಸು, ಕುರಿ, ಆಡು ಇತ್ಯಾದಿ ಜಾನುವಾರುಗಳಿಗೆ ಪ್ರಯೋಗವಾಗುತ್ತದೆ. 'ಬಹೀಮ' ಎಂದು ಎಲ್ಲಾ ಚತುಷ್ಪಾದಿಗಳಿಗೂ ಹೇಳುತ್ತಾರೆ. "ಜಾನುವಾರಿನ ರೂಪದ ಎಲ್ಲಾ ಚತುಷ್ಪಾದಿಗಳನ್ನು ನಿಮಗೆ ಧರ್ಮಸಮ್ಮತಗೊಳಿಸಲಾಗಿದೆ." ಅಂದರೆ ಕೋರೆ ಹಲ್ಲುಗಳಿಲ್ಲದ, ಮಾಂಸಾಹಾರದ ಬದಲಿಗೆ ಸಸ್ಯಾಹಾರ ಸೇವಿಸುವ, ಪ್ರಾಣಿ ಸದೃಶ ಗುಣಗಳಲ್ಲಿ ಜಾನುವಾರುಗಳಿಗೆ ಹೋಲುವ ಎಲ್ಲಾ ಚತುಷ್ಪಾದಿ ಜಾನುವಾರುಗಳು. "ಬೇಟೆಯಾಡಿ ತಿನ್ನುವ ಪ್ರಾಣಿ ಮತ್ತು ಪಕ್ಷಿಗಳು, ಸತ್ತ ಪ್ರಾಣಿಯ ಮಾಂಸ ಭಕ್ಷಿಸುವ ಪ್ರಾಣಿಗಳು ನಿಷಿದ್ಧವಾಗಿವೆ" ಎನ್ನುವ ಮೂಲಕ ಪ್ರವಾದಿವರ್ಯರು(ಸ) ಇದಕ್ಕೆ ಸ್ಪಷ್ಟೀಕರಣ ನೀಡಿದ್ದಾರೆ.
3. ಯಾವುದೇ ಪಂಥ, ವಿಶ್ವಾಸ, ತತ್ವಾದರ್ಶ ಅಥವಾ ವ್ಯವಸ್ಥೆಯನ್ನು ಪ್ರತಿನಿಧಿಸುವ ಎಲ್ಲಾ ವಸ್ತುಗಳು ಅದರ ಲಾಂಛನಗಳೆನಿಸಿಕೊಳ್ಳುತ್ತವೆ. ಏಕೆಂದರೆ ಅವು ಅದರ ಸೂಚಕ ಮತ್ತು ಗುರುತುಗಳಾಗಿವೆ. ಸರ್ಕಾರಿ ಧ್ವಜ, ಸೇನೆ ಮತ್ತು ಆರಕ್ಷಕರ ಸಮವಸ್ತ್ರ, ನಾಣ್ಯಗಳು, ನೋಟುಗಳು, ಅಂಚೆಚೀಟಿ ಇತ್ಯಾದಿಗಳು ಸರ್ಕಾರದ ಚಿಹ್ನೆಗಳಾಗಿವೆ. ಚರ್ಚು, ಬಲಿಪೀಠ ಮತ್ತು ಶಿಲುಬೆ ಕ್ರೈಸ್ತ ಧರ್ಮದ ಲಾಂಛನಗಳಾಗಿವೆ. ಜುಟ್ಟು, ಜನಿವಾರ ಮತ್ತು ಮಂದಿರ ಬ್ರಾಹ್ಮಣರ ಲಾಂಛನಗಳಾಗಿವೆ. ಕೇಶ, ಕಡಗ ಮತ್ತು ಕೃಪಾಣ ಸಿಕ್ಖ್ ಧರ್ಮದ ಲಾಂಛನಗಳಾಗಿವೆ. ಕತ್ತಿ ಮತ್ತು ಸುತ್ತಿಗೆ ಕಮ್ಯುನಿಸಮ್‌ನ ಲಾಂಛನವಾಗಿದೆ. ಈ ಎಲ್ಲಾ ಪಂಥಗಳು ತಮ್ಮ ಹಿಂಬಾಲಕರು ಆ ಲಾಂಛನಗಳನ್ನು ಗೌರವಿಸಬೇಕೆಂದು ಬಯಸುತ್ತವೆ. ಯಾವುದೇ ವ್ಯವಸ್ಥೆಯ ಲಾಂಛನಗಳ ಪೈಕಿ ಯಾವುದಾದರೂ ಒಂದಕ್ಕೆ ಯಾರಾದರೂ ಅಗೌರವ ತೋರಿದರೆ ಅವನು ಆ

ಪ್ರಭುವಿನ ಅನುಗ್ರಹ ಹಾಗೂ ಅವನ ಸಂಪ್ರೀತಿಯನ್ನರಸುತ್ತ ಪವಿತ್ರಾಲಯ(ಕಅಬಾ)ದ ಕಡೆ ಹೋಗುತ್ತಿರುವವರನ್ನು ಕೆಣಕಬಾರದು. ಇಹ್ರಾಮಿನ ಸ್ಥಿತಿಯು ಮುಗಿದ ಬಳಿಕ ನೀವು ಬೇಟೆಯಾಡಬಹುದು. ಒಂದು ಕೂಟವು ನಿಮಗೆ 'ಮಸ್ಜಿದುಲ್ ಹರಾಮ್'ನ ದಾರಿಯನ್ನು ಮುಚ್ಚಿ ಬಿಟ್ಟುದರ ಬಗ್ಗೆ ನಿಮಗಿರುವ ಕೋಪವು ನಿಮ್ಮನ್ನು ಅಯುಕ್ತ ರೀತಿಯ ಅತಿರೇಕಗಳನ್ನೆಸಗುವಷ್ಟು ಉದ್ರೇಕಿಸದಿರಲಿ.[4] ಪುಣ್ಯ ಹಾಗೂ ದೇವಭಯದ ಕಾರ್ಯಗಳಲ್ಲಿ ಎಲ್ಲರ ಜೊತೆ ಸಹಕರಿಸಿರಿ ಮತ್ತು ಪಾಪ ಹಾಗೂ ಅತಿರೇಕ ಕಾರ್ಯಗಳಲ್ಲಿ ಯಾರೊಂದಿಗೂ ಸಹಕರಿಸಬೇಡಿರಿ. ಅಲ್ಲಾಹನನ್ನು ಭಯಪಡಿರಿ. ಅವನ ಶಿಕ್ಷೆಯು ಅತ್ಯಂತ ಕಠಿಣವಾಗಿರುತ್ತದೆ.

وَ اِذَا حَلَلْتُمْ فَاصْطَادُوْا ؕ وَ لَا یَجْرِمَنَّكُمْ شَنَاٰنُ قَوْمٍ اَنْ صَدُّوْكُمْ عَنِ الْمَسْجِدِ الْحَرَامِ اَنْ تَعْتَدُوْا ۘ وَ تَعَاوَنُوْا عَلَى الْبِرِّ وَ التَّقْوٰى ۪ وَ لَا تَعَاوَنُوْا عَلَى الْاِثْمِ وَ الْعُدْوَانِ ۪ وَ اتَّقُوا اللّٰهَ ؕ اِنَّ اللّٰهَ شَدِیْدُ الْعِقَابِ ۲

3. ನಿಮಗೆ ಇವು ನಿಷಿದ್ಧಗೊಳಿಸಲ್ಪಟ್ಟಿವೆ - ಶವ, ರಕ್ತ, ಹಂದಿಮಾಂಸ, ಅಲ್ಲಾಹನ ಹೊರತು ಇತರರ ಹೆಸರಲ್ಲಿ 'ದಿಬ್ಹ್' ಮಾಡಲ್ಪಟ್ಟ (ಚೂರಿ ಹಾಕಲ್ಪಟ್ಟ) ಪ್ರಾಣಿ, ಉಸಿರುಕಟ್ಟಿ ಅಥವಾ ಪೆಟ್ಟು ತಾಗಿ ಅಥವಾ ಎತ್ತರದಿಂದ ಬಿದ್ದು ಅಥವಾ ಘರ್ಷಿಸಲ್ಪಟ್ಟು ಅಥವಾ ಕ್ರೂರಮೃಗದಿಂದ ಹರಿದು ಹಾಕಲ್ಪಟ್ಟು ಸತ್ತ ಪ್ರಾಣಿ. - ಆದರೆ ನೀವು ಜೀವಂತ ಪಡೆದು 'ದಿಬ್ಹ್' ಮಾಡಿದ ಪ್ರಾಣಿಯು ಇದಕ್ಕೆ ಹೊರತಾಗಿದೆ. ಯಾವುದಾದರೂ ಗುಡಿಯ[5] ಮುಂದೆ ಬಲಿಕೊಡಲ್ಪಟ್ಟ ಪ್ರಾಣಿ, ಅಲ್ಲದೆ ಜೂಜಿನ ಮೂಲಕ ಅದೃಷ್ಟ ಪರೀಕ್ಷೆ ಮಾಡುವುದು ಇವೆಲ್ಲ ಧರ್ಮಭ್ರಷ್ಟತೆಯ ಕಾರ್ಯಗಳು. ಇಂದು ಸತ್ಯನಿಷೇಧಿಗಳಿಗೆ ನಿಮ್ಮ ಧರ್ಮದ ಬಗ್ಗೆ

حُرِّمَتْ عَلَیْكُمُ الْمَیْتَةُ وَ الدَّمُ وَ لَحْمُ الْخِنْزِیْرِ وَ مَاۤ اُهِلَّ لِغَیْرِ اللّٰهِ بِهٖ وَ الْمُنْخَنِقَةُ وَ الْمَوْقُوْذَةُ وَ الْمُتَرَدِّیَةُ وَ النَّطِیْحَةُ وَ مَاۤ اَكَلَ السَّبُعُ اِلَّا مَا ذَكَّیْتُمْ ۫ وَ مَا ذُبِحَ عَلَى النُّصُبِ وَ اَنْ تَسْتَقْسِمُوْا بِالْاَزْلَامِ ؕ ذٰلِكُمْ فِسْقٌ ؕ اَلْیَوْمَ یَىِٕسَ الَّذِیْنَ كَفَرُوْا مِنْ دِیْنِكُمْ فَلَا تَخْشَوْهُمْ وَ اخْشَوْنِ ؕ اَلْیَوْمَ اَكْمَلْتُ لَكُمْ دِیْنَكُمْ

ವ್ಯವಸ್ಥೆಯೊಂದಿಗೆ ವೈರತ್ವ ಹೊಂದಿರುವುದನ್ನು ಅದು ಸೂಚಿಸುತ್ತದೆ. ಅಗೌರವ ತೋರುವವನು ಆ ವ್ಯವಸ್ಥೆಯ ಅಡಿಯಲ್ಲಿರುವವನೇ ಆಗಿದ್ದರೆ ಅವನ ವರ್ತನೆ ವ್ಯವಸ್ಥೆಯ ವಿರುದ್ಧ ನಡೆಸುವ ಬಂಡಾಯಕ್ಕೆ ಸಮಾನವಾಗಿದೆ. 'ಶಆಇರುಲ್ಲಾಹ್' (ಅಲ್ಲಾಹನ ಲಾಂಛನಗಳು) ಎಂದರೆ, ಬಹುದೇವಾರಾಧನೆ, ಸತ್ಯನಿಷೇಧ, ನಾಸ್ತಿಕತೆಗೆ ವಿರುದ್ಧವಾಗಿ ನಿಷ್ಕಳಂಕ ಏಕದೇವೋಪಾಸನೆಯ ವಿಶ್ವಾಸವನ್ನು ಪ್ರತಿನಿಧಿಸುವ ಎಲ್ಲಾ ಗುರುತು ಮತ್ತು ಸಂಕೇತಗಳಾಗಿವೆ.

4. ಸತ್ಯ ನಿಷೇಧಿಗಳು ಆಗ ಕಅಬಾ ಸಂದರ್ಶನದಿಂದ ಮುಸ್ಲಿಮರನ್ನು ತಡೆಯುವ ಮೂಲಕ ಹಜ್ಜ್‌ಕರ್ಮದಿಂದ ಅವರನ್ನು ವಂಚಿತಗೊಳಿಸಿದ್ದರು. ಆದ್ದರಿಂದ ಇಸ್ಲಾಮೀ ಆಕ್ರಮಿತ ಪ್ರದೇಶಗಳ ಮೂಲಕ ಹಾದು ಹೋಗುವ ಸತ್ಯನಿಷೇಧಿಗಳ ಗೋತ್ರಗಳನ್ನು ಹಜ್ಜ್‌ನಿಂದ ತಡೆಯಬೇಕು ಮತ್ತು ಹಜ್ಜ್‌ನ ಕಾಲದಲ್ಲಿ ಅವರ ಯಾತ್ರಾ ತಂಡಗಳ ಮೇಲೆ ದಾಳಿ ನಡೆಸಬೇಕು ಎಂಬ ಭಾವನೆ ಮುಸ್ಲಿಮರಲ್ಲಿ ಮೊಳೆಯಿತು. ಆದರೆ ಅಲ್ಲಾಹನು ಈ ಸೂಕ್ತವನ್ನು ಅವತೀರ್ಣಗೊಳಿಸುವ ಮೂಲಕ ಅವರನ್ನು ಇಂತಹ ವಿಚಾರಗಳಿಂದ ತಡೆದನು.

5. ಮೂಲದಲ್ಲಿ 'ನುಸುಬ್' ಎಂಬ ಪದ ಪ್ರಯೋಗವಾಗಿದೆ. ಅರ್ಥಾತ್ ಅಲ್ಲಾಹೇತರರಿಗೆ ಹರಕೆ ಹೊರಲಿಕ್ಕಾಗಿ ಮತ್ತು ಬಲಿಯರ್ಪಿಸಲಿಕ್ಕಾಗಿ ಜನರು ನಿಗದಿಪಡಿಸಿರುವ ಎಲ್ಲಾ ಸ್ಥಳಗಳಾಗಿವೆ. ಅಲ್ಲಿ ಯಾವುದೇ ಕಲ್ಲು ಅಥವಾ ಮರದ ಮೂರ್ತಿ ಇದ್ದರೂ ಇಲ್ಲದಿದ್ದರೂ ಸರಿಯೇ. ಯಾವುದೇ ಪುಣ್ಯಪುರುಷ, ದೇವಿ, ದೇವತೆ ಅಥವಾ ಬಹುದೇವರಾಧನೆಯಿಂದ ಕೂಡಿದ ಯಾವುದಾದರೂ ವಿಶ್ವಾಸದೊಂದಿಗೆ ಗುರುತಿಸಲ್ಪಡುವ ಇಂತಹ ಸ್ಥಳಗಳನ್ನು ನಮ್ಮ ಭಾಷೆಯಲ್ಲಿ 'ಗುಡಿ' ಎನ್ನುತ್ತೇವೆ. ಇಂತಹ ಯಾವುದೇ ಸ್ಥಳಗಳಲ್ಲಿ ಕೊಯ್ಯಲ್ಪಟ್ಟ ಪ್ರಾಣಿ ನಿಷಿದ್ಧವಾಗಿದೆ.

ಸಂಪೂರ್ಣ ನಿರಾಶೆಯುಂಟಾಗಿರುತ್ತದೆ. ಆದುದರಿಂದ ನೀವು ಅವರನ್ನು ಭಯ ಪಡಬೇಡಿರಿ; ನನ್ನನ್ನು ಭಯಪಡಿರಿ.[6] ಇಂದು ನಾನು ನಿಮ್ಮ ಧರ್ಮವನ್ನು ನಿಮಗಾಗಿ ಪರಿಪೂರ್ಣಗೊಳಿಸಿದ್ದೇನೆ. ನನ್ನ ಕೊಡುಗೆಯನ್ನು ನಿಮ್ಮ ಮೇಲೆ ಪರಿಪೂರ್ಣಗೊಳಿಸಿದ್ದೇನೆ ಮತ್ತು ಇಸ್ಲಾಮನ್ನು ನಿಮ್ಮ ಧರ್ಮವೆಂಬ ನೆಲೆಯಲ್ಲಿ ಅಂಗೀಕರಿಸಿದ್ದೇನೆ. (ಆದುದರಿಂದ ನಿಮಗೆ ವಿಧಿಸಿರುವ ಸಮ್ಮತ ಮತ್ತು ನಿಷೇಧದ ನಿರ್ಬಂಧಗಳನ್ನು ಪಾಲಿಸಿರಿ.)[7] ಆದರೆ ಪಾಪದ ಕಡೆಗೆ ಒಲವಿಲ್ಲದೆ ಹಸಿವೆಯಿಂದ ವಿವಶನಾಗಿ ಯಾರಾದರೂ ಅವುಗಳ ಪೈಕಿ ಏನನ್ನಾದರೂ ತಿಂದು ಬಿಟ್ಟರೆ, ಅಲ್ಲಾಹನು ನಿಶ್ಚಯವಾಗಿಯೂ ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.[8]

وَ اَتۡمَمۡتُ عَلَيۡكُمۡ نِعۡمَتِىۡ وَرَضِيۡتُ لَـكُمُ الۡاِسۡلَامَ دِيۡنًا ؕ فَمَنِ اضۡطُرَّ فِىۡ مَخۡمَصَةٍ غَيۡرَ مُتَجَانِفٍ لِّاِثۡمٍ ۙ فَاِنَّ اللّٰهَ غَفُوۡرٌ رَّحِيۡمٌ‏ ﴿۳﴾

4. ತಮಗೆ ಏನೇನೆಲ್ಲ ಧರ್ಮಸಮ್ಮತಗೊಳಿಸಲ್ಪಟ್ಟಿದೆ ಎಂದು ಜನರು ಕೇಳುತ್ತಾರೆ. ಹೇಳಿರಿ;- ನಿಮಗೆ ಎಲ್ಲಾ ಶುದ್ಧ ವಸ್ತುಗಳು ಧರ್ಮ ಸಮ್ಮತಗೊಳಿಸಲ್ಪಟ್ಟಿವೆ.[9] ನೀವು ಪಳಗಿಸಿದ ಪ್ರಾಣಿಗಳು-

يَسۡـَٔلُوۡنَكَ مَاذَاۤ اُحِلَّ لَهُمۡ‌ ؕ قُلۡ اُحِلَّ لَـكُمُ الطَّيِّبٰتُ‌ ۙ وَمَا عَلَّمۡتُمۡ مِّنَ الۡجَـوَارِحِ

6. ಇಲ್ಲಿ 'ಇಂದು' ಎಂದು ಹೇಳಲಾಗಿರುವುದು ನಿರ್ದಿಷ್ಟ ದಿನ ಮತ್ತು ದಿನಾಂಕಕ್ಕೆ ಅಲ್ಲ. ಅದರ ಅರ್ಥ ಈ ಸೂಕ್ತಗಳು ಅವತೀರ್ಣಗೊಂಡ ಸಂದರ್ಭವೆಂದಾಗಿದೆ. ಈಗಿನ ಕಾಲಕ್ಕೆ 'ಇಂದು' ಎಂಬ ಪದವನ್ನು ಬಳಸುವ ರೂಢಿ ನಮ್ಮ ಭಾಷೆಯಲ್ಲೂ ಇದೆ. "ಸತ್ಯನಿಷೇಧಿಗಳಿಗೆ ನಿಮ್ಮ ಧರ್ಮದ ಬಗ್ಗೆ ಸಂಪೂರ್ಣ ನಿರಾಶೆಯುಂಟಾಗಿರುತ್ತದೆ" ಎಂದರೆ ಈಗ ನಿಮ್ಮ ಧರ್ಮವು ಒಂದು ಸ್ಥಾಯಿ ವ್ಯವಸ್ಥೆಯಾಗಿ ಮಾರ್ಪಟ್ಟಿದ್ದು ತನ್ನ ಅಧಿಕಾರ ಬಲದೊಂದಿಗೆ ಜಾರಿಗೊಂಡಿದೆ ಹಾಗೂ ಸ್ಥಾಪಿಸಲ್ಪಟ್ಟಿದೆ. ಅದನ್ನು ಅಳಿಸಿ ಹಾಕಿ ನಿಮ್ಮನ್ನು ಮತ್ತೆ ಅಜ್ಞಾನದೆಡೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಸತ್ಯನಿಷೇಧಿಗಳು ಸಂಪೂರ್ಣ ನಿರಾಶರಾಗಿದ್ದಾರೆ ಎಂದರ್ಥ. "ಆದುದರಿಂದ ನೀವು ಅವರನ್ನು ಭಯಪಡಬೇಡಿರಿ. ನನ್ನನ್ನು ಭಯಪಡಿರಿ" ಎಂದರೆ ಧರ್ಮದ ಆದೇಶ ಮತ್ತು ಮಾರ್ಗದರ್ಶನವನ್ನು ಪಾಲಿಸಲು ಯಾವುದೇ ಸತ್ಯನಿಷೇಧಿ ಶಕ್ತಿಯ ಪ್ರಾಬಲ್ಯ, ಕ್ರೋಧ ಮತ್ತು ಪ್ರತಿರೋಧವನ್ನು ನೀವು ಭಯಪಡಬೇಕಾಗಿಲ್ಲ. ನೀವು ಈಗ ದೇವನನ್ನು ಮಾತ್ರ ಭಯಪಡಬೇಕು. ಅವನ ಆದೇಶಗಳ ಪಾಲನೆಯಲ್ಲಿ ಯಾವುದೇ ರೀತಿಯ ಚ್ಯುತಿಯುಂಟಾದರೆ ನಿಮ್ಮನ್ನು ಮನ್ನಿಸಿ ಬಿಡಲು ಯಾವುದೇ ನೆಪಗಳು ಈಗ ಉಳಿದಿಲ್ಲ ಎಂದರ್ಥ.

7. ಧರ್ಮವನ್ನು ಪರಿಪೂರ್ಣಗೊಳಿಸುವುದೆಂದರೆ ಜೀವನದ ಸಕಲ ಸಮಸ್ಯೆಗಳಿಗೂ ತಾತ್ವಿಕ ಮತ್ತು ಸವಿವರವಾದ ಪರಿಹಾರವಿರುವ ಹಾಗೂ ಸನ್ಮಾರ್ಗದರ್ಶನಕ್ಕೆ ಯಾವುದೇ ಸಂದರ್ಭದಲ್ಲಿ ಬೇರೆಡೆಗೆ ನೋಡುವ ಅವಶ್ಯಕತೆಯೇ ತಲೆದೋರದ ರೀತಿಯಲ್ಲಿ ಅದನ್ನು ವೈಚಾರಿಕ, ಕ್ರಿಯಾತ್ಮಕ, ನಾಗರಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನಾಗಿ ಮಾಡಿ ಬಿಡುವುದಾಗಿದೆ. ಕೊಡುಗೆಯನ್ನು (ನಿಅ್‌ಮತ್) ಪರಿಪೂರ್ಣಗೊಳಿಸುವುದೆಂದರೆ ಸನ್ಮಾರ್ಗದರ್ಶನದ ಕೊಡುಗೆಯನ್ನು ಪರಿಪೂರ್ಣಗೊಳಿಸುವುದಾಗಿದೆ. ಇಸ್ಲಾಮನ್ನು ಧರ್ಮದ ರೂಪದಲ್ಲಿ ಅಂಗೀಕರಿಸುವುದೆಂದರೆ- ನನ್ನ ಅನುಸರಣೆ ಮತ್ತು ದಾಸ್ಯ ಮಾಡುವ ಪ್ರತಿಜ್ಞೆಯನ್ನು ನೀವು ನಿಮ್ಮ ಪ್ರಯತ್ನ ಮತ್ತು ವರ್ತನೆಗಳ ಮೂಲಕ ಸತ್ಯ ಮತ್ತು ಪ್ರಾಮಾಣಿಕವೆಂದು ಸಾಬೀತುಗೊಳಿಸಿದ್ದೀರಿ, ಆದ್ದರಿಂದ ನಾನು ಅದನ್ನು ಸ್ವೀಕರಿಸಿದ್ದೇನೆ. ನನ್ನ ಹೊರತು ಬೇರೆಲ್ಲರ ದಾಸ್ಯದ ಶೃಂಖಲೆಯಿಂದ ಮುಕ್ತವಾಗಿರಬಹುದಾದ ಸ್ಥಿತಿಗೆ ನಿಮ್ಮನ್ನು ತಲಪಿಸಿದ್ದೇನೆ. ನನ್ನ ಅನುಸರಣಶೀಲತೆ ನಿಮ್ಮ ಪಾಲಿಗೆ ಕೇವಲ ವಿಶ್ವಾಸಕ್ಕೆ ಸೀಮಿತವಾಗಿಲ್ಲ. ವ್ಯಾವಹಾರಿಕ ಜೀವನದಲ್ಲೂ ನನ್ನ ಹೊರತು ಬೇರಾವ ಅನುಸರಣೆಯನ್ನು ಕೈಗೊಳ್ಳಬೇಕಾದ ಅನಿವಾರ್ಯತೆ ನಿಮಗೆ ಉಳಿದಿಲ್ಲ ಎಂದಾಗಿದೆ.

8. ವಿವರಣೆಗಾಗಿ ಅಲ್‌ಬಕರಃ ಅಧ್ಯಾಯದ 52ನೇ ಟಿಪ್ಪಣಿ ನೋಡಿರಿ.

9. ಸಿಂಧುವಾದ ಎಲ್ಲಾ ವಸ್ತುಗಳ ವಿವರಣೆಗಳನ್ನು ತಿಳಿಸಬೇಕು. ಅದರ ಹೊರತು ಉಳಿದೆಲ್ಲಾ ವಸ್ತುಗಳನ್ನು ನಿಷಿದ್ಧವೆಂದು ಭಾವಿಸಲು ಇದರಿಂದ ಸಾಧ್ಯವಾಗುತ್ತದೆಂಬುದು ಪ್ರಶ್ನೆ ಕೇಳುವವರ ಉದ್ದೇಶವಾಗಿತ್ತು. ಅದಕ್ಕೆ ಉತ್ತರವಾಗಿ ಕುರ್‌ಆನಿನಲ್ಲಿ ನಿಷಿದ್ಧ ವಸ್ತುಗಳ ವಿವರಣೆ ನೀಡಲಾಗಿದೆ. ಅನಂತರ ಶುದ್ಧ ವಸ್ತುಗಳೆಲ್ಲವೂ ಧರ್ಮಸಮ್ಮತವೆಂಬ ಸಾರ್ವತ್ರಿಕ ಆದೇಶ ನೀಡಲಾಗಿದೆ. ಹೀಗೆ ಪುರಾತನ

مُكَلِّبِيْنَ تُعَلِّمُوْنَهُنَّ مِمَّا عَلَّمَكُمُ اللّٰهُ ۫
فَكُلُوْا مِمَّآ اَمْسَكْنَ عَلَيْكُمْ وَاذْكُرُوا اسْمَ
اللّٰهِ عَلَيْهِ ۠ وَاتَّقُوا اللّٰهَ ۭ اِنَّ اللّٰهَ
سَرِيْعُ الْحِسَابِ ④

ದೇವದತ್ತವಾದ ಜ್ಞಾನದ ಆಧಾರದಲ್ಲಿ ನೀವು ಬೇಟೆಯಾಡಲು ಕಲಿಸಿಕೊಟ್ಟ ಪ್ರಾಣಿಗಳು - ನಿಮಗಾಗಿ ಹಿಡಿದಿಟ್ಟ ಪ್ರಾಣಿಗಳನ್ನೂ ನೀವು ತಿನ್ನಬಹುದು.[10] ಆದರೆ ಅದರ ಮೇಲೆ ಅಲ್ಲಾಹನ ನಾಮವನ್ನುಚ್ಚರಿಸಿಕೊಳ್ಳಿರಿ.[11] ಅಲ್ಲಾಹನ ನಿಯಮೋಲ್ಲಂಘನೆ ಮಾಡುವ ಕುರಿತು ಭಯಪಡಿರಿ. ಲೆಕ್ಕ ಪರಿಶೋಧಿಸಲು ಅಲ್ಲಾಹನಿಗೆ ವಿಳಂಬವಾಗುವುದಿಲ್ಲ.

اَلْيَوْمَ اُحِلَّ لَكُمُ الطَّيِّبٰتُ ۭ وَطَعَامُ
الَّذِيْنَ اُوْتُوا الْكِتٰبَ حِلٌّ لَّكُمْ ۠ وَطَعَامُكُمْ
حِلٌّ لَّهُمْ ۡ وَالْمُحْصَنٰتُ مِنَ الْمُؤْمِنٰتِ
وَالْمُحْصَنٰتُ مِنَ الَّذِيْنَ اُوْتُوا الْكِتٰبَ
مِنْ قَبْلِكُمْ اِذَآ اٰتَيْتُمُوْهُنَّ اُجُوْرَهُنَّ
مُحْصِنِيْنَ غَيْرَ مُسٰفِحِيْنَ وَلَا مُتَّخِذِيْٓ

5. ಇಂದು ನಿಮಗೆ ಸಕಲ ಶುದ್ಧ ವಸ್ತುಗಳೂ 'ಧರ್ಮಸಮ್ಮತ' ಮಾಡಲ್ಪಟ್ಟಿವೆ. ಗ್ರಂಥದವರ ಆಹಾರ ನಿಮಗೂ ನಿಮ್ಮ ಆಹಾರ ಅವರಿಗೂ 'ಧರ್ಮಸಮ್ಮತ' ಆಗಿರುತ್ತದೆ.[12] ಸುಶೀಲ ಸ್ತ್ರೀಯರು - ಅವರು ಸತ್ಯವಿಶ್ವಾಸಿ ವರ್ಗದವರಿರಲಿ ಅಥವಾ ನಿಮಗಿಂತ ಮುಂಚೆ ಗ್ರಂಥ ನೀಡಲ್ಪಟ್ಟ ವರ್ಗದವರಿರಲಿ[13]- ನೀವು ಅವರಿಗೆ 'ವಿವಾಹಧನ' ಕೊಟ್ಟು ವಿವಾಹದಲ್ಲಿ ಅವರ ರಕ್ಷಕರಾದರೆ ನಿಮಗೆ ಅವರು ಧರ್ಮಸಮ್ಮತ ಆಗಿರುತ್ತಾರೆ. ಅನಿಯಂತ್ರಿತ ಲೈಂಗಿಕ

ಧರ್ಮವಿಧಿ ತಲೆಕೆಳಗಾಯಿತು. ಯಾವುದನ್ನು ಧರ್ಮಸಮ್ಮತವೆಂದು ಸಾರಲಾಗಿದೆಯೋ ಅದರ ಹೊರತು ಉಳಿದುದೆಲ್ಲವೂ ನಿಷಿದ್ಧವಾಗಿದೆ ಎಂಬುದು ಪುರಾತನ ಧಾರ್ಮಿಕ ವಿಧಿಯಾಗಿತ್ತು. ಅಶುದ್ಧ ವಸ್ತುಗಳನ್ನೂ ಧರ್ಮಸಮ್ಮತಗೊಳಿಸಲು ಪ್ರಯತ್ನಿಸಬಾರದೆಂಬ ಕಾರಣಕ್ಕಾಗಿ ಧರ್ಮಸಮ್ಮತ ವಸ್ತುಗಳು ಶುದ್ಧವಾದುದಾಗಿರಬೇಕೆಂಬ ಶರತ್ತು ವಿಧಿಸಲಾಗಿದೆ, ಇನ್ನು ವಸ್ತುಗಳನ್ನು ಶುದ್ಧವೆಂದು ಪರಿಗಣಿಸುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸಬಹುದು. ಶರೀಅತ್‌ನ ಯಾವುದೇ ವಿಧಿಯ ಆಧಾರದಲ್ಲಿ ಅಶುದ್ಧವೆಂದು ಪರಿಗಣಿಸಲ್ಪಡುವ, ಮನುಷ್ಯನ ಸಹಜ ಸ್ವಭಾವಕ್ಕೆ ಅಸಹ್ಯವೆನಿಸುವ, ತನ್ನ ನೈಸರ್ಗಿಕ ಶುಚಿತ್ವದ ಕಲ್ಪನೆಗೆ ವಿರುದ್ಧವಾದುದೆಂದು ಸುಸಂಸ್ಕೃತ ವ್ಯಕ್ತಿಗೆ ಭಾಸವಾಗುವ ವಸ್ತುಗಳ ಹೊರತು ಉಳಿದುದೆಲ್ಲವೂ ಶುದ್ಧವಾಗಿದೆ.

10. ಬೇಟೆಯ ಪ್ರಾಣಿಗಳೆಂದರೆ ಮಾನವ ಇತರ ಪ್ರಾಣಿಗಳ ಬೇಟೆಗಾಗಿ ಬಳಸುವ ನಾಯಿ, ಚಿರತೆ, ಗರುಡ, ಗಿಡುಗ ಮತ್ತಿತರ ಪ್ರಾಣಿ ಮತ್ತು ಪಕ್ಷಿಗಳಾಗಿವೆ. ಪಳಗಿಸಲ್ಪಟ್ಟ ಪ್ರಾಣಿಗಳ ವಿಶೇಷತೆ ಏನೆಂದರೆ ಅವು ಇತರ ಕ್ರೂರ ಮೃಗಗಳಂತೆ ಪ್ರಾಣಿಯನ್ನು ಹರಿದು ತಿನ್ನದೆ ಅದನ್ನು ತನ್ನ ಯಜಮಾನನಿಗಾಗಿ ಹಿಡಿದಿರಿಸುತ್ತದೆ. ಆದ್ದರಿಂದಲೇ ಕ್ರೂರ ಪ್ರಾಣಿಗಳು ಬೇಟೆಯಾಡಿ ಹಿಡಿದ ಪ್ರಾಣಿಗಳು ನಿಷಿದ್ಧವಾಗಿವೆ. ಪಳಗಿಸಿದ ಪ್ರಾಣಿಗಳು ಬೇಟೆಯಾಡಿದ ಪ್ರಾಣಿಗಳು ಧರ್ಮಸಮ್ಮತವಾಗಿದೆ.

11. ಅರ್ಥಾತ್- ಬೇಟೆಯ ಪ್ರಾಣಿಯನ್ನು ಬೇಟೆಗಾಗಿ ಬಿಡುವಾಗ 'ಬಿಸ್ಮಿಲ್ಲಾಹ್' ಹೇಳಿರಿ. ಬೇಟೆಯ ಪ್ರಾಣಿಯನ್ನು ಬೇಟೆಗಾಗಿ ಬಿಡುವಾಗ ದೇವನಾಮವನ್ನು ಉಚ್ಚರಿಸುವುದು ಅವಶ್ಯಕ ಎಂಬ ನಿಯಮ ಈ ಸೂಕ್ತದಿಂದ ತಿಳಿದುಬರುತ್ತದೆ. ಅನಂತರ ಬೇಟೆಯಾಡಲ್ಪಟ್ಟ ಪ್ರಾಣಿ ಜೀವಿಸಿದ್ದರೆ ಅದನ್ನು ಅಲ್ಲಾಹನ ಹೆಸರೆತ್ತಿ ದಿಬಃ ಮಾಡಬೇಕಾಗಿದೆ. ಜೀವಿಸಿರದಿದ್ದರೆ ದಿಬಃ ಮಾಡದೆಯೇ ಅದು ಧರ್ಮಸಮ್ಮತವಾಗಿದೆ. ಏಕೆಂದರೆ ಬೇಟೆಯ ಪ್ರಾಣಿಯನ್ನು ಬಿಡುವಾಗಲೇ ಅಲ್ಲಾಹನ ಹೆಸರೆತ್ತಲಾಗಿತ್ತು. ಬಾಣಕ್ಕೂ ಇದೇ ನಿಯಮ ಅನ್ವಯವಾಗುತ್ತದೆ.

12. 'ಗ್ರಂಥದವರ ಆಹಾರ'ದಲ್ಲಿ ಅವರು ದಿಬಃ ಮಾಡಿದ ಪ್ರಾಣಿಗಳೂ ಸೇರಿವೆ. ನಮಗೆ ಅವರ ಹಾಗೂ ಅವರಿಗೆ ನಮ್ಮ ಆಹಾರ ಧರ್ಮಸಮ್ಮತವಾಗಿದೆ ಎಂದರೆ ನಮ್ಮ ಮತ್ತು ಅವರ ನಡುವೆ ತಿನ್ನುವ-ಕುಡಿಯುವ ವಿಚಾರದಲ್ಲಿ ಯಾವುದೇ ತೊಡಕು ಅಥವಾ ಅಸ್ಪೃಶ್ಯತೆ ಇಲ್ಲ. ಅವರು ನಮ್ಮ ಜತೆಗೆ ಆಹಾರ ಸೇವಿಸಬಹುದಾಗಿದೆ ಮತ್ತು ನಾವು ಅವರ ಜತೆಗೂ. ಆದರೆ ಈ ಸಾರ್ವತ್ರಿಕ ಅನುಮತಿ ನೀಡುವುದಕ್ಕೆ ಮೊದಲೂ "ನಿಮಗೆ ಶುದ್ಧ ವಸ್ತುಗಳು ಧರ್ಮಸಮ್ಮತವಾಗಿವೆ" ಎಂಬ ಪ್ರಸ್ತಾಪವನ್ನು ಪುನರುಚ್ಚರಿಸಲಾಗಿದೆ. ಶರೀಅತ್‌ನ ಆಧಾರದಲ್ಲಿ ಅವಶ್ಯಕವೆನಿಸುವಂತಹ ಶುಚಿತ್ವದ ನಿಯಮಗಳನ್ನು ಗ್ರಂಥದವರು ಪಾಲಿಸದೆ ಹೋದರೆ, ಅಥವಾ ಅವರ ಆಹಾರದಲ್ಲಿ ವರ್ಜಿಸಬೇಕಾದಂತಹ ನಿಷಿದ್ಧ ವಸ್ತುಗಳು ಸೇರಿದ್ದರೆ ಅವುಗಳನ್ನು ತೊರೆಯಬೇಕಾಗಿದೆ. ಉದಾ: ಅಲ್ಲಾಹನ ಹೆಸರೆತ್ತದೆ ಅಥವಾ ಅಲ್ಲಾಹೇತರರ ಹೆಸರೆತ್ತಿ ದಿಬಃ ಮಾಡಲಾದ ಪ್ರಾಣಿಗಳ ಮಾಂಸ ಸೇವನೆ ನಮ್ಮ ಪಾಲಿಗೆ ಧರ್ಮಸಮ್ಮತವಲ್ಲ.

13. ಅರ್ಥಾತ್- ಕ್ರೈಸ್ತರು ಮತ್ತು ಯಹೂದಿಯರು. ನಿಕಾಹ್ ಮಾಡಿಕೊಳ್ಳುವ ಅನುಮತಿ ಈ ಸ್ತ್ರೀಯರೊಂದಿಗೆ ಮಾತ್ರವಿದೆ. ಅದರ ಜತೆಗೆ

ಸಂಬಂಧವಿರಿಸಿಕೊಳ್ಳುವುದು ಅಥವಾ ರಹಸ್ಯ ಕಾಮುಕರಾಗಿರುವುದು ಸಲ್ಲದು. ಸತ್ಯವಿಶ್ವಾಸ ನೀತಿಯಲ್ಲಿ ನಡೆಯಲು ನಿರಾಕರಿಸಿದವನ ಜೀವನದ ಸಂಪೂರ್ಣ ಕರ್ಮವು ವ್ಯರ್ಥವಾಗುವುದು ಮತ್ತು ಅವನು ಪರಲೋಕದಲ್ಲಿ ದಿವಾಳಿಕೋರನಾಗುವನು.

أَخْدَانٍ ۗ وَمَن يَكْفُرْ بِالْإِيمَانِ فَقَدْ
حَبِطَ عَمَلُهُ وَهُوَ فِي الْآخِرَةِ مِنَ
الْخَاسِرِينَ ⑤ ع

6. ಓ ಸತ್ಯವಿಶ್ವಾಸಿಗಳೇ, ನೀವು ನಮಾಝಿಗೆಂದು ಹೊರಟಾಗ ನಿಮ್ಮ ಮುಖಗಳನ್ನು ಮತ್ತು ಮೊಣಕೈ ಗಂಟುಗಳವರೆಗೆ ಕೈಗಳನ್ನು ತೊಳೆದುಕೊಳ್ಳಿರಿ. ತಲೆಯನ್ನು ಸವರಿರಿ ಮತ್ತು ಹರಡು ಗಂಟುಗಳ ತನಕ ಕಾಲುಗಳನ್ನು ತೊಳೆದುಕೊಳ್ಳಿರಿ.[14] 'ಜನಾಬತ್' (ವೀರ್ಯಸ್ಖಲನಾ ನಂತರದ ಮಾಲಿನ್ಯ) ಸ್ಥಿತಿಯಲ್ಲಿದ್ದರೆ ಸ್ನಾನ ಮಾಡಿ ಶುದ್ಧರಾಗಿಕೊಳ್ಳಿರಿ. ನೀವು ಅನಾರೋಗ್ಯದಿಂದಿದ್ದರೆ ಅಥವಾ ಪ್ರಯಾಣದಲ್ಲಿದ್ದರೆ ಅಥವಾ ನಿಮ್ಮಲ್ಲಾರಾದರೂ ಮಲಮೂತ್ರ ವಿಸರ್ಜನೆ ಮಾಡಿ ಬಂದರೆ ಅಥವಾ ನೀವು ಸ್ತ್ರೀಯರನ್ನು ಸ್ಪರ್ಶಿಸಿದ್ದರೆ ಮತ್ತು ಆ ಬಳಿಕ ನೀರು ಸಿಗದಿದ್ದರೆ, ಶುದ್ಧ ಮಣ್ಣನ್ನು ಉಪಯೋಗಿಸಿಕೊಳ್ಳಿರಿ. ಅದರ ಮೇಲೆ ಹಸ್ತಗಳನ್ನು ಬಡಿದು ನಿಮ್ಮ ಮುಖ ಮತ್ತು ಕೈಗಳ ಮೇಲೆ ಸವರಿಕೊಳ್ಳಿರಿ.[15] ಅಲ್ಲಾಹನು ನಿಮ್ಮ ಜೀವನವನ್ನು ಸಂಕುಚಿತಗೊಳಿಸಲಿಚ್ಛಿಸುವುದಿಲ್ಲ. ಬದಲಾಗಿ ನೀವು ಕೃತಜ್ಞರಾಗಲೆಂದು, ಅವನು ನಿಮ್ಮನ್ನು ಪರಿಶುದ್ಧಗೊಳಿಸಲಿಕ್ಕೂ ನಿಮ್ಮ ಮೇಲೆ ತನ್ನ ಕೊಡುಗೆಗಳನ್ನು ಪರಿಪೂರ್ಣಗೊಳಿಸಲಿಕ್ಕೂ ಇಚ್ಛಿಸುತ್ತಾನೆ.

يَا أَيُّهَا الَّذِينَ آمَنُوا إِذَا قُمْتُمْ إِلَى الصَّلَاةِ
فَاغْسِلُوا وُجُوهَكُمْ وَأَيْدِيَكُمْ إِلَى الْمَرَافِقِ
وَامْسَحُوا بِرُءُوسِكُمْ وَأَرْجُلَكُمْ إِلَى
الْكَعْبَيْنِ ۚ وَإِن كُنتُمْ جُنُبًا فَاطَّهَّرُوا ۚ وَ
إِن كُنتُم مَّرْضَىٰ أَوْ عَلَىٰ سَفَرٍ أَوْ جَاءَ أَحَدٌ
مِّنكُم مِّنَ الْغَائِطِ أَوْ لَامَسْتُمُ النِّسَاءَ فَلَمْ
تَجِدُوا مَاءً فَتَيَمَّمُوا صَعِيدًا طَيِّبًا
فَامْسَحُوا بِوُجُوهِكُمْ وَأَيْدِيكُم مِّنْهُ ۚ
مَا يُرِيدُ اللَّهُ لِيَجْعَلَ عَلَيْكُم مِّنْ حَرَجٍ
وَلَٰكِن يُرِيدُ لِيُطَهِّرَكُمْ وَلِيُتِمَّ نِعْمَتَهُ
عَلَيْكُمْ لَعَلَّكُمْ تَشْكُرُونَ ⑥

7. ಅಲ್ಲಾಹನು ನಿಮಗೆ ದಯಪಾಲಿಸಿದ ಭವ್ಯ ಕೊಡುಗೆಯನ್ನು ಸ್ಮರಿಸಿರಿ ಮತ್ತು ಅವನು ನಿಮ್ಮಿಂದ ಪಡೆದಿರುವ ಆ ಬಲವಾದ ಕರಾರನ್ನು ಮರೆಯಬೇಡಿರಿ. ಅರ್ಥಾತ್ "ನಾವು ಆಲಿಸಿದೆವು ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು" ಎಂಬ ನಿಮ್ಮ

وَاذْكُرُوا نِعْمَةَ اللَّهِ عَلَيْكُمْ وَمِيثَاقَهُ
الَّذِي وَاثَقَكُم بِهِ إِذْ قُلْتُمْ سَمِعْنَا
وَأَطَعْنَا ۖ وَاتَّقُوا اللَّهَ ۚ إِنَّ اللَّهَ عَلِيمٌ

ಅವರು 'ಮುಹ್ಸನಾತ್' (ಸುರಕ್ಷಿತ ಸ್ತ್ರೀಯರು) ಆಗಿರಬೇಕೆಂಬ ಶರತ್ತನ್ನೂ ವಿಧಿಸಲಾಗಿದೆ. ಅರ್ಥಾತ್ ಅವರು ಸ್ವಚ್ಛಂದ ಮನೋವೃತ್ತಿಯ ಸ್ತ್ರೀಯರಾಗಿರಬಾರದು. ನಂತರದ ಸೂಕ್ತದಲ್ಲಿ ಕ್ರೈಸ್ತ ಅಥವಾ ಯಹೂದಿ ಸ್ತ್ರೀಗಾಗಿ ತನ್ನ ವಿಶ್ವಾಸವನ್ನು ಕಳಕೊಳ್ಳಬಾರದು ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ.

14. ಈ ಆದೇಶಕ್ಕೆ ಪ್ರವಾದಿವರ್ಯರು(ಸ) ನೀಡಿರುವ ವಿವರಣೆಯಿಂದ ಮುಖ ತೊಳೆಯುವುದರಲ್ಲಿ ಬಾಯಿ ಮುಕ್ಕಳಿಸುವುದು ಮತ್ತು ಮೂಗನ್ನು ಶುಚಿಗೊಳಿಸುವುದೂ ಸೇರಿದೆ ಎಂದು ವ್ಯಕ್ತವಾಗುತ್ತದೆ. ಅದರ ಹೊರತು ಮುಖ ತೊಳೆಯುವಿಕೆ ಪೂರ್ತಿಯಾಗದು. ಕಿವಿ ತಲೆಯ ಭಾಗವಾಗಿದೆ. ಆದ್ದರಿಂದ ತಲೆ ಸವರುವುದರಲ್ಲಿ ಕಿವಿಯ ಒಳಗಿನ ಮತ್ತು ಹೊರಗಿನ ಭಾಗಗಳನ್ನು ಸವರುವುದೂ ಸೇರಿದೆ. ಅಲ್ಲದೆ ವುಝೂ ಮಾಡುವ ಮುನ್ನ ಕೈಯನ್ನು ತೊಳೆದು ಕೊಳ್ಳಬೇಕು. ಏಕೆಂದರೆ ಕೈಯ ಮೂಲಕ ವುಝೂ ಮಾಡುವುದರಿಂದ ಅದು ಮೊದಲು ಶುಚಿಯಾಗಬೇಕು.

15. ವಿವರಣೆಗಾಗಿ ಅನ್ನಿಸಾ ಅಧ್ಯಾಯದ 41 ಮತ್ತು 43ನೆಯ ಟಿಪ್ಪಣಿಯನ್ನು ನೋಡಿರಿ.

ಕರಾರು. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹ್ ಹೃದಯಗಳೊಳಗಿನ ರಹಸ್ಯಗಳನ್ನೂ ತಿಳಿದಿರುತ್ತಾನೆ.

بِذَاتِ الصُّدُوْرِ ﴿٧﴾

8. ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆನಿಲ್ಲುವವರೂ ನ್ಯಾಯದ ಸಾಕ್ಷ್ಯವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ಅನುಗುಣವಾಗಿರುತ್ತದೆ. ಅಲ್ಲಾಹನನ್ನು ಭಯಪಟ್ಟು ವರ್ತಿಸಿರಿ. ನೀವು ಮಾಡುತ್ತಿರುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಅರಿಯುವವನಾಗಿದ್ದಾನೆ.

يٰۤاَيُّهَا الَّذِيْنَ اٰمَنُوْا كُوْنُوْا قَوّٰمِيْنَ لِلّٰهِ
شُهَدَآءَ بِالْقِسْطِ ۫ وَلَا يَجْرِمَنَّكُمْ شَنَاٰنُ
قَوْمٍ عَلٰۤى اَلَّا تَعْدِلُوْا ؕ اِعْدِلُوْا ۫ هُوَ اَقْرَبُ
لِلتَّقْوٰى ۫ وَاتَّقُوا اللّٰهَ ؕ اِنَّ اللّٰهَ خَبِيْرٌۢ بِمَا تَعْمَلُوْنَ ﴿٨﴾

9. ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮ ಮಾಡುವವರಿಗೆ ಅವರ ಅಪರಾಧಗಳನ್ನು ಮನ್ನಿಸಲಾಗುವುದೆಂದೂ ಅವರಿಗೆ ಮಹತ್ತಾದ ಪ್ರತಿಫಲ ಸಿಗುವುದೆಂದೂ ಅಲ್ಲಾಹನು ವಾಗ್ದಾನವಿತ್ತಿರುತ್ತಾನೆ.

وَعَدَ اللّٰهُ الَّذِيْنَ اٰمَنُوْا وَعَمِلُوا الصّٰلِحٰتِ ۙ
لَهُمْ مَّغْفِرَةٌ وَّاَجْرٌ عَظِيْمٌ ﴿٩﴾

10. ಆದರೆ, ಯಾರು ಸತ್ಯವನ್ನು ನಿರಾಕರಿಸಿ ಅಲ್ಲಾಹನ ನಿದರ್ಶನಗಳನ್ನು ಸುಳ್ಳಾಗಿಸುವರೋ, ಅಂಥವರು ನರಕಕ್ಕೆ ಹೋಗುವರು.

وَالَّذِيْنَ كَفَرُوْا وَكَذَّبُوْا بِاٰيٰتِنَاۤ
اُولٰٓئِكَ اَصْحٰبُ الْجَحِيْمِ ﴿١٠﴾

11. ಓ ಸತ್ಯವಿಶ್ವಾಸಿಗಳೇ, (ಇತ್ತೀಚೆಗೆ) ಒಂದು ವಿಭಾಗವು ನಿಮ್ಮ ಮೇಲೆ ಕೈ ಮಾಡಲು ಯತ್ನಿಸಿದಾಗ ಅಲ್ಲಾಹನು ಅವರ ಕೈಗಳನ್ನು ನಿಮ್ಮ ಮೇಲೇರದಂತೆ ತಡೆಯುವ ಮೂಲಕ ನಿಮ್ಮ ಮೇಲೆ ಮಾಡಿದ ಉಪಕಾರವನ್ನು ಸ್ಮರಿಸಿರಿ.[16] ಅಲ್ಲಾಹನನ್ನು ಭಯಪಟ್ಟು ವರ್ತಿಸಿರಿ. ಸತ್ಯವಿಶ್ವಾಸವುಳ್ಳವರು ಅಲ್ಲಾಹನ ಮೇಲೆಯೇ ಭರವಸೆಯನ್ನಿರಿಸಿಕೊಳ್ಳಬೇಕು.

يٰۤاَيُّهَا الَّذِيْنَ اٰمَنُوا اذْكُرُوْا نِعْمَتَ اللّٰهِ
عَلَيْكُمْ اِذْ هَمَّ قَوْمٌ اَنْ يَّبْسُطُوْۤا اِلَيْكُمْ
اَيْدِيَهُمْ فَكَفَّ اَيْدِيَهُمْ عَنْكُمْ ۚ وَاتَّقُوا
اللّٰهَ ؕ وَعَلَى اللّٰهِ فَلْيَتَوَكَّلِ الْمُؤْمِنُوْنَ ﴿١١﴾

12. ಅಲ್ಲಾಹನು ಬನೀಇಸ್ರಾಈಲರಿಂದ ಬಲವಾದ ಕರಾರನ್ನು ಪಡೆದಿದ್ದನು ಮತ್ತು ಅವರೊಳಗಿಂದ ಹನ್ನೆರಡು 'ನಕೀಬ'[17] (ಮೇಲ್ವಿಚಾರಕ)ರನ್ನು ನೇಮಕ ಮಾಡಿದ್ದನು. ಅವರೊಡನೆ,

وَلَقَدْ اَخَذَ اللّٰهُ مِيْثَاقَ بَنِيْۤ اِسْرَآءِيْلَ ۚ
وَبَعَثْنَا مِنْهُمُ اثْنَيْ عَشَرَ نَقِيْبًا ؕ وَقَالَ

16. ಇದು ಹ. ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಉಲ್ಲೇಖಿಸಿದ ಘಟನೆಯ ಕಡೆಗಿರುವ ಸೂಚನೆ. ಯಹೂದಿಗಳ ಒಂದು ಗುಂಪು ಪ್ರವಾದಿವರ್ಯರು(ಸ) ಮತ್ತವರ ಆಪ್ತ ಸಂಗಾತಿಗಳನ್ನು ಔತಣಕ್ಕೆ ಆಹ್ವಾನಿಸಿತ್ತು. ಹಠಾತ್ತನೆ ಅವರ ಮೇಲೆ ದಾಳಿ ಮಾಡಿ ಇಸ್ಲಾಮನ್ನು ಮುಗಿಸಿ ಬಿಡುವ ಗುಪ್ತ ಸಂಚನ್ನು ಅವರು ಸಿದ್ಧಪಡಿಸಿದ್ದರು. ಆದರೆ ಅಲ್ಲಾಹನ ಅನುಗ್ರಹದಿಂದ ಅದೇ ವೇಳೆಯಲ್ಲಿ ಆ ಸಂಚಿನ ಬಗ್ಗೆ ಪ್ರವಾದಿವರ್ಯರಿಗೆ(ಸ) ಸುಳಿವು ದೊರೆಯಿತು ಮತ್ತು ಅವರು ಔತಣಕ್ಕೆ ಹೋಗದೆ ಉಳಿದರು.

17. 'ನಕೀಬ್' ಎಂದರೆ ಮೇಲ್ವಿಚಾರಣೆ ಮತ್ತು ಅನ್ವೇಷಣೆ ನಡೆಸುವವನು. ಬನೀಇಸ್ರಾಈಲರಲ್ಲಿ ಹನ್ನೆರಡು ಗೋತ್ರಗಳಿದ್ದವು. ಅಲ್ಲಾಹನು ಆ ಪೈಕಿ ಪ್ರತಿಯೊಂದು ಗೋತ್ರದವರೂ ತಮ್ಮವರಿಂದಲೇ ಒಬ್ಬನನ್ನು ಮೇಲ್ವಿಚಾರಕನನ್ನಾಗಿ ನೇಮಿಸಬೇಕು ಮತ್ತು ಅವನು ಅವರ ಮೇಲೆ ನಿಗಾ ಇಡಬೇಕು, ಅವರನ್ನು ಧರ್ಮರಾಹಿತ್ಯ ಮತ್ತು ಅನೈತಿಕತೆಯಿಂದ ತಡೆಯಲು ಪ್ರಯತ್ನಿಸುತ್ತಿರಬೇಕು ಎಂದು ಅಲ್ಲಾಹನು ಆದೇಶಿಸಿದ್ದನು.

"ನಾನು ನಿಮ್ಮೊಂದಿಗಿದ್ದೇನೆ. ನೀವು ನಮಾಝನ್ನು ಸ್ಥಿರಪಡಿಸಿದರೆ, ಝಕಾತ್ ನೀಡಿದರೆ, ನನ್ನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿ ಕೊಂಡು ಅವರಿಗೆ ಸಹಾಯ ಮಾಡಿದರೆ ಮತ್ತು ಅಲ್ಲಾಹನಿಗೆ ಉತ್ತಮ ಸಾಲವನ್ನು ನೀಡುತ್ತಲಿದ್ದರೆ, ನಿಶ್ಚಯವಾಗಿಯೂ ನಾನು ನಿಮ್ಮ ಕೇಡುಗಳನ್ನೆಲ್ಲ ನಿಮ್ಮಿಂದ ನೀಗಿಸುವೆನು. ಮಾತ್ರವಲ್ಲದೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಲಿರುವಂತಹ ಸ್ವರ್ಗೋದ್ಯಾನಗಳಲ್ಲಿ ನಿಮಗೆ ಪ್ರವೇಶ ಕೊಡುವೆನು. ಆದರೆ, ಅನಂತರ ನಿಮ್ಮಲ್ಲಾರಾದರೂ 'ಧರ್ಮಧಿಕ್ಕಾರ' ನೀತಿಯನ್ನ ನುಸರಿಸಿದರೆ ನಿಜವಾಗಿಯೂ ಅವನು 'ಸವಾಉಸ್ಸಬೀಲ' (ನೇರಮಾರ್ಗ)ನ್ನು ಕಳೆದುಕೊಂಡನು[18] ಎಂದು ಹೇಳಿದ್ದನು.

اللّٰهُ اِنِّىْ مَعَكُمْ ۗ لَئِنْ اَقَمْتُمُ الصَّلٰوةَ وَ
اٰتَيْتُمُ الزَّكٰوةَ وَ اٰمَنْتُمْ بِرُسُلِىْ وَعَزَّرْتُمُوْهُمْ
وَ اَقْرَضْتُمُ اللّٰهَ قَرْضًا حَسَنًا لَّاُكَفِّرَنَّ
عَنْكُمْ سَيِّاٰتِكُمْ وَلَاُدْخِلَنَّكُمْ جَنّٰتٍ
تَجْرِىْ مِنْ تَحْتِهَا الْاَنْهٰرُ ۚ فَمَنْ كَفَرَ بَعْدَ
ذٰلِكَ مِنْكُمْ فَقَدْ ضَلَّ سَوَآءَ السَّبِيْلِ ﴿١٢﴾

13. ಅನಂತರ ಅವರು ತಮ್ಮ ಕರಾರನ್ನು ಮುರಿದ ಕಾರಣಕ್ಕಾಗಿಯೇ, ನಾವು ಅವರನ್ನು ನಮ್ಮ ಕೃಪೆಯಿಂದ ಬಹುದೂರ ಒಗೆದು ಬಿಟ್ಟೆವು ಮತ್ತು ಅವರ ಹೃದಯಗಳನ್ನು ಕಠಿಣಗೊಳಿಸಿದೆವು. ಈಗ ಅವರು ಶಬ್ದಗಳನ್ನು ಅದಲು ಬದಲುಗೊಳಿಸಿ, ಮಾತನ್ನು ಎಲ್ಲೆಲ್ಲೋ ಕೊಂಡೊಯ್ಯುತ್ತಾರೆ. ಅವರಿಗೆ ನೀಡಲಾಗಿದ್ದ ಜ್ಞಾನದ ಬಹು ದೊಡ್ಡ ಪಾಲನ್ನು ಅವರು ಮರೆತು ಬಿಟ್ಟಿದ್ದಾರೆ. ಅನು ದಿನವೂ ಅವರ ಅಪ್ರಾಮಾಣಿಕತೆಯ ಒಂದಲ್ಲೊಂದು ರಹಸ್ಯವು ನಿಮ್ಮ ಮುಂದೆ ಬೆಳಕಿಗೆ ಬರುತ್ತಲೇ ಇರುತ್ತದೆ. ಈ ದೋಷದಿಂದ ವಿರಹಿತರಾದವರು ಅವರಲ್ಲಿ ಅತಿ ವಿರಳ. (ಹೀಗಿರುತ್ತಾ, ಅವರು ಎಂತಹ ಕೀಟಲೆಗೈದರೂ ಅದು ಅವರಿಂದ ಪ್ರತೀಕ್ಷಿತವಾದುದೇ ಆಗಿರುತ್ತದೆ.) ಆದುದರಿಂದ ಅವರನ್ನು ಕ್ಷಮಿಸಿರಿ ಮತ್ತು ಅವರ ವರ್ತನೆಗಳನ್ನು ನಿರ್ಲಕ್ಷಿಸುತ್ತಲಿರಿ. ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ.

فَبِمَا نَقْضِهِمْ مِّيْثَاقَهُمْ لَعَنّٰهُمْ وَجَعَلْنَا
قُلُوْبَهُمْ قٰسِيَةً ۚ يُحَرِّفُوْنَ الْكَلِمَ عَنْ
مَّوَاضِعِهٖ ۙ وَنَسُوْا حَظًّا مِّمَّا ذُكِّرُوْا بِهٖ ۚ
وَلَا تَزَالُ تَطَّلِعُ عَلٰى خَآئِنَةٍ مِّنْهُمْ اِلَّا
قَلِيْلًا مِّنْهُمْ فَاعْفُ عَنْهُمْ وَاصْفَحْ ۗ اِنَّ
اللّٰهَ يُحِبُّ الْمُحْسِنِيْنَ ﴿١٣﴾

14. ಇದೇ ರೀತಿಯಲ್ಲಿ 'ನಾವು ನಸಾರಾ'ಗಳು (ಕ್ರೈಸ್ತರು) ಎಂದು ಹೇಳಿಕೊಂಡಿದ್ದ ಜನರಿಂದಲೂ ನಾವು ಬಲವಾದ ಕರಾರನ್ನು ಪಡೆದಿದ್ದೆವು. ಆದರೆ ಅವರಿಗೂ ಕಲಿಸಿಕೊಡಲಾಗಿದ್ದ ಪಾಠದ ಒಂದು ದೊಡ್ಡ ಭಾಗವನ್ನು ಅವರು ಮರೆತುಬಿಟ್ಟರು. ಕೊನೆಗೆ ನಾವು ಅವರ ನಡುವೆ ಅಂತಿಮ ದಿವಸದ ತನಕವೂ ಹಗೆತನ ಮತ್ತು ಆಂತರಿಕ ದ್ವೇಷದ ಬೀಜವನ್ನು ಬಿತ್ತಿ ಬಿಟ್ಟೆವು. ಅವರು

وَمِنَ الَّذِيْنَ قَالُوْٓا اِنَّا نَصٰرٰٓى اَخَذْنَا
مِيْثَاقَهُمْ فَنَسُوْا حَظًّا مِّمَّا ذُكِّرُوْا بِهٖ ۪
فَاَغْرَيْنَا بَيْنَهُمُ الْعَدَاوَةَ وَالْبَغْضَآءَ اِلٰى
يَوْمِ الْقِيٰمَةِ ۗ وَسَوْفَ يُنَبِّئُهُمُ اللّٰهُ

18. 'ಸವಾಉಸ್ಸಬೀಲ್' ಎಂದರೆ ಉದ್ದಿಷ್ಟ ತಾಣಕ್ಕೆ ತಲಪಲು ರಚಿಸಲಾದ ರಾಜಮಾರ್ಗವಾಗಿದೆ. ಅದನ್ನು ಕಳೆದುಕೊಳ್ಳುವುದೆಂದರೆ ರಾಜಮಾರ್ಗದಿಂದ ಸರಿದು ಕವಲುದಾರಿಯಲ್ಲಿ ದಾರಿತಪ್ಪಿ ನಡೆಯುವುದಾಗಿದೆ.

ಜಗತ್ತಿನಲ್ಲಿ ಏನು ನಿರ್ಮಿಸುತ್ತಿದ್ದರೆಂಬುದನ್ನು ಅಲ್ಲಾಹನು ಅವರಿಗೆ ತೋರಿಸುವ ದಿನವೊಂದು ಖಂಡಿತವಾಗಿಯೂ ಬರಲಿದೆ.

بِمَا كَانُوا يَصْنَعُونَ ﴿١٤﴾

15. ಓ ಗ್ರಂಥದವರೇ, ನೀವು ದೇವಗ್ರಂಥದಿಂದ ಮರೆಮಾಚುತ್ತಿದ್ದ ಅನೇಕ ವಿಷಯಗಳನ್ನು ನಿಮ್ಮೆದುರು ಪ್ರಕಟಪಡಿಸುತ್ತಿರುವ ನಮ್ಮ ಸಂದೇಶವಾಹಕರೊಬ್ಬರು ನಿಮ್ಮ ಬಳಿಗೆ ಬಂದು ಬಿಟ್ಟಿರುತ್ತಾರೆ ಮತ್ತು ಅವರು ಅನೇಕ ವಿಷಯಗಳನ್ನು ಕ್ಷಮಿಸಿ ಬಿಡುತ್ತಾರೆ.[19] ಅಲ್ಲಾಹನ ವತಿಯಿಂದ ಒಂದು ಪ್ರಕಾಶ ಮತ್ತು ಒಂದು ಸುವ್ಯಕ್ತ ಗ್ರಂಥವು ನಿಮ್ಮ ಬಳಿಗೆ ಬಂದು ಬಿಟ್ಟಿದೆ.

يَا أَهْلَ الْكِتَابِ قَدْ جَاءَكُمْ رَسُولُنَا
يُبَيِّنُ لَكُمْ كَثِيرًا مِمَّا كُنْتُمْ تُخْفُونَ
مِنَ الْكِتَابِ وَيَعْفُو عَنْ كَثِيرٍ ۚ قَدْ جَاءَكُمْ
مِنَ اللَّهِ نُورٌ وَكِتَابٌ مُبِينٌ ﴿١٥﴾

16. ಅದರ ಮೂಲಕ ಅಲ್ಲಾಹನು ತನ್ನ ಸಂಪ್ರೀತಿಯನ್ನು ಅಪೇಕ್ಷಿಸುವವರಿಗೆ ರಕ್ಷಾಮಾರ್ಗವನ್ನು ತೋರಿಸಿ ತನ್ನ ಇಚ್ಛೆಯಿಂದ ಅವರನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶದ ಕಡೆಗೆ ಒಯ್ಯುತ್ತಾನೆ ಮತ್ತು ಸನ್ಮಾರ್ಗದತ್ತ ಅವರಿಗೆ ಮಾರ್ಗದರ್ಶನ ಮಾಡುತ್ತಾನೆ.

يَهْدِي بِهِ اللَّهُ مَنِ اتَّبَعَ رِضْوَانَهُ
سُبُلَ السَّلَامِ وَيُخْرِجُهُمْ مِنَ الظُّلُمَاتِ
إِلَى النُّورِ بِإِذْنِهِ وَيَهْدِيهِمْ إِلَىٰ
صِرَاطٍ مُسْتَقِيمٍ ﴿١٦﴾

17. ಮರ್ಯಮರ ಪುತ್ರ 'ಮಸೀಹ'ರನ್ನೇ ದೇವನೆನ್ನುವವರು ಖಂಡಿತವಾಗಿಯೂ 'ಸತ್ಯನಿಷೇಧ' ಮಾಡಿದರು. ಓ ಪೈಗಂಬರರೇ, ಅವರೊಡನೆ ಹೇಳಿರಿ:- "ಅಲ್ಲಾಹನು ಮರ್ಯಮರ ಪುತ್ರ ಮಸೀಹರನ್ನು, ಅವರ ಮಾತೆಯನ್ನು ಮತ್ತು ಸಕಲ ಭೂ ನಿವಾಸಿಗಳನ್ನು ನಾಶಮಾಡಿ ಬಿಡಲಿಚ್ಛಿಸಿದರೆ ಅವನನ್ನು ಆ ಇಚ್ಛೆ ಯಿಂದ ತಡೆಯುವ ಸಾಮರ್ಥ್ಯ ಯಾರಿಗಿದೆ? ಅಲ್ಲಾಹನು ಭೂಮಿ-ಆಕಾಶಗಳ ಮತ್ತು ಅವುಗಳ ನಡುವೆ ಇರುವ ಸಕಲ ವಸ್ತುಗಳ ಒಡೆಯನಾಗಿರುತ್ತಾನೆ. ಅವನು ತಾನಿಚ್ಛಿಸಿದುದನ್ನು ಸೃಷ್ಟಿಸುತ್ತಾನೆ.[20] ಅವನ ಮಹಿಮೆಯು ಎಲ್ಲವನ್ನೂ ಆವರಿಸಿಕೊಂಡಿದೆ.

لَقَدْ كَفَرَ الَّذِينَ قَالُوا إِنَّ اللَّهَ هُوَ
الْمَسِيحُ ابْنُ مَرْيَمَ ۚ قُلْ فَمَنْ يَمْلِكُ
مِنَ اللَّهِ شَيْئًا إِنْ أَرَادَ أَنْ يُهْلِكَ الْمَسِيحَ
ابْنَ مَرْيَمَ وَأُمَّهُ وَمَنْ فِي الْأَرْضِ
جَمِيعًا ۗ وَلِلَّهِ مُلْكُ السَّمَاوَاتِ وَالْأَرْضِ
وَمَا بَيْنَهُمَا ۚ يَخْلُقُ مَا يَشَاءُ ۚ وَاللَّهُ
عَلَىٰ كُلِّ شَيْءٍ قَدِيرٌ ﴿١٧﴾

18. ನಾವು ಅಲ್ಲಾಹನ ಪುತ್ರರೂ ಆಪ್ತರೂ ಆಗಿರುತ್ತೇವೆಂದು ಯಹೂದಿಯರೂ ಕ್ರೈಸ್ತರೂ ಹೇಳುತ್ತಾರೆ. ಹಾಗಾದರೆ ಅವನು ನಿಮ್ಮನ್ನು ನಿಮ್ಮ ಪಾಪಗಳಿಗಾಗಿ ಶಿಕ್ಷಿಸುವುದೇಕೆಂದು ಕೇಳಿರಿ. ವಾಸ್ತವದಲ್ಲಿ ಅಲ್ಲಾಹನು ಸೃಷ್ಟಿಸಿದ ಇತರ ಮನುಷ್ಯರಂತೆ

وَقَالَتِ الْيَهُودُ وَالنَّصَارَىٰ نَحْنُ أَبْنَاءُ
اللَّهِ وَأَحِبَّاؤُهُ ۚ قُلْ فَلِمَ يُعَذِّبُكُمْ
بِذُنُوبِكُمْ ۖ بَلْ أَنْتُمْ بَشَرٌ مِمَّنْ خَلَقَ ۚ

19. ಅರ್ಥಾತ್- ಸತ್ಯಧರ್ಮದ ಸಂಸ್ಥಾಪನೆಗೆ ಅನಿವಾರ್ಯವಾದ ನಿಮ್ಮ ಕೆಲವು ಮುಚ್ಚುಮರೆ ಮತ್ತು ಅಪ್ರಾಮಾಣಿಕತೆಗಳನ್ನು ಅವರು ಬಯಲಿಗೆಳೆಯುತ್ತಾರೆ. ಬಯಲಿಗೆಳೆಯುವುದು ಅನಿವಾರ್ಯವಲ್ಲದ ವಿಷಯಗಳನ್ನು ಅರಿತೂ ನಿರ್ಲಕ್ಷಿಸುತ್ತಾರೆ.

20. ಅರ್ಥಾತ್- ತಂದೆಯಿಲ್ಲದೆ ಹುಟ್ಟಿದ ಮಾತ್ರಕ್ಕಾಗಿ ನೀವು ಅವರನ್ನು ದೇವನನ್ನಾಗಿ ಮಾಡಿಕೊಂಡಿರಿ. ವಾಸ್ತವದಲ್ಲಿ ಅಲ್ಲಾಹನು ಯಾರನ್ನು ಹೇಗೆ ಬೇಕಾದರೂ ಸೃಷ್ಟಿಸಲು ಸಮರ್ಥನಿದ್ದಾನೆ. ಅಲ್ಲಾಹನು ಅಸಾಮಾನ್ಯ ರೂಪದಲ್ಲಿ ಸೃಷ್ಟಿಸಿದ ಮಾತ್ರಕ್ಕೆ ಯಾವುದೇ ದಾಸ ದೇವನಾಗಿ ಮಾರ್ಪಡುವುದಿಲ್ಲ.

ನೀವೂ ಮನುಷ್ಯರೇ ಆಗಿರುತ್ತೀರಿ. ಅವನು ತಾನಿಚ್ಛಿಸಿದವರನ್ನು ಕ್ಷಮಿಸುತ್ತಾನೆ ಮತ್ತು ತಾನಿಚ್ಛಿಸಿದವರನ್ನು ಶಿಕ್ಷಿಸುತ್ತಾನೆ. ಭೂಮಿ-ಆಕಾಶಗಳು ಹಾಗೂ ಅವುಗಳ ನಡುವೆ ಇರುವ ಸಕಲವೂ ಅಲ್ಲಾಹನ ಆಧಿಪತ್ಯದಲ್ಲಿದ್ದು ಎಲ್ಲರಿಗೂ ಆತನ ಕಡೆಗೇ ಮರಳಲಿಕ್ಕಿದೆ.

يَغْفِرُ لِمَنْ يَشَاءُ وَيُعَذِّبُ مَنْ يَشَاءُ ۚ
وَلِلَّهِ مُلْكُ السَّمَاوَاتِ وَالْأَرْضِ وَمَا
بَيْنَهُمَا ۖ وَإِلَيْهِ الْمَصِيرُ ﴿١٨﴾

19. ಓ ಗ್ರಂಥದವರೇ, "ನಮ್ಮ ಬಳಿಗೆ ಸುವಾರ್ತೆ ಕೊಡುವವನು ಮತ್ತು ಎಚ್ಚರಿಕೆ ನೀಡುವವನು ಯಾರೂ ಬರಲಿಲ್ಲ" ಎಂದು ನೀವು ಹೇಳದಂತಾಗಲು ಸಂದೇಶವಾಹಕರ ಆಗಮನದ ವ್ಯವಸ್ಥೆಯು ದೀರ್ಘಕಾಲದಿಂದ ಸ್ಥಗಿತಗೊಂಡಿದ್ದ ಕಾಲದಲ್ಲಿ, ನಮ್ಮ ಈ ಸಂದೇಶವಾಹಕರು ನಿಮ್ಮ ಬಳಿಗೆ ಬಂದಿರುತ್ತಾರೆ ಮತ್ತು ಧರ್ಮದ ಸುಸ್ಪಷ್ಟ ಶಿಕ್ಷಣವನ್ನು ನಿಮಗೆ ನೀಡುತ್ತಿದ್ದಾರೆ. ಆದುದರಿಂದ ಈಗ ಆ ಸುವಾರ್ತೆ ಕೊಡುವವನೂ ಎಚ್ಚರಿಕೆ ನೀಡುವವನೂ ಬಂದುಬಿಟ್ಟನು ಮತ್ತು ಅಲ್ಲಾಹನು ಸಕಲ ಕಾರ್ಯಗಳಿಗೆ ಶಕ್ತನಾಗಿರುತ್ತಾನೆ.[21]

يَا أَهْلَ الْكِتَابِ قَدْ جَاءَكُمْ رَسُولُنَا يُبَيِّنُ
لَكُمْ عَلَىٰ فَتْرَةٍ مِنَ الرُّسُلِ أَنْ تَقُولُوا
مَا جَاءَنَا مِنْ بَشِيرٍ وَلَا نَذِيرٍ ۖ فَقَدْ
جَاءَكُمْ بَشِيرٌ وَنَذِيرٌ ۗ وَاللَّهُ عَلَىٰ
كُلِّ شَيْءٍ قَدِيرٌ ﴿١٩﴾

20. ಮೂಸಾರು ತಮ್ಮ ಜನಾಂಗದೊಡನೆ ಹೇಳಿದ್ದುದನ್ನು ಸ್ಮರಿಸಿರಿ: "ಓ ನನ್ನ ಜನಾಂಗದವರೇ, ಅಲ್ಲಾಹನು ನಿಮಗೆ ದಯಪಾಲಿಸಿದ 'ಕೊಡುಗೆ'ಗಳನ್ನು ಸ್ಮರಿಸಿರಿ. ಅವನು ನಿಮ್ಮಲ್ಲಿ ಪ್ರವಾದಿಗಳನ್ನು ಹುಟ್ಟಿಸಿದನು. ನಿಮ್ಮನ್ನು ಅಧಿಪತಿಗಳನ್ನಾಗಿ ಮಾಡಿದನು. ಜಗತ್ತಿನಲ್ಲಿ ಇನ್ನಾರಿಗೂ ನೀಡದಿದ್ದುದನ್ನೆಲ್ಲ ನಿಮಗೆ ನೀಡಿದನು.

وَإِذْ قَالَ مُوسَىٰ لِقَوْمِهِ يَا قَوْمِ اذْكُرُوا
نِعْمَةَ اللَّهِ عَلَيْكُمْ إِذْ جَعَلَ فِيكُمْ أَنْبِيَاءَ
وَجَعَلَكُمْ مُلُوكًا وَآتَاكُمْ مَا لَمْ يُؤْتِ
أَحَدًا مِنَ الْعَالَمِينَ ﴿٢٠﴾

21. ಓ ನನ್ನ ಜನಾಂಗದವರೇ, ಅಲ್ಲಾಹನು ನಿಮಗೆಂದು ವಿಧಿಸಿರುವ ಆ ಪಾವನ ಪ್ರದೇಶದೊಳಗೆ ನೀವು ಪ್ರವೇಶಿಸಿರಿ;[22] ಹಿಂಜರಿಯಬೇಡಿರಿ. ಅನ್ಯಥಾ ನೀವು ಪರಾಜಿತರಾಗಿಯೂ ಹತಾಶರಾಗಿಯೂ ಮರಳುವಿರಿ."

يَا قَوْمِ ادْخُلُوا الْأَرْضَ الْمُقَدَّسَةَ الَّتِي
كَتَبَ اللَّهُ لَكُمْ وَلَا تَرْتَدُّوا عَلَىٰ
أَدْبَارِكُمْ فَتَنْقَلِبُوا خَاسِرِينَ ﴿٢١﴾

22. ಅವರು, "ಓ ಮೂಸಾ, ಅಲ್ಲಿ ಮಹಾ ಬಲಾಢ್ಯ ಜನರಿದ್ದಾರೆ. ಅವರು ಅಲ್ಲಿಂದ ಹೊರಟು ಹೋಗುವವರೆಗೂ ನಾವು ಅಲ್ಲಿಗೆ ಎಷ್ಟು ಮಾತ್ರಕ್ಕೂ ಹೋಗಲಾರೆವು. ಅವರು ಅಲ್ಲಿಂದ ಹೊರಟು ಹೋದರೆ ನಾವು ಪ್ರವೇಶಿಸಲು ಸಿದ್ಧರಿದ್ದೇವೆ" ಎಂದು ಉತ್ತರ ಕೊಟ್ಟರು.

قَالُوا يَا مُوسَىٰ إِنَّ فِيهَا قَوْمًا جَبَّارِينَ
وَإِنَّا لَنْ نَدْخُلَهَا حَتَّىٰ يَخْرُجُوا مِنْهَا ۖ
فَإِنْ يَخْرُجُوا مِنْهَا فَإِنَّا دَاخِلُونَ ﴿٢٢﴾

21. ಅರ್ಥಾತ್- ಸುವಾರ್ತೆ ಮತ್ತು ಎಚ್ಚರಿಕೆ ಕೊಡುವ ಈ ವ್ಯಕ್ತಿಯನ್ನು ನೀವು ಅನುಸರಿಸದೇ ಹೋದರೆ ಅಲ್ಲಾಹನು ಸರ್ವಶಕ್ತನೆಂದು ನಿಮಗೆ ತಿಳಿದಿರಲಿ. ಅವನು ಯಾವುದೇ ಅಡೆತಡೆ ಇಲ್ಲದೆ ಯಾವುದೇ ರೀತಿಯ ಶಿಕ್ಷೆಯನ್ನು ನೀಡಲು ಸಮರ್ಥನು.

22. ಅರ್ಥಾತ್- ಫೆಲಸ್ತೀನ್ ಸಾಮ್ರಾಜ್ಯ. ಆಗ ಅಲ್ಲಿ ಬಹುದೇವಾರಾಧನೆ ಮತ್ತು ಕೆಡುಕಿನಲ್ಲಿ ನಿರತವಾದ ಸಮುದಾಯ ನೆಲೆಸಿತ್ತು. ಬನೀಇಸ್ರಾಈಲರು ಈಜಿಪ್ಟಿನಿಂದ ಹೊರಟಾಗ ಅಲ್ಲಾಹನು ಅವರಿಗಾಗಿ ಈ ಪ್ರದೇಶವನ್ನು ಗೊತ್ತುಪಡಿಸಿದನಲ್ಲದೆ ಅದನ್ನು ಜಯಿಸುವಂತೆ ಆದೇಶಿಸಿದನು.

23. ಈ ಭಯಭೀತರ ನಡುವೆ ಅಲ್ಲಾಹನ 'ಕೊಡುಗೆ'ಗಳು ಸಿದ್ಧಿಸಿದ ಈರ್ವರಿದ್ದರು.[23] ಅವರು, "ಆ ಪರಾಕ್ರಮಿಗಳನ್ನೆದುರಿಸುತ್ತ ದ್ವಾರದೊಳಗೆ ಹೊಕ್ಕು ಬಿಡಿರಿ. ನೀವು ಒಳಗೆ ತಲಪಿದಾಗ ನೀವೇ ವಿಜಯಿಗಳಾಗುವಿರಿ. ನೀವು ಸತ್ಯವಿಶ್ವಾಸಿಗಳಾಗಿದ್ದರೆ ಅಲ್ಲಾಹನ ಮೇಲೆ ಭರವಸೆ ಇಡಿರಿ" ಎಂದರು.

قَالَ رَجُلَانِ مِنَ الَّذِينَ يَخَافُونَ أَنْعَمَ
اللَّهُ عَلَيْهِمَا ادْخُلُوا عَلَيْهِمُ الْبَابَ ۚ فَإِذَا
دَخَلْتُمُوهُ فَإِنَّكُمْ غَالِبُونَ ۚ وَعَلَى اللَّهِ
فَتَوَكَّلُوا إِنْ كُنْتُمْ مُؤْمِنِينَ ﴿٢٣﴾

24. ಆದರೆ, ಅವರು ಪುನಃ, "ಓ ಮೂಸಾ, ಅವರು ಅಲ್ಲಿರುವ ತನಕ ನಾವು ಎಂದಿಗೂ ಅಲ್ಲಿಗೆ ಹೋಗಲಾರೆವು. ಇನ್ನು ನೀವೂ ನಿಮ್ಮ ಪ್ರಭುವೂ ಹೋಗಿ ಯುದ್ಧ ಮಾಡಿರಿ. ನಾವಿಲ್ಲಿ ಕುಳಿತಿರುತ್ತೇವೆ" ಎಂದು ಹೇಳಿದರು.

قَالُوا يَا مُوسَىٰ إِنَّا لَنْ نَدْخُلَهَا أَبَدًا
مَا دَامُوا فِيهَا فَاذْهَبْ أَنْتَ وَرَبُّكَ
فَقَاتِلَا إِنَّا هَاهُنَا قَاعِدُونَ ﴿٢٤﴾

25. ಆಗ ಮೂಸಾ, "ಓ ನನ್ನ ಪ್ರಭೂ, ನನ್ನ ಮತ್ತು ನನ್ನ ಸಹೋದರನ ಹೊರತು ನನ್ನ ಅಧೀನದಲ್ಲಿ ಯಾರೂ ಇಲ್ಲ. ಆದುದರಿಂದ ನೀನು ನಮ್ಮನ್ನು ಈ ಧರ್ಮಧಿಕ್ಕಾರಿಗಳಿಂದ ಬೇರ್ಪಡಿಸಿ ಬಿಡು" ಎಂದು ಹೇಳಿದರು.

قَالَ رَبِّ إِنِّي لَا أَمْلِكُ إِلَّا نَفْسِي وَأَخِي
فَافْرُقْ بَيْنَنَا وَبَيْنَ الْقَوْمِ الْفَاسِقِينَ ﴿٢٥﴾

26. ಅಲ್ಲಾಹನು, "ಸರಿ, ಹಾಗಾದರೆ ಆ ಪ್ರದೇಶವು ಇವರ ಮೇಲೆ ನಲ್ವತ್ತು ವರುಷಗಳವರೆಗೆ 'ನಿಷಿದ್ಧ' ಆಗಿರುವುದು. ಇವರು ಭೂಮಿಯಲ್ಲಿ ಅಲೆದಾಡುತ್ತಲೇ ಇರುವರು. ಈ ಧರ್ಮಭ್ರಷ್ಟರ ಬಗ್ಗೆ ಎಷ್ಟಕ್ಕೂ ಅನುಕಂಪ ತೋರಬೇಡಿರಿ"[24] ಎಂದು ಉತ್ತರ ಕೊಟ್ಟನು.

قَالَ فَإِنَّهَا مُحَرَّمَةٌ عَلَيْهِمْ ۛ أَرْبَعِينَ
سَنَةً ۛ يَتِيهُونَ فِي الْأَرْضِ ۚ فَلَا
تَأْسَ عَلَى الْقَوْمِ الْفَاسِقِينَ ﴿٢٦﴾ ع ٤ ٨

27. ಓ ಪೈಗಂಬರರೇ, 'ಆದಮ'ರ ಈರ್ವರು ಪುತ್ರರ ವೃತ್ತಾಂತವನ್ನು ಇವರಿಗೆ ಮುಚ್ಚುಮರೆಯಿಲ್ಲದೆ ಹೇಳಿಬಿಡಿರಿ. ಅವರಿಬ್ಬರೂ ಬಲಿಯರ್ಪಿಸಿದಾಗ ಒಬ್ಬನ ಬಲಿದಾನವು ಸ್ವೀಕೃತವಾಯಿತು ಮತ್ತು ಇನ್ನೊಬ್ಬನದು ಸ್ವೀಕರಿಸಲ್ಪಡಲಿಲ್ಲ. ಅವನು, "ಖಂಡಿತವಾಗಿಯೂ ನಾನು ನಿನ್ನನ್ನು ವಧಿಸುವೆನು" ಎಂದನು. ಇವನು, "ಅಲ್ಲಾಹ್ 'ಧರ್ಮನಿಷ್ಠರ' ಬಲಿದಾನವನ್ನು ಮಾತ್ರ ಸ್ವೀಕರಿಸುತ್ತಾನೆ.

وَاتْلُ عَلَيْهِمْ نَبَأَ ابْنَيْ آدَمَ بِالْحَقِّ إِذْ وقف لازم
قَرَّبَا قُرْبَانًا فَتُقُبِّلَ مِنْ أَحَدِهِمَا وَلَمْ
يُتَقَبَّلْ مِنَ الْآخَرِ قَالَ لَأَقْتُلَنَّكَ ۖ
قَالَ إِنَّمَا يَتَقَبَّلُ اللَّهُ مِنَ الْمُتَّقِينَ ﴿٢٧﴾ النصف

23. ಈ ಈರ್ವರು ಹಿರಿಯರಲ್ಲಿ ಯೂಶಲ್‌ಬಿನ್ ನೂನ್ ಕೂಡ ಒಬ್ಬರು. ಹ. ಮೂಸಾರ(ಅ) ನಂತರ ಅವರು ಮೂಸಾರ(ಅ) ಖಲೀಫಾ ಆಗಿ ಮಾರ್ಪಟ್ಟರು. ಇನ್ನೊಬ್ಬರು ಹ. ಕಾಲಿಬ್ ಆಗಿದ್ದರು. ಅವರು ಯೂಶಲ್‌ರ ಆಪ್ತ ಸಹಾಯಕರಾಗಿದ್ದರು. ನಲವತ್ತು ವರ್ಷಗಳ ಅಲೆದಾಟದ ಬಳಿಕ ಬನೀಇಸ್ರಾಈಲರು ಫೆಲಸ್ತೀನ್ ಪ್ರವೇಶಿಸಿದಾಗ ಮೂಸಾರ(ಅ) ಸಂಗಾತಿಗಳ ಪೈಕಿ ಈ ಇಬ್ಬರು ಮಾತ್ರ ಬದುಕುಳಿದಿದ್ದರು.

24. ಈ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲಾಗಿರುವುದು ಏಕೆಂದರೆ ಮೂಸಾರ(ಅ) ಕಾಲದಲ್ಲಿ ಅವಿಧೇಯತೆ, ಪಥಭ್ರಷ್ಟತೆ ಮತ್ತು ಹೇಡಿತನವನ್ನು ಪ್ರದರ್ಶಿಸಿದುದಕ್ಕೆ ಬನೀಇಸ್ರಾಈಲರು ಅನುಭವಿಸಬೇಕಾಗಿ ಬಂದ ಶಿಕ್ಷೆಗಿಂತ ಹೆಚ್ಚು ತೀವ್ರವಾದ ಶಿಕ್ಷೆಯನ್ನು ಮುಹಮ್ಮದ್‌ರ(ಸ) ವಿರುದ್ಧ ಬಂಡಾಯದ ಧೋರಣೆ ತಳೆಯುವುದರಿಂದ ನೀವು ಅನುಭವಿಸಲಿದ್ದೀರಿ ಎಂದು ತಿಳಿಯಪಡಿಸುವುದಾಗಿದೆ.

28. ನೀನು ನನ್ನನ್ನು ವಧಿಸಲು ಕೈಯೆತ್ತಿದರೂ ನಾನು ನಿನ್ನನ್ನು ವಧಿಸೆನು.[25] ನಾನು ಸರ್ವಲೋಕ ಪಾಲಕನಾದ ಅಲ್ಲಾಹನನ್ನು ಭಯಪಡುತ್ತೇನೆ.

لَئِنۢ بَسَطتَّ إِلَيَّ يَدَكَ لِتَقۡتُلَنِي مَآ أَنَا
بِبَاسِطٍ يَّدِيَ إِلَيۡكَ لِأَقۡتُلَكَۚ إِنِّيٓ أَخَافُ
ٱللَّهَ رَبَّ ٱلۡعٰلَمِينَ ﴿٢٨﴾

29. ನನ್ನ ಹಾಗೂ ನಿನ್ನ ಪಾಪಗಳನ್ನು ನೀನೇ ಶೇಖರಿಸಿಕೊಂಡು ನೀನು ನರಕವಾಸಿಯಾಗಿ ಬಿಡಬೇಕು ಎಂದು ನಾನು ಬಯಸುತ್ತೇನೆ. ಅಕ್ರಮಿಗಳ ಅಕ್ರಮಕ್ಕೆ ಇದೇ ಪ್ರತಿಫಲ" ಎಂದು ಉತ್ತರ ಕೊಟ್ಟನು.

إِنِّيٓ أُرِيدُ أَن تَبُوٓأَ بِإِثۡمِي وَإِثۡمِكَ
فَتَكُونَ مِنۡ أَصۡحٰبِ ٱلنَّارِۚ وَذٰلِكَ
جَزٰٓؤُا ٱلظّٰلِمِينَ ﴿٢٩﴾

30. ಕೊನೆಗೆ ಅವನ ಭ್ರಷ್ಟಚಿತ್ತವು ತನ್ನ ಸಹೋದರನ ವಧೆಯನ್ನು ಅವನಿಗೆ ಸುಗಮವಾಗಿಸಿತು ಮತ್ತು ಅವನು ಇವನನ್ನು ವಧಿಸಿ ನಷ್ಟ ಹೊಂದುವವರೊಂದಿಗೆ ಸೇರಿ ಹೋದನು.

فَطَوَّعَتۡ لَهٗ نَفۡسُهٗ قَتۡلَ أَخِيهِ فَقَتَلَهٗ
فَأَصۡبَحَ مِنَ ٱلۡخٰسِرِينَ ﴿٣٠﴾

31. ಅನಂತರ ಅಲ್ಲಾಹನು ಒಂದು ಕಾಗೆಯನ್ನು ಕಳುಹಿಸಿದನು. ಅದು ಅವನ ಸಹೋದರನ ಮೃತ ಶರೀರವನ್ನು ಹೇಗೆ ಮರೆಸುವುದೆಂಬುದನ್ನು ತೋರಿಸಿಕೊಡಲಿಕ್ಕಾಗಿ ನೆಲವನ್ನು ಅಗೆಯ ತೊಡಗಿತು. ಇದನ್ನು ಕಂಡು ಅವನು, "ಓ ನನ್ನ ದುರದೃಷ್ಟವೇ! ನನ್ನ ಸಹೋದರನ ಶವವನ್ನು ಮರೆಸುವ ಉಪಾಯ ಕಂಡು ಕೊಳ್ಳಲು ಈ ಕಾಗೆಯಂತೆಯೂ ನಾನು ಆಗಲಿಲ್ಲವಲ್ಲ!" ಎಂದನು. ಅನಂತರ ಅವನು ಮಾಡಿದ ಕೃತ್ಯಕ್ಕಾಗಿ ತುಂಬಾ ಪಶ್ಚಾತ್ತಾಪ ಪಟ್ಟನು.[26]

فَبَعَثَ ٱللَّهُ غُرَابًا يَّبۡحَثُ فِي ٱلۡأَرۡضِ
لِيُرِيَهٗ كَيۡفَ يُوَارِي سَوۡءَةَ أَخِيهِۚ قَالَ
يٰوَيۡلَتٰٓى أَعَجَزۡتُ أَنۡ أَكُونَ مِثۡلَ هٰذَا
ٱلۡغُرَابِ فَأُوَارِيَ سَوۡءَةَ أَخِيۚ فَأَصۡبَحَ
مِنَ ٱلنّٰدِمِينَ ﴿٣١﴾

32. ಈ ಕಾರಣದಿಂದಲೇ - "ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ" ಎಂಬ ಆದೇಶವನ್ನು ನಾವು ಬನೀಇಸ್ರಾಈಲರಿಗೆ ವಿಧಿಸಿದ್ದೆವು. ಆದರೆ ನಮ್ಮ

مِنۡ أَجۡلِ ذٰلِكَۚ كَتَبۡنَا عَلٰى بَنِيٓ إِسۡرَآءِيلَ
أَنَّهٗ مَنۡ قَتَلَ نَفۡسًۢا بِغَيۡرِ نَفۡسٍ أَوۡ فَسَادٍ
فِي ٱلۡأَرۡضِ فَكَأَنَّمَا قَتَلَ ٱلنَّاسَ جَمِيعًاؕ
وَمَنۡ أَحۡيَاهَا فَكَأَنَّمَآ أَحۡيَا ٱلنَّاسَ
جَمِيعًاؕ وَلَقَدۡ جَآءَتۡهُمۡ رُسُلُنَا بِٱلۡبَيِّنٰتِ

25. ನೀನು ಕೊಲೆ ಮಾಡಲು ಬಂದಾಗ ನಾನು ಕೈ ಕಟ್ಟಿ ಕುಳಿತು ಕೊಲೆಗೆ ಅನುವು ಮಾಡಿಕೊಡುತ್ತೇನೆಂದು ಇದರ ಅರ್ಥವಲ್ಲ. ನೀನು ನನ್ನ ಕೊಲೆಗೆ ಮುಂದಾಗಿರುವಂತೆ ನಾನು ನಿನ್ನ ಕೊಲೆಗೆ ಮುಂದಾಗಲಾರೆ ಎಂದು ಇದರ ಅರ್ಥ.

26. ಇಲ್ಲಿ ಈ ಘಟನೆಯನ್ನು ಪ್ರಸ್ತಾಪಿಸಿರುವುದರ ಉದ್ದೇಶ, ಪ್ರವಾದಿವರ್ಯರು(ಸ) ಮತ್ತವರ ಸನ್ಮಾನ್ಯ ಸಂಗಾತಿಗಳನ್ನು ಕೊಲೆ ಮಾಡಲು ಯಹೂದಿಯರು ಹೂಡಿದ್ದ ಸಂಚಿನ ಬಗ್ಗೆ ಅವರನ್ನು ಹೀಗಳೆಯುವುದಾಗಿದೆ. ಈ ಎರಡು ಘಟನೆಗಳ ನಡುವೆ ಇರುವ ಸಮಾನತೆ ಸ್ಪಷ್ಟವಿದೆ. ಇವರೂ ಅಸೂಯೆಯಿಂದಾಗಿ ಪ್ರವಾದಿವರ್ಯರನ್ನು(ಸ) ಕೊಲೆ ಮಾಡಬಯಸಿದ್ದರು. ಆದಮ್‌ರ(ಅ) ಪುತ್ರನೂ ಅಸೂಯೆಯಿಂದಾಗಿಯೇ ತನ್ನ ಸಹೋದರನನ್ನು ಕೊಲೆ ಮಾಡ ಹೊರಟಿದ್ದನು.

ಸಂದೇಶವಾಹಕರು ಸುವ್ಯಕ್ತ ಆದೇಶಗಳ ಸಹಿತ ಅವರ ಬಳಿಗೆ ನಿರಂತರ ಬಂದುಕೊಂಡಿದ್ದರೂ ಅವರಲ್ಲಿ ಹೆಚ್ಚಿನವರು ಭೂಮಿಯಲ್ಲಿ ಅತಿರೇಕವೆಸಗುವವರಾಗಿದ್ದಾರೆ.

ثُمَّ إِنَّ كَثِيرًا مِّنْهُم بَعْدَ ذَٰلِكَ
فِي الْأَرْضِ لَمُسْرِفُونَ ﴿٣٢﴾

33. ಅಲ್ಲಾಹ್ ಹಾಗೂ ಅವನ ಸಂದೇಶವಾಹಕರ ವಿರುದ್ಧ ಸಮರ ಹೂಡುವವರಿಗೆ ಮತ್ತು ಕ್ಷೋಭೆಯನ್ನುಂಟು ಮಾಡಲಿಕ್ಕಾಗಿಯೇ ಭೂಮಿಯ[27] ಮೇಲೆ ಶ್ರಮಿಸುತ್ತಿರುವವರಿಗೆ ಇರುವ ಶಿಕ್ಷೆಯು ವಧಿಸುವುದು ಅಥವಾ ಶಿಲುಬೆಗೇರಿಸುವುದು ಅಥವಾ ಅವರ ಕೈಯನ್ನೂ ಕಾಲನ್ನೂ ವಿರುದ್ಧ ದಿಕ್ಕುಗಳಿಂದ ಕಡಿದು ಹಾಕುವುದು ಅಥವಾ ಅವರನ್ನು ಗಡೀಪಾರು ಮಾಡುವುದು ಆಗಿರುತ್ತದೆ. ಇದು ಇಹಲೋಕದಲ್ಲಿ ಅವರಿಗಿರುವ ಅಪಮಾನ. ಪರಲೋಕದಲ್ಲಿ ಅವರಿಗೆ ಇದಕ್ಕಿಂತಲೂ ಕಠಿಣ ಶಿಕ್ಷೆ ಕಾದಿದೆ.

إِنَّمَا جَزَاؤُا الَّذِينَ يُحَارِبُونَ اللَّهَ وَ
رَسُولَهُ وَيَسْعَوْنَ فِي الْأَرْضِ فَسَادًا
أَن يُقَتَّلُوا أَوْ يُصَلَّبُوا أَوْ تُقَطَّعَ أَيْدِيهِمْ
وَأَرْجُلُهُم مِّنْ خِلَافٍ أَوْ يُنفَوْا مِنَ
الْأَرْضِ ۚ ذَٰلِكَ لَهُمْ خِزْيٌ فِي الدُّنْيَا وَ
لَهُمْ فِي الْآخِرَةِ عَذَابٌ عَظِيمٌ ﴿٣٣﴾

34. ಆದರೆ ನಿಮ್ಮ ನಿಯಂತ್ರಣಕ್ಕೆ ಬರುವುದಕ್ಕೆ ಮುಂಚೆಯೇ ಪಶ್ಚಾತ್ತಾಪ ಪಟ್ಟು ಮರಳಿದವರ ಬಗ್ಗೆ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆಂಬುದು ನಿಮಗೆ ತಿಳಿದಿರಬೇಕು.[28]

إِلَّا الَّذِينَ تَابُوا مِن قَبْلِ أَن تَقْدِرُوا
عَلَيْهِمْ ۖ فَاعْلَمُوا أَنَّ اللَّهَ غَفُورٌ رَّحِيمٌ ﴿٣٤﴾ ع

35. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ. ಅವನ ಸಾಮೀಪ್ಯದ ಸಾಧನವನ್ನು ಹುಡುಕಿರಿ[29] ಮತ್ತು ಅವನ ಮಾರ್ಗದಲ್ಲಿ ಹೋರಾಡಿರಿ. ನಿಮಗೆ ವಿಜಯ ಪ್ರಾಪ್ತಿಯಾಗಲೂ ಬಹುದು.

يَا أَيُّهَا الَّذِينَ آمَنُوا اتَّقُوا اللَّهَ وَابْتَغُوا إِلَيْهِ
الْوَسِيلَةَ وَجَاهِدُوا فِي سَبِيلِهِ لَعَلَّكُمْ
تُفْلِحُونَ ﴿٣٥﴾

36. 'ಸತ್ಯನಿಷೇಧ' ನೀತಿಯನ್ನು ಕೈಗೊಂಡವರ ವಶದಲ್ಲಿ ಭೂಮಿಯ

إِنَّ الَّذِينَ كَفَرُوا لَوْ أَنَّ لَهُم مَّا فِي الْأَرْضِ

27. ಇಲ್ಲಿ ಭೂಮಿ ಎಂದರೆ ಇಸ್ಲಾಮೀ ಸರ್ಕಾರದ ಮೇಲೆ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ಇರುವ ರಾಷ್ಟ್ರ ಅಥವಾ ಪ್ರದೇಶವಾಗಿದೆ. ಅಲ್ಲಾಹ್ ಮತ್ತು ಪ್ರವಾದಿಯೊಂದಿಗೆ(ಸ) ಯುದ್ಧ ಸಾರುವುದೆಂದರೆ ಇಸ್ಲಾಮೀ ಸರ್ಕಾರ, ರಾಷ್ಟ್ರದಲ್ಲಿ ಸ್ಥಾಪಿಸಬಯಸುವ ಸದ್ವ್ಯವಸ್ಥೆಯ ವಿರುದ್ಧ ಯುದ್ಧ ಸಾರುವುದಾಗಿದೆ. ಕರ್ಮಶಾಸ್ತ್ರಜ್ಞರ ಪ್ರಕಾರ ಶಸ್ತ್ರಸಜ್ಜಿತರಾಗಿ ಗುಂಪುಕಟ್ಟಿ ಕೊಲೆ ಸುಲಿಗೆ ನಡೆಸುವವರೂ ಇದರಲ್ಲಿ ಸೇರಿದ್ದಾರೆ.

28. ಅರ್ಥಾತ್- ಅವರು ಕ್ಷೋಭೆಯುಂಟುಮಾಡುವ ಯತ್ನವನ್ನು ಬಿಟ್ಟು ಬಿಟ್ಟರೆ, ಸದ್ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ಪ್ರಯತ್ನವನ್ನು ಸ್ಥಗಿತಗೊಳಿಸಿದ್ದರೆ, ತಮ್ಮ ವರ್ತನೆಯ ಮೂಲಕ ಅವರು ತಾವು ಶಾಂತಿಪ್ರಿಯರು, ಕಾನೂನುಪಾಲಕರು ಮತ್ತು ಸನ್ನಡತೆಯನ್ನು ಪಾಲಿಸುವವರೆಂದು ಸಾಬೀತುಗೊಳಿಸಿದರೆ ಅನಂತರ ಅವರ ಪೂರ್ವದ ಅಪರಾಧಗಳಿಗಾಗಿ ಅವರಿಗೆ ಪೂರ್ವೋಕ್ತ ಶಿಕ್ಷೆಗಳನ್ನು ನೀಡಲಾಗದು. ಆದರೆ ಅವರು ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದರೆ ಅದರ ಹೊಣೆ ಹೊರುವುದರಿಂದ ಅವರೆಂದೂ ಮುಕ್ತರಾಗುವುದಿಲ್ಲ. ಉದಾ: ಅವರು ಯಾರನ್ನಾದರೂ ಕೊಲೆ ಮಾಡಿದ್ದರೆ, ಯಾರ ಸೊತ್ತನ್ನಾದರೂ ಕಬಳಿಸಿದ್ದರೆ, ಮಾನವನ ಪ್ರಾಣ ಮತ್ತು ಸೊತ್ತಿನ ವಿರುದ್ಧ ಯಾವುದೇ ಅನ್ಯಾಯವೆಸಗಿದ್ದರೆ ಅಪರಾಧ ಸಂಹಿತೆಯನ್ನು ಅವರ ಮೇಲೆ ಜಾರಿಗೊಳಿಸ ಲಾಗುವುದು. ಆದರೆ ಬಂಡಾಯ, ವಂಚನೆ ಅಥವಾ ಅಲ್ಲಾಹ್ ಹಾಗೂ ಪ್ರವಾದಿಯ ವಿರುದ್ಧ ಯುದ್ಧ ಸಾರಿದ ಮೊಕದ್ದಮೆಯನ್ನು ಅವರ ಮೇಲೆ ಹೂಡಲಾಗುವುದಿಲ್ಲ.

29. ಅರ್ಥಾತ್- ಅಲ್ಲಾಹನ ಸಂಪ್ರೀತಿ ಮತ್ತು ಸಾಮೀಪ್ಯದ ಸ್ಥಾನಕ್ಕೇರಲು ವಿಧಾನಗಳನ್ನು ಹುಡುಕುತ್ತಿರಿ, ತವಕಿಸುತ್ತಿರಿ.

ಸಕಲ ಸಂಪತ್ತೂ ಅದರೊಂದಿಗೆ ಮತ್ತೂ ಅಷ್ಟೇ ಇದ್ದರೂ ಅವರು ಅದನ್ನೆಲ್ಲ ಪ್ರಾಯಶ್ಚಿತ್ತ ರೂಪದಲ್ಲಿ ಕೊಟ್ಟು ಪುನರುತ್ಥಾನ ದಿನದ ಯಾತನೆಯಿಂದ ತಪ್ಪಿಸಿಕೊಳ್ಳಲಿಚ್ಛಿಸಿದರೂ ಅವರಿಂದ ಅದು ಸ್ವೀಕೃತವಾಗಲಾರದು ಮತ್ತು ಅವರಿಗೆ ವೇದನಾಯುಕ್ತ ಯಾತನೆ ಸಿಕ್ಕಿಯೇ ತೀರುವುದು.

جَمِيعًا وَمِثْلَهُ مَعَهُ لِيَفْتَدُوا بِهِ مِنْ عَذَابِ يَوْمِ الْقِيَامَةِ مَا تُقُبِّلَ مِنْهُمْ ۖ وَلَهُمْ عَذَابٌ أَلِيمٌ ﴿٣٦﴾

37. ಅವರು ನರಕಾಗ್ನಿಯಿಂದ ಓಡಿಹೋಗಬೇಕೆಂದು ಇಚ್ಛಿಸುವರು. ಆದರೆ, ಅವರಿಗೆ ಹೊರ ಬರಲು ಸಾಧ್ಯವಾಗದು. ಅವರಿಗೆ ಶಾಶ್ವತವಾದ ಯಾತನೆ ಕೊಡಲಾಗುವುದು.

يُرِيدُونَ أَنْ يَخْرُجُوا مِنَ النَّارِ وَمَا هُمْ بِخَارِجِينَ مِنْهَا ۖ وَلَهُمْ عَذَابٌ مُقِيمٌ ﴿٣٧﴾

38. ಕಳ್ಳತನ ಮಾಡಿದವನ ಮತ್ತು ಕಳ್ಳತನ ಮಾಡಿದವಳ ಕೈಗಳನ್ನು ಕಡಿದು ಬಿಡಿರಿ.[30] ಇದು ಅವರ ಗಳಿಕೆಯ ಫಲ ಮತ್ತು ಅಲ್ಲಾಹನ ಕಡೆಯಿಂದ ಎಚ್ಚರಿಸುವಂಥ ಶಿಕ್ಷೆ. ಅಲ್ಲಾಹನು ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَالسَّارِقُ وَالسَّارِقَةُ فَاقْطَعُوا أَيْدِيَهُمَا جَزَاءً بِمَا كَسَبَا نَكَالًا مِنَ اللَّهِ ۗ وَاللَّهُ عَزِيزٌ حَكِيمٌ ﴿٣٨﴾

39. ಇನ್ನು ಯಾರಾದರೂ ಅನ್ಯಾಯವೆಸಗಿದ ಬಳಿಕ ಪಶ್ಚಾತ್ತಾಪ ಪಟ್ಟು ತನ್ನ ವರ್ತನೆಯನ್ನು ಸರಿಪಡಿಸಿಕೊಂಡರೆ, ಅಲ್ಲಾಹನ ಕೃಪಾ ಕಟಾಕ್ಷವು ಮತ್ತೆ ಅವನೆಡೆಗೆ ಒಲಿಯುವುದು.[31] ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

فَمَنْ تَابَ مِنْ بَعْدِ ظُلْمِهِ وَأَصْلَحَ فَإِنَّ اللَّهَ يَتُوبُ عَلَيْهِ ۗ إِنَّ اللَّهَ غَفُورٌ رَحِيمٌ ﴿٣٩﴾

40. ಅಲ್ಲಾಹನು ಭೂಮಿ-ಆಕಾಶಗಳ ಅಧಿಪತಿಯೆಂಬುದನ್ನು ನೀವು

أَلَمْ تَعْلَمْ أَنَّ اللَّهَ لَهُ مُلْكُ السَّمَاوَاتِ وَ

30. ಕತ್ತರಿಸಬೇಕಾದುದು ಎರಡೂ ಕೈಗಳಲ್ಲ. ಒಂದು ಕೈ. ಮೊದಲ ಕಳ್ಳತನಕ್ಕೆ ಬಲಗೈಯನ್ನು ಕತ್ತರಿಸಲಾಗುವುದು. ಇನ್ನೊಬ್ಬರ ಸ್ವಾಧೀನದಲ್ಲಿರುವ ಯಾವುದಾದರೂ ಸೊತ್ತನ್ನು ಅನ್ಯಾಯವಾಗಿ ತನ್ನ ಸ್ವಾಧೀನಕ್ಕೆ ಒಳಪಡಿಸುವ ಕ್ರಿಯೆಗೆ ಮಾತ್ರ 'ಕಳ್ಳತನ'ದ ಪದ ಅನ್ವಯವಾಗುತ್ತದೆ. ಒಂದು ಗುರಾಣಿಗಿಂತ ಕಡಿಮೆ ಮೊತ್ತದ ವಸ್ತುವನ್ನು ಕದ್ದರೆ ಕೈಯನ್ನು ಕತ್ತರಿಸಲಾಗುವುದಿಲ್ಲ. ನಂಬಲರ್ಹ ವರದಿಗಳ ಪ್ರಕಾರ ಪ್ರವಾದಿವರ್ಯರ(ಸ) ಕಾಲದಲ್ಲಿ ಗುರಾಣಿಯ ಬೆಲೆ ಹತ್ತು ದಿರ್‌ಹಮ್ ಆಗಿತ್ತು. ಆ ಕಾಲದ ದಿರ್‌ಹಮ್‌ನಲ್ಲಿ ಸುಮಾರು 1/4 ತೊಲೆ ಬೆಳ್ಳಿ ಇರುತ್ತಿತ್ತು. ಕಳ್ಳತನಕ್ಕಾಗಿ ಕೈ ಕತ್ತರಿಸಬಾರದಂತಹ ಅನೇಕ ವಸ್ತುಗಳೂ ಇವೆ. ಉದಾ: ಹಣ್ಣು ಹಂಪಲು, ತರಕಾರಿ, ಊಟ, ಕ್ಷುಲ್ಲಕ ವಸ್ತುಗಳು, ಹಕ್ಕಿ, ಬೈತುಲ್‌ಮಾಲ್‌ನ ಹಣ ಇತ್ಯಾದಿಗಳ ಕಳ್ಳತನ, ಇವುಗಳನ್ನು ಕದ್ದರೆ ಕೈಯನ್ನು ಕತ್ತರಿಸಲಾಗುವುದಿಲ್ಲ. ಆದರೆ ಇಂತಹ ಕಳ್ಳತನ ಕ್ಷಮ್ಯವೆಂದು ಇದರ ಅರ್ಥವಲ್ಲ.

31. ಅಂತಹ ಕಳ್ಳನ ಕೈ ಕತ್ತರಿಸಬಾರದು ಎಂದು ಇದರ ಅರ್ಥವಲ್ಲ. ಕೈಯನ್ನು ಕತ್ತರಿಸಲಾದ ಬಳಿಕ ಪಶ್ಚಾತ್ತಾಪ ಪಟ್ಟು ತನ್ನ ಮನಸ್ಸನ್ನು ಕಳ್ಳತನದಿಂದ ಪರಿಶುದ್ಧಗೊಳಿಸಿ, ಅಲ್ಲಾಹನ ಸಜ್ಜನ ದಾಸನಾಗಿ ಮಾರ್ಪಡುವವನು ಅಲ್ಲಾಹನ ಕ್ರೋಧದಿಂದ ಮುಕ್ತನಾಗುವನು ಎಂದಾಗಿದೆ. ಅಲ್ಲಾಹನು ಅವನನ್ನು ದೋಷಮುಕ್ತನಾಗಿ ಮಾಡುವನು. ಕೈಯನ್ನು ಕತ್ತರಿಸಿಕೊಂಡ ಬಳಿಕವೂ ಯಾರಾದರೂ ತನ್ನ ದುರುದ್ದೇಶದಿಂದ ಮುಕ್ತನಾಗದಿದ್ದರೆ, ತನ್ನ ಕೈ ಕತ್ತರಿಸಲ್ಪಡಲು ಕಾರಣವಾದ ಹೇಯ ಆಲೋಚನೆಗಳನ್ನು ಪುನಃ ಮೈಗೂಡಿಸಿಕೊಂಡರೆ- ಕೈ ಅವನ ದೇಹದಿಂದ ಪ್ರತ್ಯೇಕಗೊಂಡರೂ, ಕಳ್ಳತನದ ದುರಾಲೋಚನೆ ಅವನ ಮನಸ್ಸಿನಲ್ಲಿ ಇನ್ನೂ ಮನೆ ಮಾಡಿಕೊಂಡಿದೆ ಎಂದಾಯಿತು. ಆದ್ದರಿಂದ ಕೈ ಕತ್ತರಿಸುವುದಕ್ಕೆ ಮೊದಲು ಇದ್ದಂತೆಯೇ ಅನಂತರವೂ ಅವನು ದೇವಕ್ರೋಧಕ್ಕೆ ಅರ್ಹನಾಗಿರುವನು. ಆದ್ದರಿಂದ ಅಲ್ಲಾಹನಿಂದ ಕ್ಷಮೆಯಾಚಿಸಿ ತನ್ನ ಮನಸ್ಸಿನ ಸುಧಾರಣೆ ಮಾಡಿಕೊಳ್ಳುವಂತೆ ಕುರ್‌ಆನ್ ಕಳ್ಳನಿಗೆ ಮಾರ್ಗದರ್ಶನ ಮಾಡುತ್ತದೆ. ಏಕೆಂದರೆ ಆತ್ಮಶುದ್ಧಿಯು, ನ್ಯಾಯಾಲಯದ ಶಿಕ್ಷೆಯಿಂದಾಗದು, ಪ್ರಾಯಶ್ಚಿತ್ತ ಮತ್ತು ದೇವನೆಡೆಗೆ ಮರಳುವುದರಿಂದ ಮಾತ್ರ ಸಾಧ್ಯ.

ತಿಳಿದಿಲ್ಲವೇ? ಅವನು ತಾನಿಚ್ಛಿಸಿದವರನ್ನು ಶಿಕ್ಷಿಸುತ್ತಾನೆ ಮತ್ತು ತನಗಿಷ್ಟ ಬಂದವರನ್ನು ಕ್ಷಮಿಸುತ್ತಾನೆ. ಅವನಿಗೆ ಎಲ್ಲ ಅಧಿಕಾರವೂ ಇದೆ.

الْأَرْضِ ۗ يُعَذِّبُ مَنْ يَشَاءُ وَيَغْفِرُ لِمَنْ
يَشَاءُ ۗ وَاللَّهُ عَلَىٰ كُلِّ شَيْءٍ قَدِيرٌ ﴿٤٠﴾

41. ಓ ಸಂದೇಶವಾಹಕರೇ, 'ಸತ್ಯನಿಷೇಧ' ಮಾರ್ಗದಲ್ಲಿ ಭಾರೀ ಶ್ರಮಪಡುತ್ತಿರುವವರು ನಿಮ್ಮನ್ನು ವ್ಯಾಕುಲಗೊಳಿಸದಿರಲಿ. ಅವರು "ನಾವು ವಿಶ್ವಾಸವಿಟ್ಟೆವು" ಎಂದು ಬಾಯಿ ಮಾತಿನಿಂದ ಹೇಳಿಕೊಂಡರೂ ಹೃದಯದಲ್ಲಿ ವಿಶ್ವಾಸವಿರಿಸದ ಜನರಾಗಿರಲಿ ಅಥವಾ ಅಸತ್ಯ ಮಾತುಗಳನ್ನು ಕೇಳುವ ಹವ್ಯಾಸವುಳ್ಳ ಯಹೂದಿಯರಾಗಿರಲಿ. ಅವರು (ಯಹೂದಿಯರು) ನಿಮ್ಮ ಬಳಿಗೆ ಎಂದೂ ಬಾರದಿರುವ ಇತರ ಜನಾಂಗದವರಿಗಾಗಿ ನಿಮ್ಮ ಮಾತುಗಳಿಗೆ ಕಿವಿಗೊಡುತ್ತಾರೆ. ಇವರು, ದೇವಗ್ರಂಥದ ಪದಗಳ ಇಂಗಿತವು ನಿಶ್ಚಿತವಾಗಿದ್ದರೂ ಅವುಗಳನ್ನು ಅವುಗಳ ನಿಜಾರ್ಥದಿಂದ ದೂರ ಸರಿಸಿಬಿಡುತ್ತಾರೆ ಮತ್ತು ಜನರೊಡನೆ- "ನಿಮಗೆ ಇಂತಹ ಆಜ್ಞೆ ದೊರೆತರೆ ಒಪ್ಪಿಕೊಳ್ಳಿರಿ; ಇಲ್ಲವಾದರೆ ಒಪ್ಪಿಕೊಳ್ಳಬೇಡಿರಿ" ಎಂದು ಹೇಳುತ್ತಾರೆ.[32] ಯಾರನ್ನು ಅಲ್ಲಾಹನೇ 'ಗೊಂದಲ'ಕ್ಕೀಡು ಮಾಡಿರುವನೋ ಅವನನ್ನು ಅಲ್ಲಾಹನ ಹಿಡಿತದಿಂದ ತಪ್ಪಿಸಲು ನೀವು ಏನನ್ನೂ ಮಾಡಲಾರಿರಿ.[33] ಅಲ್ಲಾಹನು ಶುದ್ಧಗೊಳಿಸಲು ಇಚ್ಛಿಸದಿರುವುದು ಇಂತಹವರ ಹೃದಯಗಳನ್ನೇ. ಇವರಿಗೆ ಇಹಲೋಕದಲ್ಲಿ ಅವಮಾನ ಮತ್ತು ಪರಲೋಕದಲ್ಲಿ ಘೋರ ಶಿಕ್ಷೆ ಕಾದಿದೆ.

يَا أَيُّهَا الرَّسُولُ لَا يَحْزُنْكَ الَّذِينَ يُسَارِعُونَ
فِي الْكُفْرِ مِنَ الَّذِينَ قَالُوا آمَنَّا بِأَفْوَاهِهِمْ
وَلَمْ تُؤْمِنْ قُلُوبُهُمْ ۛ وَمِنَ الَّذِينَ هَادُوا ۛ
سَمَّاعُونَ لِلْكَذِبِ سَمَّاعُونَ لِقَوْمٍ آخَرِينَ
لَمْ يَأْتُوكَ ۖ يُحَرِّفُونَ الْكَلِمَ مِنْ
بَعْدِ مَوَاضِعِهِ ۖ يَقُولُونَ إِنْ أُوتِيتُمْ هَٰذَا
فَخُذُوهُ وَإِنْ لَمْ تُؤْتَوْهُ فَاحْذَرُوا ۚ وَمَنْ
يُرِدِ اللَّهُ فِتْنَتَهُ فَلَنْ تَمْلِكَ لَهُ مِنَ اللَّهِ
شَيْئًا ۚ أُولَٰئِكَ الَّذِينَ لَمْ يُرِدِ اللَّهُ أَنْ
يُطَهِّرَ قُلُوبَهُمْ ۚ لَهُمْ فِي الدُّنْيَا خِزْيٌ ۖ
وَلَهُمْ فِي الْآخِرَةِ عَذَابٌ عَظِيمٌ ﴿٤١﴾

42. ಇವರು ಸುಳ್ಳನ್ನು ಆಲಿಸುವವರು ಮತ್ತು 'ನಿಷೇಧಿತ' ಸಂಪತ್ತನ್ನು ಭಕ್ಷಿಸುವವರಾಗಿದ್ದಾರೆ. ಆದುದರಿಂದ ಇವರು ನಿಮ್ಮ ಮುಂದೆ (ತಮ್ಮ ವ್ಯಾಜ್ಯಗಳೊಂದಿಗೆ) ಬಂದರೆ, ನಿಮಗಿಷ್ಟವಿದ್ದರೆ ಅವು ಗಳನ್ನು ಇತ್ಯರ್ಥಪಡಿಸುವ ಇಲ್ಲವೆ ನಿರಾಕರಿಸುವ ಅಧಿಕಾರವನ್ನು

سَمَّاعُونَ لِلْكَذِبِ أَكَّالُونَ لِلسُّحْتِ ۚ
فَإِنْ جَاءُوكَ فَاحْكُمْ بَيْنَهُمْ أَوْ أَعْرِضْ
عَنْهُمْ ۖ وَإِنْ تُعْرِضْ عَنْهُمْ فَلَنْ يَضُرُّوكَ

32. ಅರ್ಥಾತ್- ನಾವು ಆದೇಶಿಸುತ್ತಿರುವುದನ್ನೇ ಪ್ರವಾದಿವರ್ಯರೂ(ಸ) ಆದೇಶಿಸಿದರೆ ಅದನ್ನು ಸ್ವೀಕರಿಸಿರಿ. ಅನ್ಯಥಾ ಅದನ್ನು ನಿರಾಕರಿಸಿರಿ ಎಂದು ಅವರು ಅಜ್ಞಾನ ಜನರೊಡನೆ ಹೇಳುತ್ತಾರೆ.

33. ಅಲ್ಲಾಹನು ಯಾರನ್ನಾದರೂ ಗೊಂದಲಕ್ಕೀಡು ಮಾಡುವುದೆಂದರೆ ಯಾರಲ್ಲಾದರೂ ಕೆಟ್ಟ ಆಸಕ್ತಿಗಳು ಚಿಗುರೊಡೆಯುತ್ತಿರುವುದನ್ನು ಕಂಡು ಅಲ್ಲಾಹನು ಅವನ ಮುಂದೆ ನಿರಂತರ ಅವನನ್ನು ಪರೀಕ್ಷೆಗೆ ಗುರಿಪಡಿಸುವಂತಹ ಅವಕಾಶಗಳನ್ನು ತರುವುದಾಗಿದೆ. ಅವನು ಕೆಡುಕಿನ ಕಡೆಗೆ ಇನ್ನೂ ಸಂಪೂರ್ಣವಾಗಿ ವಾಲಿರದಿದ್ದರೆ ಇಂತಹ ಪರೀಕ್ಷೆಗಳ ವೇಳೆ ತನ್ನನ್ನು ಸ್ತಿಮಿತಕ್ಕೆ ತಂದುಕೊಳ್ಳುತ್ತಾನೆ. ಅವನಲ್ಲಿರುವ ಕೆಡುಕನ್ನು ಎದುರಿಸಬಲ್ಲ ಒಳಿತಿನ ಪ್ರೇರಕಶಕ್ತಿಗಳು ಪುಟಿದೇಳುತ್ತವೆ. ಆದರೆ ಅವನು ಸಂಪೂರ್ಣವಾಗಿ ಕೆಡುಕಿನ ಕಡೆಗೆ ವಾಲಿದ್ದರೆ, ಅವನ ಒಳಿತಿನ ಪ್ರೇರಣೆ ಕೆಡುಕಿನ ಪ್ರೇರಣೆಯ ಎದುರು ಒಳಗೊಳಗೇ ಸೋಲೊಪ್ಪಿಕೊಂಡಿದ್ದರೆ ತನ್ನ ಪರೀಕ್ಷೆಯ ಘಳಿಗೆಯಲ್ಲಿ ಅವನು ಕೆಡುಕಿನ ಮುಷ್ಟಿಯಲ್ಲಿ ಸಿಲುಕುತ್ತಾ ಹೋಗುತ್ತಾನೆ. ಇದು ವ್ಯಕ್ತಿಯನ್ನು ಅಲ್ಲಾಹನು ಗೊಂದಲಕ್ಕೀಡು ಮಾಡುವ ರೀತಿಯಾಗಿದೆ. ಅದರಿಂದ ಮನುಷ್ಯನನ್ನು ಸುರಕ್ಷಿತವಾಗಿರಿಸಲು ಅವನ ಯಾವ ಹಿತೈಷಿಗೂ ಸಾಧ್ಯವಾಗುವುದಿಲ್ಲ.

ನಿಮಗೆ ಕೊಡಲಾಗುತ್ತದೆ. ನೀವು ನಿರಾಕರಿಸಿದರೆ ಇವರು ನಿಮಗೆ ಯಾವ ಕೇಡನ್ನೂ ಉಂಟು ಮಾಡಲಾರರು ಮತ್ತು ನೀವು ತೀರ್ಪು ನೀಡುವುದಿದ್ದರೆ, ಸರಿಯಾಗಿ ನ್ಯಾಯಪೂರ್ವಕವಾಗಿ ತೀರ್ಪು ನೀಡಿರಿ. ಅಲ್ಲಾಹನು ನ್ಯಾಯಪರಿಪಾಲಕರನ್ನು ಮೆಚ್ಚುತ್ತಾನೆ.[34]

شَيْـًٔا ۚ وَإِنْ حَكَمْتَ فَاحْكُمْ بَيْنَهُمْ
بِالْقِسْطِ ۚ إِنَّ اللَّهَ يُحِبُّ الْمُقْسِطِينَ ﴿٤٢﴾

43. ಅಲ್ಲಾಹನ ಆಜ್ಞೆ ಬರೆದಿರುವ 'ತೌರಾತ್' ಇವರ ಬಳಿಯಲ್ಲಿದ್ದೂ ಇವರು ಅದರಿಂದ ಹಿಂಜರಿಯುತ್ತಿರುವಾಗ ನಿಮ್ಮನ್ನು ಮಧ್ಯಸ್ಥನನ್ನಾಗಿ ಮಾಡುವುದು ಹೇಗೆ? ವಾಸ್ತವದಲ್ಲಿ ಇವರು ವಿಶ್ವಾಸವನ್ನೇ ಇರಿಸುವುದಿಲ್ಲ.

وَكَيْفَ يُحَكِّمُونَكَ وَعِنْدَهُمُ التَّوْرَاةُ
فِيهَا حُكْمُ اللَّهِ ثُمَّ يَتَوَلَّوْنَ مِنْ بَعْدِ
ذَٰلِكَ ۚ وَمَا أُولَٰئِكَ بِالْمُؤْمِنِينَ ﴿٤٣﴾ ع ٦ ١٠

44. ನಾವು 'ತೌರಾತ'ನ್ನು ಅವತೀರ್ಣಗೊಳಿಸಿದ್ದೆವು. ಅದರಲ್ಲಿ ಮಾರ್ಗದರ್ಶನ ಮತ್ತು ಪ್ರಕಾಶವಿತ್ತು. ಮುಸ್ಲಿಮರಾಗಿದ್ದ (ಅಲ್ಲಾಹನ ಆಜ್ಞಾನುಸಾರಿಗಳಾಗಿದ್ದ) ಎಲ್ಲ ಪ್ರವಾದಿಗಳೂ ಅದರ ಪ್ರಕಾರವೇ ಈ ಯಹೂದಿಗಳ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸುತ್ತಿದ್ದರು ಮತ್ತು ಇದೇ ರೀತಿಯಲ್ಲಿ ರಬ್ಬಾನಿಗಳೂ ಅಹ್‌ಬಾರರೂ[35] (ಇದರ ಆಧಾರ ಪ್ರಕಾರವೇ ತೀರ್ಪು ನೀಡುತ್ತಿದ್ದರು). ಏಕೆಂದರೆ ಅವರನ್ನು ದೇವಗ್ರಂಥದ ರಕ್ಷಣೆಯ ಹೊಣೆಗಾರರನ್ನಾಗಿ ಮಾಡಲಾಗಿತ್ತು. ಅವರು ಅದಕ್ಕೆ ಸಾಕ್ಷಿಗಳಾಗಿದ್ದರು. ಆದುದರಿಂದ (ಓ ಯಹೂದಿ ವರ್ಗದವರೇ) ನೀವು ಜನರನ್ನು ಭಯಪಡಬೇಡಿರಿ, ನನ್ನನ್ನು ಭಯಪಡಿರಿ ಮತ್ತು ನನ್ನ 'ಸೂಕ್ತ'ಗಳನ್ನು ಅಲ್ಪ ಪ್ರತಿಫಲ ಪಡೆದು ಮಾರಾಟ ಮಾಡುವುದನ್ನು ಬಿಟ್ಟುಬಿಡಿರಿ. ಅಲ್ಲಾಹನು ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಮಾಡದವರೇ ಸತ್ಯನಿಷೇಧಿಗಳು.

إِنَّا أَنْزَلْنَا التَّوْرَاةَ فِيهَا هُدًى وَنُورٌ ۚ
يَحْكُمُ بِهَا النَّبِيُّونَ الَّذِينَ أَسْلَمُوا
لِلَّذِينَ هَادُوا وَالرَّبَّانِيُّونَ وَالْأَحْبَارُ
بِمَا اسْتُحْفِظُوا مِنْ كِتَابِ اللَّهِ وَكَانُوا
عَلَيْهِ شُهَدَاءَ ۚ فَلَا تَخْشَوُا النَّاسَ
وَاخْشَوْنِ وَلَا تَشْتَرُوا بِآيَاتِي ثَمَنًا
قَلِيلًا ۚ وَمَنْ لَمْ يَحْكُمْ بِمَا أَنْزَلَ
اللَّهُ فَأُولَٰئِكَ هُمُ الْكَافِرُونَ ﴿٤٤﴾

45. ಜೀವಕ್ಕೆ ಬದಲು ಜೀವ, ಕಣ್ಣಿಗೆ ಬದಲು ಕಣ್ಣು, ಮೂಗಿಗೆ ಬದಲು ಮೂಗು, ಕಿವಿಗೆ ಬದಲು ಕಿವಿ, ಹಲ್ಲಿಗೆ ಬದಲು ಹಲ್ಲು ಮತ್ತು ಎಲ್ಲ ಗಾಯಗಳಿಗೆ ಸರಿ ಸಮಾನ ಪ್ರತೀಕಾರವೆಂದು ಯಹೂದಿಯರಿಗೆ ನಾವು ತೌರಾತಿನಲ್ಲಿ ಆದೇಶಿಸಿದ್ದೆವು. ಯಾರಾದರೂ ಪ್ರತೀಕಾರವನ್ನು 'ದಾನ' ಮಾಡಿದರೆ ಅದು ಅವನ ಪಾಲಿಗೆ

وَكَتَبْنَا عَلَيْهِمْ فِيهَا أَنَّ النَّفْسَ بِالنَّفْسِ
وَالْعَيْنَ بِالْعَيْنِ وَالْأَنْفَ بِالْأَنْفِ
وَالْأُذُنَ بِالْأُذُنِ وَالسِّنَّ بِالسِّنِّ
وَالْجُرُوحَ قِصَاصٌ ۚ فَمَنْ تَصَدَّقَ بِهِ

34. ಯಹೂದಿಯರು ಆ ತನಕ ಇಸ್ಲಾಮೀ ಸರ್ಕಾರದ ಅಧಿಕೃತ ಪ್ರಜೆಗಳಾಗಿ ಮಾರ್ಪಟ್ಟಿರಲಿಲ್ಲ. ಇಸ್ಲಾಮೀ ಸಾಮ್ರಾಜ್ಯದೊಂದಿಗೆ ಅವರ ಸಂಬಂಧ ಒಪ್ಪಂದಬದ್ಧವಾಗಿತ್ತು. ಆದ್ದರಿಂದ ಪ್ರವಾದಿವರ್ಯರ(ಸ) ನ್ಯಾಯಾಲಯದ ಮೊರೆಹೋಗುವ ಬದ್ಧತೆ ಅವರಿಗಿರಲಿಲ್ಲ. ಆದರೆ ತಮ್ಮ ಧಾರ್ಮಿಕ ನಿಯಮಕ್ಕೆ ಅನುಗುಣವಾದ ತೀರ್ಮಾನವನ್ನು ಬಯಸದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅವರು ಪ್ರವಾದಿವರ್ಯರ(ಸ) ಬಳಿಗೆ ಬರುತ್ತಿದ್ದರು. ಪ್ರವಾದಿವರ್ಯರ(ಸ) ಶರೀಅತ್‌ನಲ್ಲಿ ತಮಗೆ ಬೇರೆ ವಿಧಿ ಇರಬಹುದು. ಆ ಮೂಲಕ ತಮ್ಮ ಧಾರ್ಮಿಕ ವಿಧಿಯನ್ನು ಪಾಲಿಸುವುದರಿಂದ ಮುಕ್ತವಾಗಬಹುದು ಎಂಬುದು ಅವರ ಉದ್ದೇಶವಾಗಿರುತ್ತಿತ್ತು.

35. 'ರಬ್ಬಾನಿ' ಎಂದರೆ ಧಾರ್ಮಿಕ ವಿದ್ವಾಂಸರು, 'ಅಹ್ಬಾರ್' ಎಂದರೆ ಕರ್ಮಶಾಸ್ತ್ರಜ್ಞರು.

ಪ್ರಾಯಶ್ಚಿತ್ತವಾಗುವುದು. ಅಲ್ಲಾಹನಿಂದ ಅವತೀರ್ಣಗೊಂಡ ಕಾನೂನಿನ ಪ್ರಕಾರ ತೀರ್ಮಾನ ಮಾಡದವರೇ ಅಕ್ರಮಿಗಳು.

فَهُوَ كَفَّارَةٌ لَّهُ ۚ وَمَن لَّمْ يَحْكُم بِمَا
أَنزَلَ اللَّهُ فَأُولَٰئِكَ هُمُ الظَّالِمُونَ ﴿٤٥﴾

46. ಮುಂದೆ ನಾವು ಆ ಪ್ರವಾದಿಗಳ ತರುವಾಯ 'ಮರ್ಯಮರ' ಪುತ್ರ 'ಈಸಾ'ರನ್ನು ರವಾನಿಸಿದೆವು. ಅವರು ತೌರಾತಿನೊಳಗಿರುವುದರ ಪೈಕಿ ತಮ್ಮ ಮುಂದೆ ಇದ್ದುದನ್ನು ದೃಢಪಡಿಸುವವರಾಗಿದ್ದರು. ನಾವು ಅವರಿಗೆ ಇಂಜೀಲನ್ನು ನೀಡಿದೆವು. ಅದರಲ್ಲಿ ಸನ್ಮಾರ್ಗ ದರ್ಶನ ಮತ್ತು ಪ್ರಕಾಶವಿತ್ತು. ಅದು ಸಹ ತೌರಾತಿನೊಳಗಿರುವುದರ ಪೈಕಿ ಆಗ ಇದ್ದುದನ್ನು ದೃಢಪಡಿಸುವಂತಹದ್ದಾಗಿತ್ತು ಮತ್ತು ಅದು ದೇವಭಯವುಳ್ಳವರಿಗೆ ಸಾದ್ಯಂತ ಮಾರ್ಗದರ್ಶನ ಮತ್ತು ಉಪದೇಶವಾಗಿತ್ತು.

وَقَفَّيْنَا عَلَىٰ آثَارِهِم بِعِيسَى ابْنِ
مَرْيَمَ مُصَدِّقًا لِّمَا بَيْنَ يَدَيْهِ مِنَ
التَّوْرَاةِ ۖ وَآتَيْنَاهُ الْإِنجِيلَ فِيهِ
هُدًى وَنُورٌ وَمُصَدِّقًا لِّمَا بَيْنَ
يَدَيْهِ مِنَ التَّوْرَاةِ وَهُدًى وَ
مَوْعِظَةً لِّلْمُتَّقِينَ ﴿٤٦﴾

47. ಇಂಜೀಲಿನವರು, ಅಲ್ಲಾಹನು ಅದರಲ್ಲಿ ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಕೈಗೊಳ್ಳಬೇಕೆಂದು ನಮ್ಮ ಅಪ್ಪಣೆ ಇತ್ತು. ಅಲ್ಲಾಹನು ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಕೈಗೊಳ್ಳದವರೇ ಕರ್ಮಭ್ರಷ್ಟರು.[36]

وَلْيَحْكُمْ أَهْلُ الْإِنجِيلِ بِمَا أَنزَلَ
اللَّهُ فِيهِ ۚ وَمَن لَّمْ يَحْكُم بِمَا أَنزَلَ
اللَّهُ فَأُولَٰئِكَ هُمُ الْفَاسِقُونَ ﴿٤٧﴾

48. ಓ ಪೈಗಂಬರರೇ, ನಾವು ಈ ಗ್ರಂಥವನ್ನು ನಿಮಗೆ ಕಳುಹಿಸಿದೆವು. ಇದು ಸತ್ಯದೊಂದಿಗೆ ಬಂದಿದೆ ಮತ್ತು 'ಅಲ್ ಕಿತಾಬ್'ನ ಪೈಕಿ ತನ್ನ ಮುಂದಿರುವುದನ್ನೆಲ್ಲ ದೃಢಪಡಿಸುವಂತಹದೂ ಅದರ ಸಂರಕ್ಷಕವೂ ಆಗಿರುತ್ತದೆ.[37] ಆದುದರಿಂದ ನೀವು ಅಲ್ಲಾಹನಿಂದ

وَأَنزَلْنَا إِلَيْكَ الْكِتَابَ بِالْحَقِّ مُصَدِّقًا
لِّمَا بَيْنَ يَدَيْهِ مِنَ الْكِتَابِ وَمُهَيْمِنًا
عَلَيْهِ ۖ فَاحْكُم بَيْنَهُم بِمَا أَنزَلَ اللَّهُ ۖ وَلَا

36. ಇಲ್ಲಿ ದೇವನಿಂದ ಅವತೀರ್ಣಗೊಂಡ ಕಾನೂನಿಗೆ ಅನುಗುಣವಾಗಿ ತೀರ್ಮಾನಿಸದ ಜನರಿಗೆ ಸಂಬಂಧಿಸಿದಂತೆ ಅಲ್ಲಾಹನು ಮೂರು ಆದೇಶಗಳನ್ನು ನೀಡಿದ್ದಾನೆ.

1. ಅವರು ಸತ್ಯನಿಷೇಧಿಗಳಾಗಿದ್ದಾರೆ.
2. ಅವರು ಅಕ್ರಮಿಗಳಾಗಿದ್ದಾರೆ.
3. ಅವರು ಕರ್ಮಭ್ರಷ್ಟರಾಗಿದ್ದಾರೆ. ಅಲ್ಲಾಹನ ಆದೇಶ ಸರಿಯಾದುದಲ್ಲ, ಬದಲಾಗಿ ತನ್ನ ಅಥವಾ ಇತರ ಮಾನವರ ಆದೇಶವೇ ಸರಿಯಾದುದೆಂಬ ಭಾವನೆಯಿಂದ ದೇವಾದೇಶಕ್ಕೆ ವಿರುದ್ಧವಾದ ತೀರ್ಮಾನ ಮಾಡುವವನು ಅಪ್ಪಟ ಸತ್ಯನಿಷೇಧಿ, ಅಕ್ರಮಿ ಮತ್ತು ಧರ್ಮಭ್ರಷ್ಟನಾಗಿದ್ದಾನೆ. ದೇವಾದೇಶವೇ ಸರಿಯಾದುದೆಂದು ವಿಶ್ವಾಸವಿರಿಸುವ ಆದರೆ ವ್ಯವಹಾರದಲ್ಲಿ ಅದಕ್ಕೆ ವಿರುದ್ಧವಾದ ತೀರ್ಮಾನ ಕೈಗೊಳ್ಳುವವನು ಧರ್ಮಭ್ರಷ್ಟನಲ್ಲ. ಆದರೆ ಅವನು ತನ್ನ ವಿಶ್ವಾಸವನ್ನು ಸತ್ಯನಿಷೇಧ, ಅಕ್ರಮ ಮತ್ತು ಕರ್ಮಭ್ರಷ್ಟತೆಯಿಂದ ಕಲಸುಮೇಲೋಗರ ಗೊಳಿಸುತ್ತಿದ್ದಾನೆ. ಹಾಗೆಯೇ ತನ್ನೆಲ್ಲಾ ವ್ಯವಹಾರಗಳಲ್ಲಿ ದೇವಾದೇಶಕ್ಕೆ ವಿರುದ್ಧವಾಗಿ ವರ್ತಿಸುವವನು ಎಲ್ಲಾ ವ್ಯವಹಾರಗಳಲ್ಲಿ ಸತ್ಯನಿಷೇಧಿ, ಅಕ್ರಮಿ ಮತ್ತು ಕರ್ಮಭ್ರಷ್ಟನಾಗಿದ್ದಾನೆ. ಕೆಲವು ವ್ಯವಹಾರಗಳಲ್ಲಿ ದೇವಾದೇಶಗಳಿಗೆ ವಿಧೇಯನೂ ಕೆಲವದರಲ್ಲಿ ಅವಿಧೇಯನೂ ಆಗಿದ್ದರೆ ವಿಧೇಯತೆ ಮತ್ತು ಅವಿಧೇಯತೆಯನ್ನು ಅವನು ಯಾವ ಪ್ರಮಾಣದಲ್ಲಿ ಮಿಶ್ರಗೊಳಿಸಿದ್ದಾನೋ ಅದಕ್ಕನುಗುಣವಾಗಿ ಅವನಲ್ಲಿ ಈಮಾನ್, ಇಸ್ಲಾಮ್, ಸತ್ಯನಿಷೇಧ, ಅಕ್ರಮ ಮತ್ತು ಕರ್ಮಭ್ರಷ್ಟತೆ ಕಲಸುಮೇಲೋಗರಗೊಂಡಿರುತ್ತದೆ.

37. ಇಲ್ಲಿ ಪ್ರಮುಖ ವಾಸ್ತವಿಕತೆಯೊಂದರ ಕಡೆಗೆ ಬೊಟ್ಟು ಮಾಡಲಾಗಿದೆ. ಹಿಂದಿನ ಗ್ರಂಥಗಳ ಪೈಕಿ ಯಥಾಸ್ಥಿತಿಯಲ್ಲಿರುವವುಗಳನ್ನು ಕುರ್‌ಆನ್ ದೃಢೀಕರಿಸುತ್ತದೆ ಎಂದೂ ಈ ವಿಷಯವನ್ನು ಪ್ರಸ್ತಾಪಿಸಬಹುದಾಗಿತ್ತು. ಆದರೆ ಅಲ್ಲಾಹನು 'ಹಿಂದಿನ ಗ್ರಂಥಗಳು' ಎಂಬುದರ ಬದಲಿಗೆ 'ಅಲ್ ಕಿತಾಬ್'(The Book) ಎಂಬ ಪದವನ್ನು ಪ್ರಯೋಗಿಸಿದ್ದಾನೆ. ಇದರಿಂದ ಕುರ್‌ಆನ್ ಮತ್ತು ವಿವಿಧ

ಅವತೀರ್ಣಗೊಂಡ ಕಾನೂನಿನ ಪ್ರಕಾರ ಜನರ ವ್ಯವಹಾರಗಳನ್ನು ತೀರ್ಮಾನಿಸಿರಿ ಮತ್ತು ನೀವು ನಿಮ್ಮ ಬಳಿಗೆ ಬಂದಿರುವ ಸತ್ಯದಿಂದ ವಿಮುಖರಾಗಿ, ಅವರ ಇಚ್ಛೆಗಳನ್ನನುಸರಿಸಬೇಡಿರಿ. - ನಾವು ನಿಮ್ಮ (ಮಾನವರ) ಪೈಕಿ ಪ್ರತಿಯೊಬ್ಬನಿಗೆ ಒಂದು ಧರ್ಮಶಾಸ್ತ್ರ ಮತ್ತು ಕರ್ಮಮಾರ್ಗವನ್ನು ನಿಶ್ಚಯಿಸಿದೆವು. ನಿಮ್ಮ ದೇವನು ಇಚ್ಛಿಸುತ್ತಿದ್ದರೆ ನಿಮ್ಮೆಲ್ಲರನ್ನು ಒಂದೇ 'ಸಮುದಾಯ'ವನ್ನಾಗಿಯೂ ಮಾಡಲು ಸಾಧ್ಯವಿತ್ತು. ಆದರೆ ಅವನು ನಿಮಗೆ ಏನು ನೀಡಿರುವನೋ ಅದರಲ್ಲಿ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಹೀಗೆ ಮಾಡಿದನು. ಆದುದರಿಂದ ಸತ್ಕರ್ಮಗಳಲ್ಲಿ ಪರಸ್ಪರ ಸ್ಪರ್ಧಿಸಲು ಪ್ರಯತ್ನಿಸಿರಿ. ಕೊನೆಗಂತು ನಿಮಗೆಲ್ಲರಿಗೂ ಅಲ್ಲಾಹನ ಕಡೆಗೆ ಮರಳಿ ಹೋಗಲಿಕ್ಕಿದೆ. ಆಗ ನೀವು ಭಿನ್ನಾಭಿಪ್ರಾಯವಿರಿಸಿ ಕೊಳ್ಳುತ್ತಿರುವ ವಿಷಯಗಳ ವಸ್ತುಸ್ಥಿತಿಯನ್ನು ಅವನು ನಿಮಗೆ ತೋರಿಸಿ ಕೊಡುವನು.

تَتَّبِعۡ اَهۡوَآءَهُمۡ عَمَّا جَآءَكَ مِنَ الۡحَقِّ ؕ لِكُلٍّ جَعَلۡنَا مِنۡكُمۡ شِرۡعَةً وَّمِنۡهَاجًا ؕ وَلَوۡ شَآءَ اللّٰهُ لَجَعَلَكُمۡ اُمَّةً وَّاحِدَةً وَّلٰـكِنۡ لِّيَبۡلُوَكُمۡ فِىۡ مَاۤ اٰتٰٮكُمۡ فَاسۡتَبِقُوا الۡخَيۡرٰتِ ؕ اِلَى اللّٰهِ مَرۡجِعُكُمۡ جَمِيۡعًا فَيُنَبِّئُكُمۡ بِمَا كُنۡتُمۡ فِيۡهِ تَخۡتَلِفُوۡنَ ۙ ۴۸

49. ಆದುದರಿಂದ ಓ ಪೈಗಂಬರರೇ, ನೀವು ಅಲ್ಲಾಹನಿಂದ ಅವತೀರ್ಣಗೊಂಡ ಕಾನೂನಿನ ಪ್ರಕಾರ ಇವರ ವ್ಯವಹಾರಗಳ ತೀರ್ಮಾನ ಮಾಡಿರಿ ಮತ್ತು ಇವರ ಅಭೀಷ್ಟಗಳನ್ನು ಅನುಸರಿಸಬೇಡಿರಿ. ಇವರು ನಿಮ್ಮನ್ನು 'ಗೊಂದಲ'ದಲ್ಲಿ ಸಿಲುಕಿಸಿ, ಅಲ್ಲಾಹನು ನಿಮ್ಮ ಮೇಲೆ ಅವತೀರ್ಣಗೊಳಿಸಿದ ಈ ಮಾರ್ಗದರ್ಶನದಿಂದ ಕಿಂಚಿತ್ತೂ ವಿಮುಖಗೊಳಿಸದಂತೆ ಬಹಳ ಜಾಗರೂಕರಾಗಿರಿ. ಇವರು ಇದನ್ನು ಸ್ವೀಕರಿಸದಿದ್ದರೆ ಅಲ್ಲಾಹನು ಇವರ ಕೆಲವು ಅಪರಾಧಗಳ ನಿಮಿತ್ತ ಇವರನ್ನು ಯಾತನೆಗೆ ಒಳಪಡಿಸಲು ತೀರ್ಮಾನಿಸಿಯೇ ಬಿಟ್ಟಿರುತ್ತಾನೆಂಬುದನ್ನು ತಿಳಿದಿರಿ. ವಾಸ್ತವದಲ್ಲಿ ಇವರಲ್ಲಿ ಹೆಚ್ಚಿನವರು 'ಕರ್ಮಭ್ರಷ್ಟ'ರಾಗಿರುತ್ತಾರೆ.

وَاَنِ احۡكُمۡ بَيۡنَهُمۡ بِمَاۤ اَنۡزَلَ اللّٰهُ وَلَا تَتَّبِعۡ اَهۡوَآءَهُمۡ وَاحۡذَرۡهُمۡ اَنۡ يَّفۡتِنُوۡكَ عَنۡۢ بَعۡضِ مَاۤ اَنۡزَلَ اللّٰهُ اِلَيۡكَ ؕ فَاِنۡ تَوَلَّوۡا فَاعۡلَمۡ اَنَّمَا يُرِيۡدُ اللّٰهُ اَنۡ يُّصِيۡبَهُمۡ بِبَعۡضِ ذُنُوۡبِهِمۡ ؕ وَاِنَّ كَثِيۡرًا مِّنَ النَّاسِ لَفٰسِقُوۡنَ ۴۹

50. (ಇವರು ದೇವಶಾಸನವನ್ನು ನಿರಾಕರಿಸುತ್ತಿದ್ದಾರೆ) ಇನ್ನೇನು ಇವರು ಅಜ್ಞಾನದ[38] ತೀರ್ಮಾನವನ್ನು ಬಯಸುತ್ತಾರೆಯೇ? ವಸ್ತುತಃ

اَفَحُكۡمَ الۡجَاهِلِيَّةِ يَبۡغُوۡنَ ؕ وَمَنۡ اَحۡسَنُ مِنَ اللّٰهِ حُكۡمًا لِّقَوۡمٍ يُّوۡقِنُوۡنَ ۵۰

ಕಾಲ ಹಾಗೂ ಭಾಷೆಗಳಲ್ಲಿ ಅಲ್ಲಾಹನ ವತಿಯಿಂದ ಅವತೀರ್ಣಗೊಂಡ ಗ್ರಂಥಗಳೆಲ್ಲವೂ ಮೂಲತಃ ಒಂದೇ ಗ್ರಂಥವಾಗಿದೆ ಎಂಬ ರಹಸ್ಯ ಬಯಲಾಗುತ್ತದೆ. ಅವುಗಳ ಕರ್ತೃ ಒಬ್ಬನೇ. ಅವುಗಳ ಉದ್ದೇಶ, ಧ್ಯೇಯ ಮತ್ತು ಬೋಧನೆಗಳೆಲ್ಲವೂ ಒಂದೇ ತೆರನಾದುದು. ಮಾನವಕುಲಕ್ಕೆ ಅವುಗಳ ಮೂಲಕ ಒಂದೇ ರೀತಿಯ ಶಿಕ್ಷಣವನ್ನು ಕಲಿಸಲಾಯಿತು. ಅವುಗಳ ನಡುವೆ ವ್ಯತ್ಯಾಸ- ವಾಕ್ಯಗಳಲ್ಲಿ ಮಾತ್ರವಿದೆ. ಬೇರೆ ಬೇರೆ ಅಭಿಸಂಬೋಧಿತರಿಗೆ ಅನುಗುಣವಾಗಿ ವಿಭಿನ್ನ ರೀತಿಯ ವಾಕ್ಯಗಳನ್ನು ಬಳಸಲಾಗಿದೆ. ಕುರ್‌ಆನ್ 'ಅಲ್‌ಕಿತಾಬ್'ನ ಸಂರಕ್ಷಕವಾಗಿದೆ ಎಂದರೆ ಅದು ತನ್ನೊಳಗೆ ಪೂರ್ವದ ದೈವಿಕ ಗ್ರಂಥಗಳಲ್ಲಿ ನೀಡಲಾಗಿರುವ ಸಮಸ್ತ ಬೋಧನೆಗಳನ್ನು ಸುರಕ್ಷಿತವಾಗಿರಿಸಿದೆ ಎಂದಾಗಿದೆ. ಆದ್ದರಿಂದ ಆ ಸದ್ಬೋಧನೆಗಳ ಪೈಕಿ ಈಗ ಯಾವುದೂ ಅಳಿದು ಹೋಗುವಂತಿಲ್ಲ.

38. 'ಅಜ್ಞಾನ' ಎಂಬ ಪದವನ್ನು ಇಸ್ಲಾಮಿಗೆ ವಿರುದ್ಧವಾಗಿ ಉಪಯೋಗಿಸಲಾಗುತ್ತದೆ.ಇಸ್ಲಾಮ್ ಸಾರಸಂಪೂರ್ಣವಾಗಿ ಜ್ಞಾನದ ಪದ್ಧತಿಯಾಗಿದೆ. ಏಕೆಂದರೆ ಅದು ಸಕಲ ಸತ್ಯಗಳನ್ನು ಅರಿತಿರುವ ಸರ್ವಜ್ಞನ ಮಾರ್ಗದರ್ಶನದಿಂದ ಕೂಡಿದೆ. ಇದಕ್ಕೆ ವಿರುದ್ಧವಾಗಿ ಇಸ್ಲಾಮೇತರ

ಅಲ್ಲಾಹನ ಮೇಲೆ ದೃಢವಿಶ್ವಾಸವಿರಿಸುವವರ ದೃಷ್ಟಿಯಲ್ಲಿ ಅಲ್ಲಾಹನ ತೀರ್ಮಾನಕ್ಕಿಂತ ಶ್ರೇಷ್ಠ ತೀರ್ಮಾನ ಮಾಡುವವನು ಇನ್ನಾರಿರಬಹುದು!

51. ಓ ಸತ್ಯವಿಶ್ವಾಸಿಗಳೇ, ನೀವು ಯಹೂದಿಯರನ್ನೂ ಕ್ರೈಸ್ತರನ್ನೂ ನಿಮ್ಮ ಆಪ್ತರನ್ನಾಗಿ ಮಾಡಿಕೊಳ್ಳಬೇಡಿರಿ. ಇವರು ಪರಸ್ಪರ ಆಪ್ತರು. ನಿಮ್ಮಲ್ಲಾರಾದರೂ ಅವರನ್ನು ಆಪ್ತರನ್ನಾಗಿ ಮಾಡಿ ಕೊಂಡರೆ ಅವನೂ ಅವರೊಂದಿಗೇ ಸೇರಿದವನಾಗಿರುತ್ತಾನೆ. ವಾಸ್ತವದಲ್ಲಿ ಅಲ್ಲಾಹನು ಅಕ್ರಮಿಗಳಿಗೆ ಮಾರ್ಗದರ್ಶನ ಮಾಡುವುದಿಲ್ಲ.

يٰٓاَيُّهَا الَّذِيْنَ اٰمَنُوْا لَا تَتَّخِذُوا الْيَهُوْدَ
وَالنَّصٰرٰٓى اَوْلِيَآءَ ۘ بَعْضُهُمْ اَوْلِيَآءُ
بَعْضٍ ؕ وَمَنْ يَّتَوَلَّهُمْ مِّنْكُمْ فَاِنَّهٗ مِنْهُمْ ؕ
اِنَّ اللّٰهَ لَا يَهْدِى الْقَوْمَ الظّٰلِمِيْنَ ﴿٥١﴾

52. ಹೃದಯಗಳಲ್ಲಿ ಕಾಪಟ್ಯದ ರೋಗವುಳ್ಳವರು ಅವರಲ್ಲೇ ಓಡಾಡಿ ಕೊಂಡಿರುವುದನ್ನು ನೀವು ಕಾಣುತ್ತೀರಿ. ಅವರು "ನಾವೇನಾದರೂ ಸಂಕಷ್ಟಗಳ ಸುಳಿಯಲ್ಲಿ ಸಿಲುಕಿ ಹೋಗುವೆವೋ ಎಂದು ನಮಗೆ ಭಯವಾಗುತ್ತದೆ" ಎನ್ನುತ್ತಾರೆ. ಅಲ್ಲಾಹ್ ನಿಮಗೆ ನಿರ್ಣಾಯಕ ವಿಜಯ ದಯಪಾಲಿಸಿದಾಗ ಅಥವಾ ತನ್ನ ಕಡೆಯಿಂದ ಇನ್ನೇನಾದರೂ ವ್ಯಕ್ತಪಡಿಸಿದಾಗ, ಇವರು ತಮ್ಮ ಹೃದಯದೊಳಗೆ ಬಚ್ಚಿಟ್ಟುಕೊಂಡಿರುವ ಈ ಕಾಪಟ್ಯದ ಬಗ್ಗೆ ಲಜ್ಜಿತರಾಗಲೂ ಬಹುದು.

فَتَرَى الَّذِيْنَ فِيْ قُلُوْبِهِمْ مَّرَضٌ يُّسَارِعُوْنَ
فِيْهِمْ يَقُوْلُوْنَ نَخْشٰٓى اَنْ تُصِيْبَنَا دَآئِرَةٌ ؕ
فَعَسَى اللّٰهُ اَنْ يَّاْتِيَ بِالْفَتْحِ اَوْ اَمْرٍ
مِّنْ عِنْدِهٖ فَيُصْبِحُوْا عَلٰى مَآ اَسَرُّوْا
فِيْٓ اَنْفُسِهِمْ نٰدِمِيْنَ ﴿٥٢﴾

53. ಆಗ, "ಅಲ್ಲಾಹನ ಹೆಸರನ್ನೆತ್ತಿ ದೃಢವಾದ ಪ್ರತಿಜ್ಞೆ ಮಾಡುತ್ತ ನಾವು ನಿಮ್ಮೊಂದಿಗೆ ಇದ್ದೇವೆಂದು ನಮಗೆ ಭರವಸೆ ಕೊಡುತ್ತಿದ್ದವರು ಇವರೇನು?" ಎಂದು ಸತ್ಯವಿಶ್ವಾಸಿಗಳು ಕೇಳುವರು. ಇವರ ಕರ್ಮಗಳೆಲ್ಲ ನಿಷ್ಫಲಗೊಂಡವು ಮತ್ತು ಕೊನೆಗೆ ಇವರು ಪರಾಜಿತರೂ ಆಗಿಬಿಟ್ಟರು.

وَيَقُوْلُ الَّذِيْنَ اٰمَنُوْٓا اَهٰٓؤُلَآءِ الَّذِيْنَ
اَقْسَمُوْا بِاللّٰهِ جَهْدَ اَيْمَانِهِمْ ۙ اِنَّهُمْ
لَمَعَكُمْ ؕ حَبِطَتْ اَعْمَالُهُمْ فَاَصْبَحُوْا خٰسِرِيْنَ ﴿٥٣﴾

54. ಓ ಸತ್ಯವಿಶ್ವಾಸಿಗಳೇ, ನಿಮ್ಮಲ್ಲಾರಾದರೂ ಧರ್ಮದಿಂದ ವಿಮುಖನಾಗುತ್ತಿದ್ದರೆ (ಆಗಲಿ.) ಅಲ್ಲಾಹನ ಪ್ರೀತಿಗೆ ಪಾತ್ರರಾದ ಹಾಗೂ ಅಲ್ಲಾಹನನ್ನು ಪ್ರೀತಿಸುವ ಇನ್ನೊಂದು ಜನವಿಭಾಗವನ್ನು ಅಲ್ಲಾಹನು ಸೃಷ್ಟಿಸುವನು. ಅವರು ಸತ್ಯವಿಶ್ವಾಸಿಗಳೊಂದಿಗೆ

يٰٓاَيُّهَا الَّذِيْنَ اٰمَنُوْا مَنْ يَّرْتَدَّ مِنْكُمْ
عَنْ دِيْنِهٖ فَسَوْفَ يَاْتِي اللّٰهُ بِقَوْمٍ
يُّحِبُّهُمْ وَيُحِبُّوْنَهٗٓ ۙ اَذِلَّةٍ عَلَى

ವ್ಯವಸ್ಥೆಗಳ ಪೈಕಿ ಪ್ರತಿಯೊಂದೂ 'ಅಜ್ಞಾನ'ದ ವ್ಯವಸ್ಥೆಯಾಗಿದೆ. ಅರೇಬಿಯಾದ ಇಸ್ಲಾಮಿಗೆ ಪೂರ್ವದ ಕಾಲವನ್ನು ಅಜ್ಞಾನ ಕಾಲವೆನ್ನಲಾಗಿದೆ. ಏಕೆಂದರೆ ಆ ಕಾಲದಲ್ಲಿ ಜ್ಞಾನದ ಬದಲು ಬರೇ ಮೂಢನಂಬಿಕೆ, ಗುಮಾನಿ ಮತ್ತು ಸ್ವೇಚ್ಛೆಗಳ ಆಧಾರದಲ್ಲಿ ಮಾನವರು ತಮ್ಮ ಪಾಲಿಗೆ ಜೀವನ ವಿಧಾನವನ್ನು ಆಳವಡಿಸಿಕೊಂಡಿದ್ದರು. ಇಂತಹ ಧೋರಣೆಯನ್ನು ಯಾವ ಕಾಲದಲ್ಲಿ ಅನುಸರಿಸಲಾದರೂ ಅದನ್ನು ಅಜ್ಞಾನಜನ್ಯ ಧೋರಣೆಯಂತಲೇ ಕರೆಯಲಾಗುವುದು.

ವಿನಮ್ರರೂ ಸತ್ಯನಿಷೇಧಿಗಳೊಂದಿಗೆ ಕಠೋರರೂ ಆಗಿರುವವರು.[39] ಅವರು ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವರು. ಯಾವನೇ ಖಂಡಿಸುವವನ ಖಂಡನೆಗೆ ಭಯಪಡಲಾರರು. ಇದು ಅಲ್ಲಾಹನ ಮಹಾ ಅನುಗ್ರಹ. ಇದನ್ನು ಅವನು ತನಗಿಷ್ಟ ಬಂದವರಿಗೆ ಪ್ರದಾನ ಮಾಡುತ್ತಾನೆ. ಅಲ್ಲಾಹನು ಅತಿ ವಿಶಾಲ ಸಾಧನಾನುಕೂಲತೆಗಳ ಮಾಲಕನೂ, ಸರ್ವಜ್ಞನೂ ಆಗಿರುತ್ತಾನೆ.

الْمُؤْمِنِيْنَ اَعِزَّةٍ عَلَى الْكٰفِرِيْنَ ز
يُجَاهِدُوْنَ فِيْ سَبِيْلِ اللّٰهِ وَلَا يَخَافُوْنَ
لَوْمَةَ لَآئِمٍ ۚ ذٰلِكَ فَضْلُ اللّٰهِ يُؤْتِيْهِ
مَنْ يَّشَآءُ ۚ وَاللّٰهُ وَاسِعٌ عَلِيْمٌ ﴿٥٤﴾

55. ನಿಮ್ಮ ಆಪ್ತ ಮಿತ್ರರು ವಾಸ್ತವದಲ್ಲಿ ಅಲ್ಲಾಹ್, ಅಲ್ಲಾಹನ ಸಂದೇಶವಾಹಕರು ಮತ್ತು ನಮಾಝನ್ನು ಸಂಸ್ಥಾಪಿಸುವ, ಝಕಾತ್ ಕೊಡುವ ಹಾಗೂ ಅಲ್ಲಾಹನ ಮುಂದೆ ಬಾಗುವ ಸತ್ಯವಿಶ್ವಾಸಿಗಳು ಮಾತ್ರ.

اِنَّمَا وَلِيُّكُمُ اللّٰهُ وَرَسُوْلُهٗ وَالَّذِيْنَ
اٰمَنُوا الَّذِيْنَ يُقِيْمُوْنَ الصَّلٰوةَ وَيُؤْتُوْنَ
الزَّكٰوةَ وَهُمْ رٰكِعُوْنَ ﴿٥٥﴾

56. ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನು ಮತ್ತು ಸತ್ಯವಿಶ್ವಾಸಿಗಳನ್ನು ತನ್ನ ಆಪ್ತ ಮಿತ್ರರನ್ನಾಗಿ ಮಾಡಿಕೊಂಡವನು ಅಲ್ಲಾಹನ ಪಕ್ಷವೇ ವಿಜಯ ಹೊಂದುವ ಪಕ್ಷವೆಂದು ಅರಿತಿರಬೇಕು.

وَمَنْ يَّتَوَلَّ اللّٰهَ وَرَسُوْلَهٗ وَالَّذِيْنَ
اٰمَنُوْا فَاِنَّ حِزْبَ اللّٰهِ هُمُ الْغٰلِبُوْنَ ﴿٥٦﴾

57. ಓ ಸತ್ಯವಿಶ್ವಾಸಿಗಳೇ, ನಿಮ್ಮ ಪೂರ್ವಗಾಮಿ ಗ್ರಂಥದವರ ಪೈಕಿ, ನಿಮ್ಮ ಧರ್ಮವನ್ನು ಅಣಕ ಹಾಗೂ ಹಾಸ್ಯ ವಿನೋದಗಳ ಸಾಧನವನ್ನಾಗಿ ಮಾಡಿಕೊಂಡವರನ್ನೂ ಇತರ 'ಸತ್ಯನಿಷೇಧಿ'ಗಳನ್ನೂ ನಿಮ್ಮ ಗೆಳೆಯ ಹಾಗೂ ಆಪ್ತ ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಡಿರಿ. ನೀವು ಸತ್ಯವಿಶ್ವಾಸಿಗಳಾಗಿದ್ದರೆ ಅಲ್ಲಾಹನನ್ನು ಭಯಪಡಿರಿ.

يٰۤاَيُّهَا الَّذِيْنَ اٰمَنُوْا لَا تَتَّخِذُوا الَّذِيْنَ
اتَّخَذُوْا دِيْنَكُمْ هُزُوًا وَّلَعِبًا مِّنَ الَّذِيْنَ
اُوْتُوا الْكِتٰبَ مِنْ قَبْلِكُمْ وَالْكُفَّارَ
اَوْلِيَآءَ ۚ وَاتَّقُوا اللّٰهَ اِنْ كُنْتُمْ مُّؤْمِنِيْنَ ﴿٥٧﴾

58 ನೀವು ನಮಾಝಿಗಾಗಿ ಕರೆ ನೀಡಿದಾಗ ಅವರು ಅದನ್ನು ಗೇಲಿ ಮಾಡಿ ಆಟವಾಡುತ್ತಾರೆ.[40] ಅವರು ಬುದ್ಧಿಹೀನರಾದುದರಿಂದಲೇ ಹಾಗೆ ಮಾಡುತ್ತಾರೆ.

وَاِذَا نَادَيْتُمْ اِلَى الصَّلٰوةِ اتَّخَذُوْهَا
هُزُوًا وَّلَعِبًا ۚ ذٰلِكَ بِاَنَّهُمْ قَوْمٌ لَّا يَعْقِلُوْنَ ﴿٥٨﴾

39. 'ಸತ್ಯವಿಶ್ವಾಸಿಗಳೊಂದಿಗೆ ವಿನಮ್ರವಾಗಿರುವುದೆಂದರೆ ಒಬ್ಬ ವ್ಯಕ್ತಿ ಸತ್ಯವಿಶ್ವಾಸಿಗಳ ವಿರುದ್ಧ ತನ್ನ ಶಕ್ತಿಯನ್ನು ಎಂದೂ ಉಪಯೋಗಿಸದಿರುವುದು. ಅವನ ಬುದ್ಧಿವಂತಿಕೆ, ಜಾಣ್ಮೆ, ಸಾಮರ್ಥ್ಯ, ಪ್ರಭಾವ, ವರ್ಚಸ್ಸು, ಸಂಪತ್ತು, ದೈಹಿಕ ಬಲ ಇತ್ಯಾದಿಗಳ ಪೈಕಿ ಯಾವುದೂ ಮುಸ್ಲಿಮರ ದಮನ, ಉಪದ್ರವ ಮತ್ತು ವಿನಾಶಕ್ಕಾಗಿ ಉಪಯೋಗಿಸಲ್ಪಡದಿರುವುದು. ಮುಸ್ಲಿಮರು ಸದಾ ಅವನನ್ನು ವಿನಮ್ರ, ಕರುಣಾಳು ಹಿತೈಷಿ ಮತ್ತು ಸಹನಶೀಲನೆಂದೇ ಭಾವಿಸಬೇಕು.

ಸತ್ಯನಿಷೇಧಿಗಳ ಪಾಲಿಗೆ ಕಠೋರವಾಗಿರುವುದೆಂದರೆ - ಸತ್ಯವಿಶ್ವಾಸಿ ತನ್ನ ವಿಶ್ವಾಸದಾರ್ಢ್ಯತೆ, ಧರ್ಮಬದ್ಧತೆ, ಆದರ್ಶಪರತೆ, ಚಾರಿತ್ರ್ಯಬಲ ಮತ್ತು ನಂಬಿಕೆಯ ವೈಶಾಲ್ಯದಿಂದಾಗಿ ಇಸ್ಲಾಮಿನ ಶತ್ರುಗಳ ವಿರುದ್ಧ ಬಂಡೆಯಂತೆ ಸ್ಥಿರವಾಗಿರುವುದು. ಯಾವ ಸಂದರ್ಭದಲ್ಲೂ ಅವನನ್ನು ತನ್ನ ಸ್ಥಾನದಿಂದ ಕದಲಿಸಲು ಸಾಧ್ಯವಾಗದಿರುವುದು. ಅವರು ಅವನನ್ನೆಂದೂ ಮೇಣದಂತೆ ಮೆದು ಮತ್ತು ಕೋಮಲನೆಂದು ಭಾವಿಸಲು ಆಸ್ಪದವಿಲ್ಲದಿರುವುದು. ಅವರಿಗೆ ಅವನನ್ನೆದುರಿಸ ಬೇಕಾಗಿ ಬಂದಾಗಲೆಲ್ಲಾ ಈ ಮಹಾಶಯ ಸಾಯಬಹುದು. ಆದರೆ ಮಾರಲ್ಪಡಲಾರ, ಯಾವ ಒತ್ತಡಕ್ಕೂ ಇವನು ಮಣಿಯಲಾರ ಎಂದೆನಿಸುವುದು.

40. ಅರ್ಥಾತ್- ಅದಾನಿನ ಸ್ವರ ಕೇಳಿ ಅದನ್ನು ಅಣಕಿಸುತ್ತಾರೆ. ಅಪಹಾಸ್ಯಕ್ಕಾಗಿ ಅದರ ಶಬ್ದಗಳನ್ನು ಬದಲಿಸುತ್ತಾರೆ. ಅದನ್ನು ವಿಕೃತಗೊಳಿಸಿ ಗೇಲಿ ಮಾಡುತ್ತಾರೆ.

59. ಅವರೊಡನೆ ಹೇಳಿರಿ, "ಓ ಗ್ರಂಥದವರೇ, ನಾವು ಅಲ್ಲಾಹನ ಮೇಲೆ ಮತ್ತು ನಮ್ಮ ಕಡೆಗೆ ಅವತೀರ್ಣಗೊಂಡ ಹಾಗೂ ನಮಗಿಂತ ಮೊದಲೂ ಅವತೀರ್ಣವಾಗಿದ್ದ ಧಾರ್ಮಿಕ ಶಿಕ್ಷಣದ ಮೇಲೆ ವಿಶ್ವಾಸ ತಾಳಿರುತ್ತೇವೆಂಬುದಕ್ಕಾಗಿ ನೀವು ನಮ್ಮೊಡನೆ ಅಸಂತುಷ್ಟರಾಗಿದ್ದೀರೇ ವಿನಾ ಇನ್ನೇನು? ನಿಮ್ಮಲ್ಲಿ ಹೆಚ್ಚಿನವರು 'ಕರ್ಮಭ್ರಷ್ಟ'ರಾಗಿದ್ದಾರೆ."

قُلْ يٰۤاَهْلَ الْكِتٰبِ هَلْ تَنْقِمُوْنَ مِنَّاۤ اِلَّاۤ
اَنْ اٰمَنَّا بِاللّٰهِ وَمَاۤ اُنْزِلَ اِلَيْنَا وَمَاۤ اُنْزِلَ
مِنْ قَبْلُ ۙ وَاَنَّ اَكْثَرَكُمْ فٰسِقُوْنَ ﴿٥٩﴾

60. ಹೇಳಿರಿ- "ಅಲ್ಲಾಹನ ಬಳಿ 'ಕರ್ಮಭ್ರಷ್ಟ'ರಿಗಿಂತಲೂ ನಿಕೃಷ್ಟವಾದ ಅಂತಿಮ ಗತಿ ಹೊಂದುವವರನ್ನು ತೋರಿಸಿ ಕೊಡಲೇ? ಅಲ್ಲಾಹನ ಶಾಪ ಹಾಗೂ ಕೋಪಕ್ಕೊಳಗಾದವರು, ಕಪಿಗಳಾಗಿಯೂ ಹಂದಿ ಗಳಾಗಿಯೂ ಮಾರ್ಪಡಿಸಲ್ಪಟ್ಟವರು ಮತ್ತು 'ತಾಗೂತ್'ನ ದಾಸ್ಯ ಕೈಗೊಂಡವರು. ಅವರ ಸ್ಥಾನವು ಇನ್ನೂ ಕೆಟ್ಟದಾಗಿರುತ್ತದೆ ಮತ್ತು ಅವರು 'ನೇರಮಾರ್ಗ'ದಿಂದ ಅತಿ ಹೆಚ್ಚು ವ್ಯತಿಚಲಿಸಿ ದವರಾಗಿರುತ್ತಾರೆ.

قُلْ هَلْ اُنَبِّئُكُمْ بِشَرٍّ مِّنْ ذٰلِكَ مَثُوْبَةً
عِنْدَ اللّٰهِ ؕ مَنْ لَّعَنَهُ اللّٰهُ وَغَضِبَ عَلَيْهِ
وَجَعَلَ مِنْهُمُ الْقِرَدَةَ وَالْخَنَازِيْرَ وَعَبَدَ
الطَّاغُوْتَ ؕ اُولٰٓئِكَ شَرٌّ مَّكَانًا وَّاَضَلُّ
عَنْ سَوَآءِ السَّبِيْلِ ﴿٦٠﴾

61. ಅವರು ನಿಮ್ಮ ಬಳಿಗೆ ಬಂದಾಗ, 'ನಾವು ವಿಶ್ವಾಸವಿಟ್ಟೆವು' ಎನ್ನುತ್ತಾರೆ. ವಾಸ್ತವದಲ್ಲಿ ಅವರು ಅವಿಶ್ವಾಸದೊಂದಿಗೇ ಬಂದಿದ್ದರು ಮತ್ತು ಅವಿಶ್ವಾಸದೊಂದಿಗೇ ಮರಳಿ ಹೋದರು. ಅವರು ತಮ್ಮ ಹೃದಯಗಳಲ್ಲಿ ಬಚ್ಚಿಟ್ಟುಕೊಂಡಿರುವುದನ್ನು ಅಲ್ಲಾಹನು ಚೆನ್ನಾಗಿ ಬಲ್ಲನು.

وَاِذَا جَآءُوْكُمْ قَالُوْۤا اٰمَنَّا وَقَدْ دَّخَلُوْا
بِالْكُفْرِ وَهُمْ قَدْ خَرَجُوْا بِهٖ ؕ وَاللّٰهُ
اَعْلَمُ بِمَا كَانُوْا يَكْتُمُوْنَ ﴿٦١﴾

62. ಅವರಲ್ಲಿ ಹೆಚ್ಚಿನವರು ಪಾಪ ಹಾಗೂ ಅಕ್ರಮ, ಅತ್ಯಾಚಾರ ಕಾರ್ಯಗಳಲ್ಲಿ ಶ್ರಮ ಪಡುತ್ತಿರುವುದನ್ನೂ 'ನಿಷಿದ್ಧ' ಸೊತ್ತನ್ನು ಉಣ್ಣುತ್ತಿರುವುದನ್ನೂ ನೀವು ಕಾಣುತ್ತೀರಿ. ಅವರು ಮಾಡುತ್ತಿರುವ ಕೃತ್ಯಗಳು ಅತ್ಯಂತ ನೀಚ.

وَتَرٰى كَثِيْرًا مِّنْهُمْ يُسَارِعُوْنَ فِى الْاِثْمِ
وَالْعُدْوَانِ وَاَكْلِهِمُ السُّحْتَ ؕ لَبِئْسَ
مَا كَانُوْا يَعْمَلُوْنَ ﴿٦٢﴾

63. ಅವರ ವಿದ್ವಾಂಸರೂ ಹಿರಿಯರೂ ಅವರನ್ನು ಪಾಪದ ಮಾತು ಗಳನ್ನಾಡುವುದರಿಂದಲೂ 'ನಿಷಿದ್ಧ' ಭಕ್ಷಣದಿಂದಲೂ ತಡೆಯುವು ದಿಲ್ಲವೇಕೆ? ಅವರು ಸಿದ್ಧಗೊಳಿಸುತ್ತಿರುವ ಜೀವನ ಕೃತ್ಯವು ನಿಜಕ್ಕೂ ಅತ್ಯಂತ ನಿಕೃಷ್ಟ.

لَوْلَا يَنْهٰهُمُ الرَّبّٰنِيُّوْنَ وَالْاَحْبَارُ عَنْ
قَوْلِهِمُ الْاِثْمَ وَاَكْلِهِمُ السُّحْتَ ؕ
لَبِئْسَ مَا كَانُوْا يَصْنَعُوْنَ ﴿٦٣﴾

64. 'ಅಲ್ಲಾಹನ ಕೈಗಳು ಬಿಗಿಯಲ್ಪಟ್ಟಿವೆ' ಎಂದು ಯಹೂದಿಯರು ಹೇಳುತ್ತಾರೆ.[41] ಬಿಗಿಯಲ್ಪಟ್ಟುದು ಅವರ ಕೈಗಳು.[42] ಅವರ ಈ

وَقَالَتِ الْيَهُوْدُ يَدُ اللّٰهِ مَغْلُوْلَةٌ ؕ غُلَّتْ

41. ಅರಬಿ ನಾಣ್ನುಡಿಯಂತೆ ಯಾರದಾದರೂ 'ಕೈ ಬಿಗಿಯಲ್ಪಟ್ಟಿರುವುದೆಂದರೆ' ಅವನು ಜಿಪುಣನಾಗಿದ್ದಾನೆ. ಔದಾರ್ಯ ಮತ್ತು ಕೊಡುಗೆಗಳಿಂದ ಅವನ ಕೈ ಹಿಂಜರಿಯುತ್ತದೆ ಎಂದರ್ಥವಾಗಿದೆ.

42. ಅರ್ಥಾತ್- ಅವರು ಸ್ವತಃ ಜಿಪುಣತೆಗೆ ಈಡಾಗಿದ್ದಾರೆ. ಲೋಭ ಮತ್ತು ಸಂಕುಚಿತತೆಗಾಗಿ ಅತ್ಯಂತ ಕುಖ್ಯಾತರಾಗಿ ಬಿಟ್ಟಿದ್ದಾರೆ.

ಹಾಳು ಹರಟೆಯ ಕಾರಣದಿಂದಾಗಿ ಅವರ ಮೇಲೆ ಶಾಪ ಬಿದ್ದಿದೆ. ಅಲ್ಲಾಹನ ಕೈಗಳು ಅತಿ ವಿಶಾಲವಿದ್ದು ಅವನು ತನ್ನಿಚ್ಛೆ ಪ್ರಕಾರ ವ್ಯಯಿಸುತ್ತಾನೆ. ವಾಸ್ತವದಲ್ಲಿ ನಿಮ್ಮ ಪಾಲಕಪ್ರಭುವಿನ ಕಡೆಯಿಂದ ನಿಮ್ಮ ಮೇಲೆ ಅವತೀರ್ಣಗೊಂಡಿರುವ ವಾಣಿಯು ಅವರ ಪೈಕಿ ಹೆಚ್ಚಿನವರ ಉದ್ಧಟತನ ಹಾಗೂ ಮಿಥ್ಯಾರಾಧನೆಯಲ್ಲಿ ಇನ್ನಷ್ಟು ವೃದ್ಧಿಗೆ ಕಾರಣವಾಗಿಬಿಟ್ಟಿದೆ ಮತ್ತು (ಅದರ ಫಲವಾಗಿ) ನಾವು ಅವರ ನಡುವೆ ನಿರ್ಣಾಯಕ ದಿನದವರೆಗೆ ವೈರ ವಿದ್ವೇಷಗಳನ್ನಿರಿಸಿ ಬಿಟ್ಟಿದ್ದೇವೆ. ಅವರು ಯುದ್ಧದ ಕಿಡಿಯನ್ನು ಪ್ರಜ್ವಲಿಸಿದಾಗಲೆಲ್ಲ ಅಲ್ಲಾಹನು ಅದನ್ನು ಆರಿಸಿಬಿಡುತ್ತಾನೆ. ಅವರು ಭೂಮಿಯಲ್ಲಿ ಕ್ಷೋಭೆ ಹಬ್ಬಿಸಲು ಯತ್ನಿಸುತ್ತಾರೆ. ಆದರೆ ಅಲ್ಲಾಹನು ಕ್ಷೋಭೆಯುಂಟು ಮಾಡುವವರನ್ನು ಖಂಡಿತ ಮೆಚ್ಚುವುದಿಲ್ಲ.

أَيْدِيهِمْ وَلُعِنُوا بِمَا قَالُوا ۘ بَلْ يَدَاهُ
مَبْسُوطَتَانِ يُنفِقُ كَيْفَ يَشَاءُ ۚ وَلَيَزِيدَنَّ
كَثِيرًا مِّنْهُم مَّا أُنزِلَ إِلَيْكَ مِن رَّبِّكَ
طُغْيَانًا وَكُفْرًا ۚ وَأَلْقَيْنَا بَيْنَهُمُ الْعَدَاوَةَ
وَالْبَغْضَاءَ إِلَىٰ يَوْمِ الْقِيَامَةِ ۚ كُلَّمَا أَوْقَدُوا
نَارًا لِّلْحَرْبِ أَطْفَأَهَا اللَّهُ ۚ وَيَسْعَوْنَ فِي
الْأَرْضِ فَسَادًا ۚ وَاللَّهُ لَا يُحِبُّ الْمُفْسِدِينَ ﴿٦٤﴾

65. ಈ ಗ್ರಂಥದವರು (ಈ ಉದ್ಧಟತನದ ಬದಲು) ವಿಶ್ವಾಸವಿಟ್ಟಿದ್ದರೆ ಹಾಗೂ ದೇವಭಯ ನೀತಿಯನ್ನನುಸರಿಸುತ್ತಿದ್ದರೆ, ನಾವು ಅವರ ಕೆಡುಕುಗಳನ್ನು ಅವರಿಂದ ದೂರೀಕರಿಸುತ್ತಿದ್ದೆವು ಮತ್ತು ಅವರನ್ನು ಸಕಲ ಸೌಭಾಗ್ಯಗಳಿಂದ ಕೂಡಿದ ಸ್ವರ್ಗೋದ್ಯಾನಗಳಿಗೆ ತಲಪಿಸಿ ಬಿಡುತ್ತಿದ್ದೆವು.

وَلَوْ أَنَّ أَهْلَ الْكِتَابِ آمَنُوا وَاتَّقَوْا لَكَفَّرْنَا
عَنْهُمْ سَيِّئَاتِهِمْ وَلَأَدْخَلْنَاهُمْ جَنَّاتِ النَّعِيمِ ﴿٦٥﴾

66. ಅಕಟ! ಅವರು ತೌರಾತ್, ಇಂಜೀಲ್ ಮತ್ತು ಅವರ ಪಾಲಕ ಪ್ರಭುವಿನ ವತಿಯಿಂದ ಅವರ ಕಡೆಗೆ ಕಳುಹಿಸಲ್ಪಟ್ಟಿದ್ದ ಇತರ ಗ್ರಂಥಗಳನ್ನು ಸಂಸ್ಥಾಪಿಸಿರುತ್ತಿದ್ದರೆ! ಹಾಗೆ ಮಾಡುತ್ತಿದ್ದರೆ, ಅವರಿಗಾಗಿ ಆಹಾರವು ಮೇಲ್ಭಾಗದಿಂದ ವರ್ಷಿಸುತ್ತಿತ್ತು, ಕೆಳಭಾಗ ದಿಂದ ಉಕ್ಕಿ ಬರುತ್ತಿತ್ತು. ಅವರಲ್ಲಿ ಕೆಲವರು ಸನ್ಮಾರ್ಗಿಗಳೂ ಇದ್ದಾರೆ ಆದರೆ ಅವರಲ್ಲಿ ಹೆಚ್ಚಿನವರು ಮಹಾ ದುಷ್ಕರ್ಮಿ ಗಳಾಗಿದ್ದಾರೆ.

وَلَوْ أَنَّهُمْ أَقَامُوا التَّوْرَاةَ وَالْإِنجِيلَ
وَمَا أُنزِلَ إِلَيْهِم مِّن رَّبِّهِمْ لَأَكَلُوا
مِن فَوْقِهِمْ وَمِن تَحْتِ أَرْجُلِهِم ۚ
مِّنْهُمْ أُمَّةٌ مُّقْتَصِدَةٌ ۖ وَكَثِيرٌ مِّنْهُمْ
سَاءَ مَا يَعْمَلُونَ ﴿٦٦﴾

67. ಓ ಸಂದೇಶವಾಹಕರೇ, ನಿಮ್ಮ ಪಾಲಕಪ್ರಭುವಿನ ಕಡೆಯಿಂದ ನಿಮ್ಮ ಮೇಲೆ ಅವತೀರ್ಣ ಗೊಳಿಸಲ್ಪಟ್ಟುದನ್ನು ಜನರಿಗೆ ತಲುಪಿಸಿರಿ. ಹಾಗೆ ಮಾಡದಿದ್ದರೆ ನೀವು ಅವನ ದೌತ್ಯದ ಬಾಧ್ಯತೆಯನ್ನು ನೆರವೇರಿಸಲಿಲ್ಲ. ಅಲ್ಲಾಹನು ನಿಮ್ಮನ್ನು ಜನರ ಕೇಡಿನಿಂದ ರಕ್ಷಿಸುವವನಾಗಿರುತ್ತಾನೆ. ಅವನು ಸತ್ಯನಿಷೇಧಿಗಳಿಗೆ ಎಂದೆಂದಿಗೂ (ನಿಮ್ಮ ವಿರುದ್ಧ) ವಿಜಯವನ್ನು ನೀಡಲಾರನೆಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ.

يَا أَيُّهَا الرَّسُولُ بَلِّغْ مَا أُنزِلَ إِلَيْكَ مِن
رَّبِّكَ ۖ وَإِن لَّمْ تَفْعَلْ فَمَا بَلَّغْتَ رِسَالَتَهُ ۚ
وَاللَّهُ يَعْصِمُكَ مِنَ النَّاسِ ۗ إِنَّ اللَّهَ
لَا يَهْدِي الْقَوْمَ الْكَافِرِينَ ﴿٦٧﴾

68. "ಓ ಗ್ರಂಥದವರೇ, ನೀವು ತೌರಾತನ್ನೂ ಇಂಜೀಲನ್ನೂ ನಿಮಗೆ ನಿಮ್ಮ ಪಾಲಕಪ್ರಭುವಿನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟ ಇತರ ಗ್ರಂಥಗಳನ್ನೂ ನೆಲೆ ನಿಲ್ಲಿಸುವ ತನಕ ನಿಮಗೆ ಯಾವ ತಳಹದಿಯೂ ಇಲ್ಲ" ಎಂದು ಸ್ಪಷ್ಟವಾಗಿ ಹೇಳಿಬಿಡಿರಿ. ನಿಮ್ಮ ಮೇಲೆ ಅವತೀರ್ಣ ಗೊಳಿಸಲಾಗಿರುವ ಫರಮಾನು ಅವರಲ್ಲಿ ಅನೇಕರ ಉದ್ಧಟತನವನ್ನೂ ನಿರಾಕರಣೆಯನ್ನೂ ಇನ್ನಷ್ಟು ವೃದ್ಧಿ ಸುವುದು. ಆದರೆ, ನಿರಾಕರಿಸುವವರ ಸ್ಥಿತಿಯ ಬಗ್ಗೆ ದುಃಖಿಸ ಬೇಡಿರಿ.

قُلْ يَٰٓأَهْلَ ٱلْكِتَٰبِ لَسْتُمْ عَلَىٰ شَىْءٍ
حَتَّىٰ تُقِيمُوا۟ ٱلتَّوْرَىٰةَ وَٱلْإِنجِيلَ وَمَآ
أُنزِلَ إِلَيْكُم مِّن رَّبِّكُمْ ۗ وَلَيَزِيدَنَّ
كَثِيرًا مِّنْهُم مَّآ أُنزِلَ إِلَيْكَ مِن رَّبِّكَ
طُغْيَٰنًا وَكُفْرًا ۖ فَلَا تَأْسَ عَلَى
ٱلْقَوْمِ ٱلْكَٰفِرِينَ ﴿٦٨﴾

69. (ಇಲ್ಲಿ ಪಟ್ಟಭದ್ರತೆ ಯಾರಿಗೂ ಇಲ್ಲ.) ಮುಸ್ಲಿಮರಿರಲಿ, ಯಹೂದಿಯರಿರಲಿ, 'ಸಾಬೀ'ಗಳಿರಲಿ, ಕ್ರೈಸ್ತರಿರಲಿ, ಯಾರೇ ಇರಲಿ - ಯಾರು ಅಲ್ಲಾಹನ ಮೇಲೆ ಮತ್ತು ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸಿಕೊಂಡು ಸತ್ಕರ್ಮಗಳನ್ನು ಮಾಡುತ್ತಾ ಇರುವನೋ ಅವನಿಗೆ ನಿಶ್ಚಯವಾಗಿಯೂ ಯಾವ ಭಯವೂ ಇಲ್ಲ, ವ್ಯಥೆಯೂ ಇಲ್ಲ.[43]

إِنَّ ٱلَّذِينَ ءَامَنُوا۟ وَٱلَّذِينَ هَادُوا۟
وَٱلصَّٰبِـُٔونَ وَٱلنَّصَٰرَىٰ مَنْ ءَامَنَ بِٱللَّهِ
وَٱلْيَوْمِ ٱلْءَاخِرِ وَعَمِلَ صَٰلِحًا فَلَا
خَوْفٌ عَلَيْهِمْ وَلَا هُمْ يَحْزَنُونَ ﴿٦٩﴾

70. ನಾವು ಬನೀಇಸ್ರಾಈಲರಿಂದ ಬಲವಾದ ಕರಾರನ್ನು ಪಡೆದೆವು. ಅವರ ಕಡೆಗೆ ಅನೇಕ ಸಂದೇಶವಾಹಕರನ್ನು ರವಾನಿಸಿದೆವು. ಆದರೆ, ಅವರ ಬಳಿ ಸಂದೇಶವಾಹಕರು ಅವರ ದೇಹೇಚ್ಛೆಗಳಿಗೆ ವಿರುದ್ಧವೇನಾದರೂ ತಂದಾಗಲೆಲ್ಲಾ ಅವರು ಕೆಲವರನ್ನು ಸುಳ್ಳಾಗಿಸಿದರು, ಇನ್ನು ಕೆಲವರನ್ನು ವಧಿಸಿಬಿಟ್ಟರು.

لَقَدْ أَخَذْنَا مِيثَٰقَ بَنِىٓ إِسْرَٰٓءِيلَ
وَأَرْسَلْنَآ إِلَيْهِمْ رُسُلًا ۖ كُلَّمَا جَآءَهُمْ
رَسُولٌۢ بِمَا لَا تَهْوَىٰٓ أَنفُسُهُمْ فَرِيقًا
كَذَّبُوا۟ وَفَرِيقًا يَقْتُلُونَ ﴿٧٠﴾

71. ಮತ್ತು ಯಾವ ಗೊಂದಲವೂ ಉಂಟಾಗದೆಂದು ತಮ್ಮಷ್ಟಕ್ಕೇ ತಾವೇ ತಿಳಿದುಕೊಂಡರು. ಆದುದರಿಂದ ಅವರು ಅಂಧರೂ ಕಿವುಡರೂ ಆಗಿ ಹೋದರು. ಆ ಬಳಿಕ ಅಲ್ಲಾಹನು ಅವರನ್ನು ಕ್ಷಮಿಸಿದಾಗ ಅವರಲ್ಲಿ ಹೆಚ್ಚಿನವರು ಇನ್ನಷ್ಟು ಅಂಧರೂ ಕಿವುಡರೂ ಆಗುತ್ತ ಹೋದರು. ಅಲ್ಲಾಹನು ಅವರ ಈ ಎಲ್ಲ ಕೃತ್ಯಗಳನ್ನು ವೀಕ್ಷಿಸುತ್ತಲೇ ಇದ್ದನು.

وَحَسِبُوٓا۟ أَلَّا تَكُونَ فِتْنَةٌ فَعَمُوا۟
وَصَمُّوا۟ ثُمَّ تَابَ ٱللَّهُ عَلَيْهِمْ ثُمَّ
عَمُوا۟ وَصَمُّوا۟ كَثِيرٌ مِّنْهُمْ ۚ وَٱللَّهُ
بَصِيرٌۢ بِمَا يَعْمَلُونَ ﴿٧١﴾

72. ಮರ್ಯಮರ ಪುತ್ರ ಮಸೀಹನೇ ಅಲ್ಲಾಹನೆಂದು ಹೇಳಿದವರು ಖಂಡಿತವಾಗಿಯೂ 'ಸತ್ಯನಿಷೇಧ' ಕೈಗೊಂಡರು. ವಸ್ತುತಃ ಮಸೀಹರು, "ಓ ಬನೀಇಸ್ರಾಈಲರೇ, ನನ್ನ ಪ್ರಭುವೂ ನಿಮ್ಮ ಪ್ರಭುವೂ ಆಗಿರುವ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ"

لَقَدْ كَفَرَ ٱلَّذِينَ قَالُوٓا۟ إِنَّ ٱللَّهَ هُوَ
ٱلْمَسِيحُ ٱبْنُ مَرْيَمَ ۖ وَقَالَ ٱلْمَسِيحُ
يَٰبَنِىٓ إِسْرَٰٓءِيلَ ٱعْبُدُوا۟ ٱللَّهَ رَبِّى وَ

43. ವಿವರಣೆಗಾಗಿ ಅಲ್‌ಬಕರಃ ಅಧ್ಯಾಯದ 62ನೆಯ ಸೂಕ್ತ ಮತ್ತು 26ನೆಯ ಟಿಪ್ಪಣಿಯನ್ನು ನೋಡಿರಿ.

ಎಂದು ಹೇಳಿದ್ದರು. ಅಲ್ಲಾಹನೊಂದಿಗೆ ಇನ್ನಾರನ್ನಾದರೂ ಸಹಭಾಗಿಗಳನ್ನಾಗಿ ಮಾಡಿದವನಿಗೆ ಅಲ್ಲಾಹನು ಸ್ವರ್ಗವನ್ನು 'ನಿಷಿದ್ಧ' ಗೊಳಿಸಿರುತ್ತಾನೆ ಮತ್ತು ಅವನ ವಾಸಸ್ಥಾನವು 'ನರಕ' ಆಗಿರುತ್ತದೆ. ಇಂತಹ ಅಕ್ರಮಿಗಳಿಗೆ ಯಾರೂ ಸಹಾಯಕರಿಲ್ಲ.

رَبَّكُمْ ۖ إِنَّهُ مَنْ يُشْرِكْ بِاللَّهِ فَقَدْ
حَرَّمَ اللَّهُ عَلَيْهِ الْجَنَّةَ وَمَأْوَاهُ
النَّارُ ۖ وَمَا لِلظَّالِمِينَ مِنْ أَنْصَارٍ ﴿٧٢﴾

73. ಅಲ್ಲಾಹನು ಮೂವರಲ್ಲೊಬ್ಬನೆಂದು ಹೇಳಿದವರು ನಿಶ್ಚಯವಾಗಿಯೂ 'ಸತ್ಯನಿಷೇಧ' ಕೈಗೊಂಡರು. ವಾಸ್ತವದಲ್ಲಿ ಏಕದೇವನಲ್ಲದೆ ಅನ್ಯ ದೇವನಿಲ್ಲ. ಇವರು ಇಂತಹ ಮಾತುಗಳಿಂದ ದೂರವಿರದಿದ್ದರೆ, ಇವರ ಪೈಕಿ ಸತ್ಯನಿಷೇಧ ನೀತಿಯನ್ನನುಸರಿಸುವವರಿಗೆಲ್ಲ ವೇದನಾಯುಕ್ತ ಯಾತನೆ ನೀಡಲಾಗುವುದು.

لَقَدْ كَفَرَ الَّذِينَ قَالُوا إِنَّ اللَّهَ ثَالِثُ
ثَلَاثَةٍ ۘ وَمَا مِنْ إِلَٰهٍ إِلَّا إِلَٰهٌ وَاحِدٌ ۚ
وَإِنْ لَمْ يَنْتَهُوا عَمَّا يَقُولُونَ لَيَمَسَّنَّ
الَّذِينَ كَفَرُوا مِنْهُمْ عَذَابٌ أَلِيمٌ ﴿٧٣﴾

74. ಇವರು ಇನ್ನೂ ಅಲ್ಲಾಹನೊಡನೆ 'ಪಶ್ಚಾತ್ತಾಪ' ಪಟ್ಟು ಅವನೊಡನೆ ಕ್ಷಮಾಯಾಚನೆ ಮಾಡಲಾರರೇ? ಅಲ್ಲಾಹನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

أَفَلَا يَتُوبُونَ إِلَى اللَّهِ وَيَسْتَغْفِرُونَهُ ۚ وَاللَّهُ
غَفُورٌ رَحِيمٌ ﴿٧٤﴾

75. ಮರ್ಯಮರ ಪುತ್ರ ಮಸೀಹರು ಕೇವಲ ಓರ್ವ ಸಂದೇಶ ವಾಹಕರಾಗಿದ್ದರೇ ವಿನಾ ಇನ್ನೇನೂ ಆಗಿರಲಿಲ್ಲ. ಅವರಿಗಿಂತ ಮುಂಚೆ ಇನ್ನೂ ಅನೇಕ ಸಂದೇಶವಾಹಕರು ಗತಿಸಿ ಹೋಗಿದ್ದರು. ಅವರ ಮಾತೆ ಓರ್ವ ಸತ್ಯಸಂಧ ಮಹಿಳೆಯಾಗಿದ್ದರು. ಅವರಿಬ್ಬರೂ ಆಹಾರ ಸೇವನೆ ಮಾಡುತ್ತಿದ್ದರು. ನಾವು ಯಾವ ವಿಧದಿಂದ ಇವರ ಮುಂದೆ ಪರಮಾರ್ಥದ ದೃಷ್ಟಾಂತಗಳನ್ನು ಪ್ರಕಟಗೊಳಿಸುತ್ತಿದ್ದೇವೆ ಎಂಬುದನ್ನು ನೋಡಿರಿ. ಹೀಗಿದ್ದೂ ಇವರು ಎತ್ತ ವ್ಯತಿಚಲಿಸುತ್ತಿದ್ದಾರೆಂಬುದನ್ನು ನೋಡಿರಿ.[44]

مَا الْمَسِيحُ ابْنُ مَرْيَمَ إِلَّا رَسُولٌ ۚ
قَدْ خَلَتْ مِنْ قَبْلِهِ الرُّسُلُ ۖ وَأُمُّهُ
صِدِّيقَةٌ ۖ كَانَا يَأْكُلَانِ الطَّعَامَ ۗ
انْظُرْ كَيْفَ نُبَيِّنُ لَهُمُ الْآيَاتِ ثُمَّ
انْظُرْ أَنَّىٰ يُؤْفَكُونَ ﴿٧٥﴾

76. ಇವರೊಡನೆ ಹೇಳಿರಿ - "ನೀವು ಅಲ್ಲಾಹನನ್ನು ಬಿಟ್ಟು ನಿಮಗೆ ನಷ್ಟವನ್ನುಂಟು ಮಾಡಲಿಕ್ಕೂ ಲಾಭವನ್ನುಂಟು ಮಾಡಲಿಕ್ಕೂ ಅಧಿಕಾರವಿಲ್ಲದವರನ್ನು ಆರಾಧಿಸುತ್ತೀರಾ? ವಸ್ತುತಃ ಸಕಲವನ್ನು

قُلْ أَتَعْبُدُونَ مِنْ دُونِ اللَّهِ مَا لَا
يَمْلِكُ لَكُمْ ضَرًّا وَلَا نَفْعًا ۚ وَاللَّهُ هُوَ

44. ಈ ಪದಗಳ ಮೂಲಕ ಮಸೀಹ್‌ರ(ಅ) ದೇವತ್ವದ ಬಗ್ಗೆ ಕ್ರೈಸ್ತರು ಹೊಂದಿರುವ ಕಲ್ಪನೆಯನ್ನು ಸ್ಪಷ್ಟವಾಗಿ ನಿರಾಕರಿಸಲಾಗಿದೆ. ಇದಕ್ಕಿಂತ ಹೆಚ್ಚಿನ ಸ್ಪಷ್ಟೀಕರಣವನ್ನು ನೀಡುವುದು ಪ್ರಾಯಶಃ ಸಾಧ್ಯವೇ ಇಲ್ಲ. ಯಾರಾದರೂ ಮಸೀಹ್(ಅ) ಏನಾಗಿದ್ದರು ಎಂದು ತಿಳಿಯ ಬಯಸುವುದಾದರೆ ಈ ಸೂಚನೆಗಳ ಮೂಲಕ ಯಾರಿಗಾದರೂ ಸ್ಪಷ್ಟವಾಗಿ ತಿಳಿಯಲು ಸಾಧ್ಯವಿರುವುದೇನೆಂದರೆ, ಅವರು ಓರ್ವ ಮನುಷ್ಯರಾಗಿದ್ದರು. ಅವರು ಕುಲದ ವಿವರಣೆ ಲಭ್ಯವಿರುವ ಮಹಿಳೆಯೊಬ್ಬಳ ಉದರದಲ್ಲಿ ಜನಿಸಿದರು. ಅವರು ಮಾನವ ಕಾಯವನ್ನು ಹೊಂದಿದ್ದರು. ಮನುಷ್ಯ ಸಹಜವಾದ ಎಲ್ಲ ಮಿತಿಗಳನ್ನೂ ಅನಿವಾರ್ಯತೆಗಳನ್ನೂ ಗುಣವಿಶೇಷತೆಗಳನ್ನೂ ಅವರು ಹೊಂದಿದ್ದರು. ಅವರು ನಿದ್ರಿಸುತ್ತಿದ್ದರು. ಆಹಾರ ಸೇವಿಸುತ್ತಿದ್ದರು. ಬೇಸಿಗೆ ಮತ್ತು ಚಳಿಯನ್ನು ಅನುಭವಿಸುತ್ತಿದ್ದರು. ಮಾತ್ರವಲ್ಲ ಕ್ರೈಸ್ತರು ಹೇಳುವಂತೆ ಪಿಶಾಚಿಯ ಪ್ರಲೋಭನೆಗೂ ಒಳಗಾಗಿದ್ದರು. ಇಷ್ಟಾಗಿಯೂ ಅವರನ್ನು ದೇವ ಅಥವಾ ದೇವತ್ವದ ಸಹಭಾಗಿ ಎಂದು ಕಲ್ಪಿಸಲು ಯಾವ ವಿವೇಕಶಾಲಿ ವ್ಯಕ್ತಿಗೆ ಸಾಧ್ಯವಿದೆ.

ಆಲಿಸುವವನೂ ಸರ್ವವನ್ನು ಅರಿಯುವವನೂ ಅಲ್ಲಾಹನೇ ಆಗಿರುತ್ತಾನೆ"

السَّمِيْعُ الْعَلِيْمُ ٧٦

77. ಹೇಳಿರಿ- "ಓ ಗ್ರಂಥದವರೇ, ನಿಮ್ಮ ಧರ್ಮದಲ್ಲಿ ವೃಥಾ ಹದಮೀರಬೇಡಿರಿ ಮತ್ತು ನಿಮಗಿಂತ ಮುಂಚೆ ಪಥಭ್ರಷ್ಟರಾಗಿದ್ದ ಹಾಗೂ ಅನೇಕರನ್ನು ಪಥಭ್ರಷ್ಟರನ್ನಾಗಿ ಮಾಡಿದ ಮತ್ತು 'ಸನ್ಮಾರ್ಗದಿಂದ' ಭ್ರಷ್ಟರಾದವರ ವಿಚಾರಗಳನ್ನನುಸರಿಸಬೇಡಿರಿ."

قُلْ يٰۤاَهْلَ الْكِتٰبِ لَا تَغْلُوْا فِيْ دِيْنِكُمْ غَيْرَ الْحَقِّ وَلَا تَتَّبِعُوْۤا اَهْوَآءَ قَوْمٍ قَدْ ضَلُّوْا مِنْ قَبْلُ وَاَضَلُّوْا كَثِيْرًا وَّضَلُّوْا عَنْ سَوَآءِ السَّبِيْلِ ٧٧

78. ಬನೀಇಸ್ರಾಈಲರಲ್ಲಿ 'ಧರ್ಮಧಿಕ್ಕಾರ' ಮಾರ್ಗವನ್ನನುಸರಿಸಿ ದವರು ದಾವೂದ್ ಮತ್ತು ಮರ್ಯಮರ ಪುತ್ರ 'ಈಸಾ'ರ ಬಾಯಿಯಿಂದ ಶಪಿಸಲ್ಪಟ್ಟರು. ಏಕೆಂದರೆ, ಅವರು ಸೊಕ್ಕಿದ್ದರು ಮತ್ತು ಅತಿಕ್ರಮವೆಸಗುತ್ತಿದ್ದರು.

لُعِنَ الَّذِيْنَ كَفَرُوْا مِنْۢ بَنِيْۤ اِسْرَآءِيْلَ عَلٰى لِسَانِ دَاوٗدَ وَعِيْسَى ابْنِ مَرْيَمَ ذٰلِكَ بِمَا عَصَوْا وَّكَانُوْا يَعْتَدُوْنَ ٧٨

79. ಅವರು ಪರಸ್ಪರರನ್ನು ದುಷ್ಕೃತ್ಯಗಳಿಂದ ತಡೆಯುವುದನ್ನು ಬಿಟ್ಟುಬಿಟ್ಟಿದ್ದರು.[45] ಅವರು ಕೈಗೊಂಡ ಕರ್ಮವಿಧಾನವು ಹೀನಾಯವಾಗಿತ್ತು.

كَانُوْا لَا يَتَنَاهَوْنَ عَنْ مُّنْكَرٍ فَعَلُوْهُ لَبِئْسَ مَا كَانُوْا يَفْعَلُوْنَ ٧٩

80. ಇಂದು ನೀವು ಅವರಲ್ಲಿ (ಸತ್ಯವಿಶ್ವಾಸಿಗಳಿಗೆ ವಿರುದ್ಧ) 'ಸತ್ಯನಿಷೇಧಿಗಳನ್ನು' ಬೆಂಬಲಿಸುವ ಮತ್ತು ಪ್ರೀತಿಸುವ ಅನೇಕರನ್ನು ಕಾಣುತ್ತೀರಿ. ಅವರ ಚಿತ್ತಗಳು ಅವರಿಗಾಗಿ ಸಿದ್ಧಪಡಿಸಿ ಕೊಂಡಿರುವ ಫಲಿತಾಂಶವು ಅತ್ಯಂತ ನಿಕೃಷ್ಟವಾಗಿರುತ್ತದೆ. ಅಲ್ಲಾಹ್ ಅವರ ಮೇಲೆ ಅತ್ಯಂತ ಕ್ರೋಧಗೊಂಡಿರುತ್ತಾನೆ ಮತ್ತು ಅವರು ಶಾಶ್ವತ ಯಾತನೆಗೆ ಒಳಗಾಗುವವರಾಗಿದ್ದಾರೆ.

تَرٰى كَثِيْرًا مِّنْهُمْ يَتَوَلَّوْنَ الَّذِيْنَ كَفَرُوْا لَبِئْسَ مَا قَدَّمَتْ لَهُمْ اَنْفُسُهُمْ اَنْ سَخِطَ اللّٰهُ عَلَيْهِمْ وَفِي الْعَذَابِ هُمْ خٰلِدُوْنَ ٨٠

81. ಅವರು ನಿಜವಾಗಿಯೂ ಅಲ್ಲಾಹ್, ಪ್ರವಾದಿ ಮತ್ತು ಪ್ರವಾದಿಯ ಮೇಲೆ ಅವತೀರ್ಣಗೊಂಡುದನ್ನು ನಂಬುವವರಾಗಿದ್ದರೆ, ಎಂದೆಂದಿಗೂ (ಸತ್ಯವಿಶ್ವಾಸಿಗಳ ವಿರುದ್ಧ) 'ಸತ್ಯನಿಷೇಧಿಗಳನ್ನು' ತಮ್ಮ ಆಪ್ತ ಮಿತ್ರರನ್ನಾಗಿ ಮಾಡಿಕೊಳ್ಳುತ್ತಿರಲಿಲ್ಲ. ಆದರೆ ಅವ ರಲ್ಲಿ ಹೆಚ್ಚಿನವರು ಅಲ್ಲಾಹನ ಅನುಸರಣೆಯನ್ನು ತೊರೆದಿದ್ದಾರೆ.

وَلَوْ كَانُوْا يُؤْمِنُوْنَ بِاللّٰهِ وَالنَّبِيِّ وَمَاۤ اُنْزِلَ اِلَيْهِ مَا اتَّخَذُوْهُمْ اَوْلِيَآءَ وَلٰكِنَّ كَثِيْرًا مِّنْهُمْ فٰسِقُوْنَ ٨١

82. ನೀವು ಯಹೂದಿಯರನ್ನೂ 'ಬಹುದೇವಾರಾಧಕ'ರನ್ನೂ

لَتَجِدَنَّ اَشَدَّ النَّاسِ عَدَاوَةً لِّلَّذِيْنَ

45. ಎಲ್ಲಾ ಸಮುದಾಯಗಳ ಕೇಡಿನ ಆರಂಭ ಕೆಲವು ವ್ಯಕ್ತಿಗಳ ಮೂಲಕ ಆಗುತ್ತದೆ. ಸಮುದಾಯದ ಸಾಮೂಹಿಕ ಆತ್ಮಸಾಕ್ಷಿ ಜಾಗೃತವಾಗಿದ್ದರೆ ಜನಾಭಿಪ್ರಾಯವು ಕೇಡಿಗೆ ಈಡಾಗಿರುವ ಜನರನ್ನು ನಿಯಂತ್ರಿಸುತ್ತದೆ. ಹೀಗೆ ಸಮುದಾಯ ಕೇಡಿನಿಂದ ಮುಕ್ತವಾಗಿರುತ್ತದೆ. ಆದರೆ ಸಮುದಾಯ ಇಂತಹ ವ್ಯಕ್ತಿಗಳ ಬಗ್ಗೆ ಔದಾಸೀನ್ಯ ತೋರಿದರೆ, ತಪ್ಪಿತಸ್ಥರನ್ನು ಶಪಿಸುವ ಬದಲು ಅವರನ್ನು ತಪ್ಪೆಸಗಲು ಸ್ವಚ್ಛಂದವಾಗಿ ಬಿಟ್ಟು ಬಿಟ್ಟರೆ ಕ್ರಮೇಣ ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಿದ್ದ ಆ ಕೆಡುಕುಗಳು ಇಡೀ ಸಮುದಾಯದಲ್ಲಿ ಹರಡುತ್ತಾ ಹೋಗುತ್ತದೆ. ಇದೇ ಪ್ರವೃತ್ತಿ ಬನೀಇಸ್ರಾಈಲರನ್ನು ಸಾಮೂಹಿಕವಾಗಿ ಕೇಡಿಗೆ ಗುರಿಪಡಿಸಿತ್ತು.

ಸತ್ಯವಿಶ್ವಾಸಿಗಳ (ವಿರುದ್ಧ) ಹಗೆತನದಲ್ಲಿ ಅತ್ಯುಗ್ರರನ್ನಾಗಿ ಕಾಣುವಿರಿ. 'ನಾವು ನಸಾರಾಗಳು' ಎಂದು ಹೇಳಿದ್ದವರನ್ನು (ಕ್ರೈಸ್ತರನ್ನು) ನೀವು ಸತ್ಯವಿಶ್ವಾಸಿಗಳ ಗೆಳೆತನದಲ್ಲಿ ಅತಿ ಸಮೀಪದವರನ್ನಾಗಿ ಕಾಣುವಿರಿ. ಏಕೆಂದರೆ- ಅವರಲ್ಲಿ ಧ್ಯಾನಾಸಕ್ತ ವಿದ್ವಾಂಸರೂ ವಿರಕ್ತ ಸಾಧುಗಳೂ ಕಂಡುಬರುತ್ತಾರೆ ಮತ್ತು ಅವರಲ್ಲಿ ಅಹಂಭಾವವಿಲ್ಲ.

اٰمَنُوا الْيَهُوْدَ وَالَّذِيْنَ اَشْرَكُوْا ۚ
وَلَتَجِدَنَّ اَقْرَبَهُمْ مَّوَدَّةً لِّلَّذِيْنَ
اٰمَنُوا الَّذِيْنَ قَالُوْٓا اِنَّا نَصٰرٰى ؕ ذٰلِكَ
بِاَنَّ مِنْهُمْ قِسِّيْسِيْنَ وَرُهْبَانًا وَّ
اَنَّهُمْ لَا يَسْتَكْبِرُوْنَ ﴿٨٢﴾

83. *ಅವರು ಸಂದೇಶವಾಹಕರ ಮೇಲೆ ಅವತೀರ್ಣಗೊಂಡ ಈ ವಾಣಿಯನ್ನು ಆಲಿಸುವಾಗ ಸತ್ಯಪ್ರಜ್ಞೆಯ ಪ್ರಭಾವದಿಂದ ಅವರ ನಯನಗಳು ಅಶ್ರುಗಳಿಂದ ಒದ್ದೆಯಾಗುತ್ತಿರುವುದನ್ನು ನೀವು ಕಾಣುತ್ತೀರಿ. ಅವರು ಹೇಳುತ್ತಾರೆ, "ಓ ನಮ್ಮ ಪ್ರಭೂ, ನಾವು ವಿಶ್ವಾಸವಿರಿಸಿಕೊಂಡೆವು, ನಮ್ಮ ಹೆಸರನ್ನು ಸಾಕ್ಷ್ಯ ನೀಡುವವರೊಂದಿಗೆ ಬರೆದುಕೋ.

وَاِذَا سَمِعُوْا مَآ اُنْزِلَ اِلَى الرَّسُوْلِ تَرٰٓى
اَعْيُنَهُمْ تَفِيْضُ مِنَ الدَّمْعِ مِمَّا عَرَفُوْا مِنَ
الْحَقِّ ۚ يَقُوْلُوْنَ رَبَّنَآ اٰمَنَّا فَاكْتُبْنَا
مَعَ الشّٰهِدِيْنَ ﴿٨٣﴾

84. ನಮ್ಮ ಪಾಲಕ ಪ್ರಭುವು ನಮ್ಮನ್ನು ಸಜ್ಜನ ಭಕ್ತರ ಸಾಲಲ್ಲಿ ಸೇರಿಸಿಕೊಳ್ಳಬೇಕೆಂದು ನಾವು ಅಭಿಲಾಷೆ ಪಡುತ್ತಿರುವಾಗ ನಾವೇಕೆ ವಿಶ್ವಾಸವಿಡಬಾರದು? ನಮ್ಮ ಮುಂದೆ ಬಂದಿರುವ ಸತ್ಯವನ್ನು ನಾವೇಕೆ ಒಪ್ಪಿಕೊಳ್ಳಬಾರದು?"

وَمَا لَنَا لَا نُؤْمِنُ بِاللّٰهِ وَمَا جَآءَنَا مِنَ
الْحَقِّ ۙ وَنَطْمَعُ اَنْ يُّدْخِلَنَا رَبُّنَا مَعَ الْقَوْمِ
الصّٰلِحِيْنَ ﴿٨٤﴾

85. ಅವರ ಈ ಮಾತಿನ ಕಾರಣದಿಂದ ಅಲ್ಲಾಹನು ಅವರಿಗೆ ತಳ ಭಾಗದಲ್ಲಿ ಕಾಲುವೆಗಳು ಪ್ರವಹಿಸುತ್ತಿರುವ ಸ್ವರ್ಗೋದ್ಯಾನಗಳನ್ನು ದಯಪಾಲಿಸಿದನು ಮತ್ತು ಅವರು ಅಲ್ಲಿ ಸದಾ ಕಾಲ ವಾಸಿಸುವರು. ಪುಣ್ಯ ಮಾರ್ಗವನ್ನನುಸರಿಸುವವರ ಪ್ರತಿಫಲವಿದು.

فَاَثَابَهُمُ اللّٰهُ بِمَا قَالُوْا جَنّٰتٍ تَجْرِيْ
مِنْ تَحْتِهَا الْاَنْهٰرُ خٰلِدِيْنَ فِيْهَا ؕ وَذٰلِكَ
جَزَآءُ الْمُحْسِنِيْنَ ﴿٨٥﴾

86. ಇನ್ನು ನಮ್ಮ ನಿದರ್ಶನಗಳನ್ನು ಧಿಕ್ಕರಿಸಿದವರು ಮತ್ತು ಸುಳ್ಳಾಗಿಸಿದವರು- ಅವರು ನರಕಕ್ಕೆ ಅರ್ಹರು.

وَالَّذِيْنَ كَفَرُوْا وَكَذَّبُوْا بِاٰيٰتِنَآ اُولٰٓئِكَ
اَصْحٰبُ الْجَحِيْمِ ﴿٨٦﴾

87. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನು ನಿಮಗೆ 'ಧರ್ಮಸಮ್ಮತ' ಗೊಳಿಸಿರುವ ಶುದ್ಧ ವಸ್ತುಗಳನ್ನು 'ನಿಷಿದ್ಧ ಮಾಡಿಕೊಳ್ಳಬೇಡಿರಿ[46]

يٰٓاَيُّهَا الَّذِيْنَ اٰمَنُوْا لَا تُحَرِّمُوْا طَيِّبٰتِ مَآ

***ಇಲ್ಲಿಂದ 7ನೆಯ ಕಾಂಡ ಆರಂಭ.**

46. ಈ ಸೂಕ್ತದಲ್ಲಿ ಎರಡು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಮೊದಲನೆಯದಾಗಿ ಹರಾಮ್-ಹಲಾಲ್ (ಧರ್ಮನಿಷಿದ್ಧ-ಧರ್ಮ ಸಮ್ಮತ)ಗಳ ವಿಷಯದಲ್ಲಿ ಸ್ವಯಂ ಸ್ವತಂತ್ರರಾಗದಿರಿ. ಅಲ್ಲಾಹನು ನಿಷಿದ್ಧಗೊಳಿಸಿದವುಗಳೇ ವಾಸ್ತವದಲ್ಲಿ ನಿಷಿದ್ಧವಾಗಿವೆ. ಅಲ್ಲಾಹನು ಧರ್ಮಸಮ್ಮತ ಗೊಳಿಸಿದವುಗಳೇ ವಾಸ್ತವದಲ್ಲಿ ಧರ್ಮಸಮ್ಮತವಾಗಿದೆ. ನಿಮ್ಮಿಚ್ಛೆಗೆ ಅನುಸಾರ ಯಾವುದನ್ನು ಬೇಕಾದರೂ ಧರ್ಮಸಮ್ಮತ ಮತ್ತು ಧರ್ಮನಿಷಿದ್ಧಗೊಳಿಸಿದರೆ ನೀವು ದೇವನಿಯಮದ ಬದಲು ಸ್ವೇಚ್ಛೆಯನ್ನು ಅನುಸರಿಸಿದಂತಾಗುವುದು. ಎರಡನೆಯದಾಗಿ ಕ್ರೈಸ್ತ ಸನ್ಯಾಸಿಗಳು, ಹಿಂದೂ ಯೋಗಿಗಳು, ಬೌದ್ಧ ಭಿಕ್ಷುಗಳು ಮತ್ತು ಪೌರಾತ್ಯ ಸೂಫಿ ಸಂತರಂತೆ ಸನ್ಯಾಸ, ಇಂದ್ರಿಯ ಸುಖಗಳಿಂದ ಪಲಾಯನ ಮಾಡುವ ಮಾರ್ಗವನ್ನು ಅನುಸರಿಸಬೇಡಿರಿ.

ಮತ್ತು ಹದಮೀರಬೇಡಿರಿ. ಅಲ್ಲಾಹನಿಗೆ, ಅತಿರೇಕವೆಸಗುವವರು ಎಷ್ಟು ಮಾತ್ರಕ್ಕೂ ಮೆಚ್ಚುಗೆಯವರಲ್ಲ.

أَحَلَّ اللَّهُ لَكُمْ وَلَا تَعْتَدُوا ۚ إِنَّ اللَّهَ لَا
يُحِبُّ الْمُعْتَدِينَ ﴿٨٧﴾

88. ಅಲ್ಲಾಹನು ನಿಮಗೆ ನೀಡಿರುವ 'ಧರ್ಮಸಮ್ಮತ' ಮತ್ತು ಶುದ್ಧ ಆಹಾರವನ್ನು ಉಣ್ಣಿರಿ, ಕುಡಿಯಿರಿ ಮತ್ತು ಯಾವ ಅಲ್ಲಾಹನ ಮೇಲೆ ನೀವು ವಿಶ್ವಾಸವಿರಿಸಿರುವಿರೋ ಅವನ ಆಜ್ಞೋಲ್ಲಂಘನೆ ಯಿಂದ ದೂರವಿರಿ.

وَكُلُوا مِمَّا رَزَقَكُمُ اللَّهُ حَلَالًا طَيِّبًا ۚ
وَاتَّقُوا اللَّهَ الَّذِي أَنْتُمْ بِهِ مُؤْمِنُونَ ﴿٨٨﴾

89. ನೀವು ಮಾಡುವ ಅರ್ಥವಿಲ್ಲದ ಶಪಥಗಳಿಗಾಗಿ ಅಲ್ಲಾಹನು ನಿಮ್ಮನ್ನು ಹಿಡಿಯುವುದಿಲ್ಲ. ಆದರೆ ನೀವು ಉದ್ದೇಶಪೂರ್ವಕವಾಗಿ ಮಾಡುವ ಶಪಥಗಳ ಕುರಿತು ಅವನು ಅಗತ್ಯವಾಗಿ ವಿಚಾರಣೆ ನಡೆಸುವನು. (ಇಂತಹ ಶಪಥಗಳನ್ನು ಮುರಿದುದಕ್ಕೆ) ಪ್ರಾಯಶ್ಚಿತ್ತ ವಾಗಿ ಹತ್ತು ಮಂದಿ ದರಿದ್ರರಿಗೆ, ನೀವು ನಿಮ್ಮ ಮಕ್ಕಳು ಮರಿಗಳಿಗೆ ಕೊಡುವಂತಹ ಮಧ್ಯಮ ತರಗತಿಯ ಊಟ ಕೊಡಿರಿ ಅಥವಾ ಅವರಿಗೆ ಬಟ್ಟೆಯುಡಿಸಿರಿ ಅಥವಾ ಒಬ್ಬ ಗುಲಾಮನನ್ನು ವಿಮೋಚನೆಗೊಳಿಸಿರಿ. ಇದಕ್ಕೆ ಬೇಕಾದ ಸಾಮರ್ಥ್ಯ ಇಲ್ಲದವನು ಮೂರು ದಿನಗಳ ಉಪವಾಸ ವ್ರತವನ್ನಾಚರಿಸಬೇಕು. ನೀವು ಶಪಥ ಮಾಡಿಕೊಂಡು ಅದನ್ನು ಮುರಿದುದಕ್ಕಾಗಿ ನಿಮ್ಮ ಶಪಥಗಳಿಗೆ ಪ್ರಾಯಶ್ಚಿತ್ತವಿದು. ನಿಮ್ಮ ಶಪಥಗಳನ್ನು ಪಾಲಿಸಿರಿ. ಈ ರೀತಿ ನೀವು ಕೃತಜ್ಞತೆ ಸಲ್ಲಿಸುವವರಾಗಬಹುದೆಂದು ಅಲ್ಲಾಹನು ತನ್ನ ಆದೇಶಗಳನ್ನು ನಿಮಗೆ ವಿವರಿಸುತ್ತಾನೆ.

لَا يُؤَاخِذُكُمُ اللَّهُ بِاللَّغْوِ فِي أَيْمَانِكُمْ
وَلَٰكِنْ يُؤَاخِذُكُمْ بِمَا عَقَّدْتُمُ الْأَيْمَانَ ۖ
فَكَفَّارَتُهُ إِطْعَامُ عَشَرَةِ مَسَاكِينَ مِنْ
أَوْسَطِ مَا تُطْعِمُونَ أَهْلِيكُمْ أَوْ كِسْوَتُهُمْ
أَوْ تَحْرِيرُ رَقَبَةٍ ۖ فَمَنْ لَمْ يَجِدْ فَصِيَامُ
ثَلَاثَةِ أَيَّامٍ ۚ ذَٰلِكَ كَفَّارَةُ أَيْمَانِكُمْ إِذَا
حَلَفْتُمْ ۚ وَاحْفَظُوا أَيْمَانَكُمْ ۚ كَذَٰلِكَ يُبَيِّنُ
اللَّهُ لَكُمْ آيَاتِهِ لَعَلَّكُمْ تَشْكُرُونَ ﴿٨٩﴾

90. ಓ ಸತ್ಯವಿಶ್ವಾಸಿಗಳೇ, ಮದ್ಯ, ಜೂಜು, 'ಬಲಿ ಪೀಠಗಳು' ಮತ್ತು 'ದಾಳ ಹಾಕುವುದು' ಇವೆಲ್ಲ ಹೊಲಸು ಪೈಶಾಚಿಕ ಕೃತ್ಯಗಳಾಗಿವೆ. ಅವುಗಳನ್ನು ವರ್ಜಿಸಿರಿ, ನಿಮಗೆ ಯಶಸ್ಸು ಲಭಿಸುವುದೆಂದು ನಿರೀಕ್ಷಿಸಬಹುದು.[47]

يَا أَيُّهَا الَّذِينَ آمَنُوا إِنَّمَا الْخَمْرُ وَالْمَيْسِرُ
وَالْأَنْصَابُ وَالْأَزْلَامُ رِجْسٌ مِنْ عَمَلِ
الشَّيْطَانِ فَاجْتَنِبُوهُ لَعَلَّكُمْ تُفْلِحُونَ ﴿٩٠﴾

91. ಶೈತಾನನು ಮದ್ಯ ಮತ್ತು ಜೂಜಿನ ಮೂಲಕ ನಿಮ್ಮೊಳಗೆ ವೈರತ್ವ ಮತ್ತು ದ್ವೇಷವನ್ನುಂಟು ಮಾಡಲಿಕ್ಕೂ ನಿಮ್ಮನ್ನು

إِنَّمَا يُرِيدُ الشَّيْطَانُ أَنْ يُوقِعَ بَيْنَكُمُ الْعَدَاوَةَ
وَالْبَغْضَاءَ فِي الْخَمْرِ وَالْمَيْسِرِ وَيَصُدَّكُمْ

47. ಮದ್ಯಪಾನ ನಿಷೇಧದ ಕುರಿತು ಇದಕ್ಕೆ ಮೊದಲು ಎರಡು ಆದೇಶಗಳು ಬಂದಿದ್ದುವು. ಅವು ಅಲ್‌ಬಕರಃ ಅಧ್ಯಾಯದ 219 ಮತ್ತು ಅನ್ನಿಸಾ ಅಧ್ಯಾಯದ 43ನೆಯ ಸೂಕ್ತದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಈ ಕೊನೆಯ ಆದೇಶ ಬರುವುದಕ್ಕೆ ಮೊದಲು ಪ್ರವಾದಿವರ್ಯರು(ಸ) ತಮ್ಮ ಪ್ರವಚನವೊಂದರಲ್ಲಿ ಮದ್ಯಪಾನ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಅಪ್ರಿಯವಾಗಿದೆ, ಅದನ್ನು ನಿಷೇಧಿಸುವಂತಹ ಕಟ್ಟುನಿಟ್ಟಿನ ಆಜ್ಞೆ ಬಂದರೆ ಆಶ್ಚರ್ಯವಿಲ್ಲ. ಆದ್ದರಿಂದ ಮದ್ಯವನ್ನು ಹೊಂದಿರುವವರು ಅದನ್ನು ಮಾರಾಟ ಮಾಡಲಿ ಎಂದು ಜನರನ್ನು ಎಚ್ಚರಿಸಿದ್ದರು. ಅದರ ಸ್ವಲ್ಪ ಕಾಲದ ನಂತರ ಈ ಸೂಕ್ತ ಅವತೀರ್ಣಗೊಂಡಿತು. ಅನಂತರ ಪ್ರವಾದಿವರ್ಯರು(ಸ) ಮದ್ಯವನ್ನು ಹೊಂದಿರುವವರು ಅದನ್ನು ಕುಡಿಯುವುದಾಗಲಿ ಮಾರುವುದಾಗಲಿ ಸಲ್ಲದು, ಅದನ್ನು ನಾಶಪಡಿಸಬೇಕು ಎಂದು ಆದೇಶ ಹೊರಡಿಸಿದರು. ಆದ್ದರಿಂದ ಮದೀನಾದ ಚರಂಡಿಗಳಲ್ಲಿ ಮದ್ಯಹರಿಸಲ್ಪಟ್ಟಿತು.

ಅಲ್ಲಾಹನ ಸ್ಮರಣೆಯಿಂದಲೂ ನಮಾಝಿನಿಂದಲೂ ತಡೆಯಲಿಕ್ಕೂ ಇಚ್ಛಿಸುತ್ತಾನೆ. ಇನ್ನಾದರೂ ನೀವು ಅವುಗಳನ್ನು ತ್ಯಜಿಸುವಿರಾ?

عَنْ ذِكْرِ اللّٰهِ وَعَنِ الصَّلٰوةِ ۚ فَهَلْ
اَنْتُمْ مُّنْتَهُوْنَ ﴿٩١﴾

92. ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಮಾತನ್ನು ಕೇಳಿರಿ ಮತ್ತು (ಪ್ರಸ್ತುತ ಕೆಡುಕುಗಳನ್ನು) ವರ್ಜಿಸಿರಿ. ಆದರೆ ನೀವು ಆಜ್ಞೋಲ್ಲಂಘನೆ ಮಾಡಿದರೆ ನಮ್ಮ ಸಂದೇಶವಾಹಕರಿಗೆ ಸುಸ್ಪಷ್ಟ ಆಜ್ಞೆಗಳನ್ನು ತಲಪಿಸುವ ಹೊಣೆಗಾರಿಕೆ ಮಾತ್ರವಿತ್ತೆಂಬುದನ್ನು ಅರಿತುಕೊಳ್ಳಿರಿ.

وَاَطِيْعُوا اللّٰهَ وَاَطِيْعُوا الرَّسُوْلَ وَاحْذَرُوْا ۚ
فَاِنْ تَوَلَّيْتُمْ فَاعْلَمُوْٓا اَنَّمَا عَلٰى رَسُوْلِنَا
الْبَلٰغُ الْمُبِيْنُ ﴿٩٢﴾

93. ಸತ್ಯವಿಶ್ವಾಸವಿರಿಸಿ ಸತ್ಕರ್ಮಗಳನ್ನು ಕೈಗೊಳ್ಳತೊಡಗಿದವರು ಹಿಂದೆ ಏನನ್ನು ಉಂಡಿದ್ದರೂ ಅಥವಾ ಕುಡಿದಿದ್ದರೂ ಮುಂದೆ 'ನಿಷಿದ್ಧ' ಎಂದು ವಿಧಿಸಲ್ಪಟ್ಟ ವಸ್ತುಗಳಿಂದ ದೂರವಿದ್ದರೆ ಹಾಗೂ 'ಸತ್ಯವಿಶ್ವಾಸ'ದಲ್ಲೇ ಸ್ಥಿರವಾಗಿದ್ದರೆ, ಸತ್ಕರ್ಮಗಳನ್ನು ಮಾಡಿದರೆ, ಅನಂತರ ಯಾವ ಯಾವ ವಸ್ತುವಿನಿಂದ ತಡೆಯಲಾಗುವುದೋ ಅದರಿಂದ ತಡೆದು ನಿಂತರೆ, ಅಲ್ಲಾಹನ 'ಆಜ್ಞೆ'ಯನ್ನು ಸ್ವೀಕರಿಸಿದರೆ ಮತ್ತು ಆ ಬಳಿಕ ದೇವಭಯದೊಂದಿಗೆ ಪುಣ್ಯ ಕಾರ್ಯನಿರತ ರಾದರೆ ದೋಷವಿಲ್ಲ. ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ.

لَيْسَ عَلَى الَّذِيْنَ اٰمَنُوْا وَعَمِلُوا الصّٰلِحٰتِ
جُنَاحٌ فِيْمَا طَعِمُوْٓا اِذَا مَا اتَّقَوْا وَّاٰمَنُوْا
وَعَمِلُوا الصّٰلِحٰتِ ثُمَّ اتَّقَوْا وَّاٰمَنُوْا ثُمَّ
اتَّقَوْا وَّاَحْسَنُوْا ۗ وَاللّٰهُ يُحِبُّ الْمُحْسِنِيْنَ ﴿٩٣﴾

94. ಓ ಸತ್ಯವಿಶ್ವಾಸಿಗಳೇ, ನಿಮ್ಮಲ್ಲಿ ಯಾರು ಅಲ್ಲಾಹನನ್ನು ಪರೋಕ್ಷವಾಗಿಯೂ ಭಯಪಡುತ್ತಾನೆಂದು ನೋಡಲಿಕ್ಕಾಗಿ ಅವನು ನಿಮ್ಮ ಕೈಗಳ ಮತ್ತು ಭರ್ಜಿಗಳ ಹೊಡೆತದಲ್ಲಿರುವ ಬೇಟೆಗಳ ಮೂಲಕ ನಿಮ್ಮನ್ನು ಕಠಿಣತರ ಪರೀಕ್ಷೆಗೊಳಪಡಿಸುವನು. ಈ ಎಚ್ಚರಿಕೆಯ ಅನಂತರವೂ ಅಲ್ಲಾಹನು ನಿಶ್ಚಯಿಸಿದ ಮೇರೆಯನ್ನು ಮೀರುವಾತನಿಗೆ ವೇದನಾಯುಕ್ತ ಶಿಕ್ಷೆ ಕಾದಿದೆ.

يٰٓاَيُّهَا الَّذِيْنَ اٰمَنُوْا لَيَبْلُوَنَّكُمُ اللّٰهُ بِشَيْءٍ
مِّنَ الصَّيْدِ تَنَالُهٗٓ اَيْدِيْكُمْ وَرِمَاحُكُمْ
لِيَعْلَمَ اللّٰهُ مَنْ يَّخَافُهٗ بِالْغَيْبِ ۚ فَمَنِ
اعْتَدٰى بَعْدَ ذٰلِكَ فَلَهٗ عَذَابٌ اَلِيْمٌ ﴿٩٤﴾

95. ಓ ಸತ್ಯವಿಶ್ವಾಸಿಗಳೇ ಇಹ್ರಾಮಿನ ಸ್ಥಿತಿಯಲ್ಲಿ ಬೇಟೆಪ್ರಾಣಿಗಳನ್ನು[48] ಕೊಲ್ಲಬೇಡಿರಿ. ನಿಮ್ಮಲ್ಲಾರಾದರೂ ಉದ್ದೇಶಪೂರ್ವಕವಾಗಿ ಹೀಗೆ ಮಾಡಿಬಿಟ್ಟರೆ, ಅವನು ತಾನು ಮಾಡಿದ ಕರ್ಮದ ಸವಿಯನ್ನು ಅನುಭವಿಸುವಂತಾಗಲು ನಿಮ್ಮಲ್ಲಿನ ಇಬ್ಬರು ನ್ಯಾಯಶಾಲಿಗಳು ತೀರ್ಮಾನಿಸುವಂತೆ ಅವನು ಕೊಂದ ಪ್ರಾಣಿಗೆ ಸಮಾನವಾದ

يٰٓاَيُّهَا الَّذِيْنَ اٰمَنُوْا لَا تَقْتُلُوا الصَّيْدَ
وَاَنْتُمْ حُرُمٌ ۗ وَمَنْ قَتَلَهٗ مِنْكُمْ مُّتَعَمِّدًا
فَجَزَآءٌ مِّثْلُ مَا قَتَلَ مِنَ النَّعَمِ يَحْكُمُ
بِهٖ ذَوَا عَدْلٍ مِّنْكُمْ هَدْيًاۢ بٰلِغَ الْكَعْبَةِ

48. ಇಹ್ರಾಮ್‌ನ ಸಂದರ್ಭದಲ್ಲಿ ಸ್ವತಃ ಬೇಟೆಯಾಡುವುದು ಅಥವಾ ಬೇಟೆಯಾಡುವವನಿಗೆ ನೆರವಾಗುವುದು ನಿಷಿದ್ಧ. ಇಹ್ರಾಮ್ ಧರಿಸಿರುವವರಿಗಾಗಿಯೇ ಬೇಟೆಯಾಡಲಾಗಿದ್ದರೂ ಅದರ ಸೇವನೆ ಇಹ್ರಾಮಿನಲ್ಲಿರುವವನಿಗೆ ಧರ್ಮಸಮ್ಮತವಲ್ಲ. ಆದರೆ ಯಾರಾದರೂ ತನಗಾಗಿ ಬೇಟೆಯಾಡಿದ್ದು, ಅದರ ಒಂದು ಭಾಗವನ್ನು ಇಹ್ರಾಮಿನಲ್ಲಿರುವವನ ಸೇವನೆಗೆಂದು ಉಡುಗೊರೆಯ ರೂಪದಲ್ಲಿ ಕಳುಹಿಸಿದ್ದರೆ ಅದನ್ನು ಸೇವಿಸುವುದರಲ್ಲಿ ಅಭ್ಯಂತರವಿಲ್ಲ. ಅಪಾಯಕಾರಿ ಪ್ರಾಣಿಗಳು ಈ ಸಾಮಾನ್ಯ ಆದೇಶದಿಂದ ಹೊರತಾಗಿವೆ. ಉದಾ: ಸರ್ಪ, ಚೇಳು, ಹುಚ್ಚು ನಾಯಿ ಮತ್ತಿತರ ಅಪಾಯಕರ ಜಂತುಗಳನ್ನು ಇಹ್ರಾಮಿನ ಸಂದರ್ಭದಲ್ಲೂ ಕೊಲ್ಲಬಹುದಾಗಿದೆ.

ಒಂದು ಬಲಿಪಶುವನ್ನು ಕಾಣಿಕೆಯಾಗಿ ಕೊಡಬೇಕಾಗುವುದು ಮತ್ತು ಈ ಕಾಣಿಕೆಯು 'ಕಅಬಾ'ಕ್ಕೆ ತಲಪಿಸಲ್ಪಡುವುದು. ಇಲ್ಲವಾದರೆ ಅವನು ಮಾಡಿದುದರ ಫಲವುಣ್ಣುವಂತಾಗಲು ಈ ಪಾಪದ ಪ್ರಾಯಶ್ಚಿತ್ತ ರೂಪದಲ್ಲಿ ಕೆಲವು ಮಂದಿ ದರಿದ್ರರಿಗೆ ಊಟ ಕೊಡಬೇಕಾಗುವುದು ಅಥವಾ ಅದಕ್ಕನುಗುಣವಾಗಿ ಉಪವಾಸವಿಡಬೇಕಾಗುವುದು. ಹಿಂದೆ ಆಗಿ ಹೋದುದನ್ನು ಅಲ್ಲಾಹನು ಕ್ಷಮಿಸಿಬಿಟ್ಟನು. ಆದರೆ, ಇನ್ನು ಯಾರಾದರೂ ಈ ಕೃತ್ಯವನ್ನು ಪುನರಾವರ್ತಿಸಿದರೆ, ಅಲ್ಲಾಹನು ಅವನಿಂದ ಪ್ರತೀಕಾರ ಪಡೆದೇ ತೀರುವನು. ಅಲ್ಲಾಹನು ಮಹಾ ಪ್ರತಾಪಶಾಲಿಯೂ ಪ್ರತೀಕಾರ ಪಡೆಯಲು ಶಕ್ತನೂ ಆಗಿರುತ್ತಾನೆ.

اَوْ كَفَّارَةٌ طَعَامُ مَسٰكِيْنَ اَوْ عَدْلُ ذٰلِكَ
صِيَامًا لِّيَذُوْقَ وَبَالَ اَمْرِهٖ ؕ عَفَا اللّٰهُ عَمَّا
سَلَفَ ؕ وَمَنْ عَادَ فَيَنْتَقِمُ اللّٰهُ مِنْهُ ؕ
وَاللّٰهُ عَزِيْزٌ ذُو انْتِقَامٍ ﴿۹۵﴾

96. ಸಮುದ್ರದ ಬೇಟೆ ಮತ್ತು ಅದನ್ನು ತಿನ್ನುವುದು ನಿಮಗೆ 'ಧರ್ಮಸಮ್ಮತ'ಗೊಳಿಸಲ್ಪಟ್ಟಿದೆ. ನೀವು ತಂಗಿದಲ್ಲಿಯೂ ಅದನ್ನುಣ್ಣಬಹುದು. ಯಾತ್ರಿಕರ ತಂಡಕ್ಕಾಗಿಯೂ ಅದನ್ನು ಆಹಾರವಾಗಿ ಮಾಡಿಕೊಳ್ಳಬಹುದು. ಆದರೆ ನೀವು ಇಹ್ರಾಮಿನ ಸ್ಥಿತಿಯಲ್ಲಿರುವ ತನಕ ಭೂಭಾಗದ ಬೇಟೆಯು ನಿಮಗೆ 'ನಿಷಿದ್ಧ'ಗೊಳಿಸಲ್ಪಟ್ಟಿದೆ. ಆದುದರಿಂದ ಯಾವಾತನ ಸನ್ನಿಧಿಯಲ್ಲಿ ನಿಮ್ಮೆಲ್ಲರನ್ನು ಸುತ್ತುವರಿದು ಹಾಜರುಪಡಿಸಲಾಗುವುದೋ ಆ ಅಲ್ಲಾಹನ ಅವಿಧೇಯತೆಯಿಂದ ದೂರವಿರಿ.

اُحِلَّ لَكُمْ صَيْدُ الْبَحْرِ وَطَعَامُهٗ مَتَاعًا
لَّكُمْ وَلِلسَّيَّارَةِ ۚ وَحُرِّمَ عَلَيْكُمْ صَيْدُ
الْبَرِّ مَا دُمْتُمْ حُرُمًا ؕ وَاتَّقُوا اللّٰهَ الَّذِيْۤ
اِلَيْهِ تُحْشَرُوْنَ ﴿۹۶﴾

97. ಅಲ್ಲಾಹನು ಪ್ರತಿಷ್ಠಿತ ಭವನವಾದ 'ಕಅಬಾ'ವನ್ನು ಜನರ ಪಾಲಿಗೆ (ಸಾಮೂಹಿಕ ಜೀವನವನ್ನು) ನೆಲೆನಿಲ್ಲಿಸುವ ಸಾಧನವಾಗಿ ಮಾಡಿದನು ಮತ್ತು ಪ್ರತಿಷ್ಠಿತ ತಿಂಗಳನ್ನೂ ಬಲಿಪಶುಗಳನ್ನೂ ಕೊರಳಪಟ್ಟಿಗಳನ್ನೂ (ಈ ಕಾರ್ಯಕ್ಕೆ ಸಹಾಯಕವನ್ನಾಗಿ ಮಾಡಿದನು.) ಇದು ಅಲ್ಲಾಹನು ಭೂಮಿ-ಆಕಾಶಗಳ ಸಕಲ ವೃತ್ತಾಂತಗಳನ್ನು ಅರಿಯುವವನೆಂದೂ ಅವನಿಗೆ ಎಲ್ಲ ವಸ್ತುಗಳ ಪರಿಜ್ಞಾನವಿರುವುದೆಂದೂ ನೀವು ತಿಳಿದುಕೊಳ್ಳಲಿಕ್ಕಾಗಿರುತ್ತದೆ.

جَعَلَ اللّٰهُ الْكَعْبَةَ الْبَيْتَ الْحَرَامَ قِيٰمًا
لِّلنَّاسِ وَالشَّهْرَ الْحَرَامَ وَالْهَدْيَ
وَالْقَلَآئِدَ ؕ ذٰلِكَ لِتَعْلَمُوْۤا اَنَّ اللّٰهَ يَعْلَمُ
مَا فِي السَّمٰوٰتِ وَمَا فِي الْاَرْضِ وَاَنَّ اللّٰهَ
بِكُلِّ شَيْءٍ عَلِيْمٌ ﴿۹۷﴾

98. ಅಲ್ಲಾಹನು ಶಿಕ್ಷೆ ನೀಡುವುದರಲ್ಲಿಯೂ ಅತ್ಯುಗ್ರನು ಮತ್ತು ಅದರೊಂದಿಗೆ ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ.

اِعْلَمُوْۤا اَنَّ اللّٰهَ شَدِيْدُ الْعِقَابِ وَاَنَّ
اللّٰهَ غَفُوْرٌ رَّحِيْمٌ ؕ ﴿۹۸﴾

99. ಸಂದೇಶವಾಹಕರ ಮೇಲೆ ಸಂದೇಶವನ್ನು ತಲುಪಿಸುವ ಹೊಣೆ ಮಾತ್ರವಿದೆ. ಮುಂದೆ ನಿಮ್ಮ ಅಂತರಂಗ ಬಹಿರಂಗಗಳ ಸಕಲ ಸ್ಥಿತಿಗಳನ್ನು ತಿಳಿಯುವವನು ಅಲ್ಲಾಹನು.

مَا عَلَى الرَّسُوْلِ اِلَّا الْبَلٰغُ ؕ وَاللّٰهُ يَعْلَمُ
مَا تُبْدُوْنَ وَمَا تَكْتُمُوْنَ ﴿۹۹﴾

100. ಓ ಸಂದೇಶವಾಹಕರೇ, ಅವರೊಡನೆ ಹೇಳಿರಿ, ಅಶುದ್ಧದ ಹೆಚ್ಚಳವು ನಿಮಗೆ ಎಷ್ಟು ಮೋಹಕವಾಗಿ ಕಂಡರೂ ಶುದ್ಧ ಮತ್ತು ಅಶುದ್ಧಗಳು ಎಷ್ಟಕ್ಕೂ ಸಮಾನವಲ್ಲ.[49] ಆದುದರಿಂದ ಓ ಬುದ್ಧಿಜೀವಿಗಳೇ, ಅಲ್ಲಾಹನ ಆಜ್ಞೋಲ್ಲಂಘನೆಯಿಂದ ದೂರವಿರಿ. ಇದರಿಂದ ನಿಮಗೆ ವಿಜಯ ಪ್ರಾಪ್ತವಾಗಬಹುದೆಂದು ನಿರೀಕ್ಷಿಸಬಹುದು.

قُلْ لَّا يَسْتَوِي الْخَبِيْثُ وَالطَّيِّبُ وَلَوْ
اَعْجَبَكَ كَثْرَةُ الْخَبِيْثِ ۚ فَاتَّقُوا اللّٰهَ يٰٓاُولِي
الْاَلْبَابِ لَعَلَّكُمْ تُفْلِحُوْنَ ﴿١٠٠﴾

101. ಓ ಸತ್ಯವಿಶ್ವಾಸಿಗಳೇ, ಬಹಿರಂಗಗೊಳಿಸಿದರೆ ನಿಮಗೆ ಅಪ್ರಿಯ ವಾಗಬಹುದಾದಂಥ ವಿಷಯಗಳ ಬಗ್ಗೆ ಪ್ರಶ್ನಿಸಬೇಡಿ.[50] ಆದರೆ, ಕುರ್‌ಆನ್ ಅವತೀರ್ಣಗೊಳ್ಳುತ್ತಿರುವಾಗ ಅಂತಹವುಗಳ ಕುರಿತು ಕೇಳಿದರೆ, ಅವು ನಿಮಗೆ ಪ್ರಕಟಗೊಳಿಸಲ್ಪಡುವುವು. ನೀವು ಇಷ್ಟರ ತನಕ ಮಾಡಿರುವುದನ್ನು ಅಲ್ಲಾಹನು ಕ್ಷಮಿಸಿಬಿಟ್ಟನು. ಅವನು ಕ್ಷಮಾಶೀಲನೂ ಸಹನಾಶೀಲನೂ ಆಗಿರುತ್ತಾನೆ.

يٰٓاَيُّهَا الَّذِيْنَ اٰمَنُوْا لَا تَسْـَٔلُوْا عَنْ اَشْيَآءَ
اِنْ تُبْدَ لَكُمْ تَسُؤْكُمْ ۚ وَاِنْ تَسْـَٔلُوْا عَنْهَا
حِيْنَ يُنَزَّلُ الْقُرْاٰنُ تُبْدَ لَكُمْ ۚ عَفَا اللّٰهُ
عَنْهَا ۚ وَاللّٰهُ غَفُوْرٌ حَلِيْمٌ ﴿١٠١﴾

102. ನಿಮಗಿಂತ ಮುಂಚೆ ಒಂದು ಜನಾಂಗವು ಇದೇ ತರದ ಪ್ರಶ್ನೆ ಗಳನ್ನು ಕೇಳಿತ್ತು. ಮುಂದೆ ಅವರು ಈ ವಿಷಯಗಳಿಂದಾಗಿಯೇ 'ಸತ್ಯನಿಷೇಧ'ದಲ್ಲಿ ಸಿಲುಕಿಬಿಟ್ಟರು.

قَدْ سَاَلَهَا قَوْمٌ مِّنْ قَبْلِكُمْ ثُمَّ اَصْبَحُوْا
بِهَا كٰفِرِيْنَ ﴿١٠٢﴾

103. ಅಲ್ಲಾಹನು ಯಾವುದೇ 'ಬಹೀರಃ'ವನ್ನಾಗಲೀ 'ಸಾಯಿಬಃ 'ವನ್ನಾಗಲೀ 'ವಸೀಲ'ವನ್ನಾಗಲೀ 'ಹಾಮ'ವನ್ನಾಗಲೀ ನಿಶ್ಚ ಯಿಸಿಲ್ಲ.[51] ಆದರೆ ಈ ಸತ್ಯನಿಷೇಧಿಗಳು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುತ್ತಾರೆ ಮತ್ತು ಅವರಲ್ಲಿ ಹೆಚ್ಚಿನವರು (ಇಂತಹ ಭ್ರಾಮಕ ವಿಷಯಗಳನ್ನು ನಂಬುವ) ಬುದ್ಧಿಹೀನರು.

مَا جَعَلَ اللّٰهُ مِنْۢ بَحِيْرَةٍ وَّلَا سَآئِبَةٍ
وَّلَا وَصِيْلَةٍ وَّلَا حَامٍ ۙ وَّلٰكِنَّ الَّذِيْنَ
كَفَرُوْا يَفْتَرُوْنَ عَلَى اللّٰهِ الْكَذِبَ ۗ وَ
اَكْثَرُهُمْ لَا يَعْقِلُوْنَ ﴿١٠٣﴾

49. ಈ ಸೂಕ್ತ, ಬೆಲೆ ಮತ್ತು ಮೌಲ್ಯಗಳ ವಿಶಿಷ್ಟ ಮಾನದಂಡವನ್ನು ನಮ್ಮ ಮುಂದಿರಿಸುತ್ತದೆ. ಇದು ಮೇಲ್ನೋಟಕ್ಕೆ ಮಾನವ ನಿರ್ಧರಿಸುವ ಮಾನದಂಡಕ್ಕಿಂತ ತೀರಾ ಭಿನ್ನವಾಗಿದೆ. ಮೇಲ್ನೋಟಕ್ಕೆ ನೂರು ರೂಪಾಯಿ ಖಂಡಿತವಾಗಿಯೂ ಐದು ರೂಪಾಯಿಗಿಂತ ಹೆಚ್ಚು ಬೆಲೆ ಬಾಳುವುದೆಂದು ತೋರುತ್ತದೆ. ಏಕೆಂದರೆ ನೂರು ಮತ್ತು ಐದರ ನಡುವೆ ದೊಡ್ಡ ವ್ಯತ್ಯಾಸವಿದೆ. ಆದರೆ ಈ ಸೂಕ್ತದ ಪ್ರಕಾರ ನೂರು ರೂಪಾಯಿಗಳನ್ನು ದೇವನ ಆಜ್ಞೋಲ್ಲಂಘನೆಯ ಮೂಲಕ ಸಂಪಾದಿಸಲಾಗಿದ್ದರೆ ಅದು ಅಶುದ್ಧವಾಗಿದೆ. ದೇವನ ಅನುಸರಣೆಯೊಂದಿಗೆ ಐದು ರೂಪಾಯಿಯನ್ನು ಸಂಪಾದಿಸಲಾಗಿದ್ದರೆ ಅದು ಶುದ್ಧವಾಗಿದೆ. ಅಶುದ್ಧವಾದುದು ಪ್ರಮಾಣದಲ್ಲಿ ಎಷ್ಟೇ ಹೆಚ್ಚಿದ್ದರೂ ಅದು ಶುದ್ಧವಾದುದಕ್ಕೆ ತುಲ್ಯವಾಗಲಾರದು.

50. ಪ್ರವಾದಿವರ್ಯರೊಂದಿಗೆ(ಸ) ಕೆಲವರು ಚಿತ್ರವಿಚಿತ್ರವಾದ ನಿರರ್ಥಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವು ಧಾರ್ಮಿಕವಾಗಿಯೂ ಲೌಕಿಕವಾಗಿಯೂ ನಿರರ್ಥಕವಾದ ಪ್ರಶ್ನೆಗಳಾಗಿದ್ದವು. ಆದ್ದರಿಂದ ಈ ಎಚ್ಚರಿಕೆ ನೀಡಲಾಗಿದೆ.

51. ಇದು ಅರಬರಲ್ಲಿದ್ದ ಮೂಢನಂಬಿಕೆಗಳ ಪ್ರಸ್ತಾಪವಾಗಿದೆ. ಬಹೀರಃ:- ಐದು ಬಾರಿ ಮರಿ ಹಾಕಿದ ಮತ್ತು ಕೊನೆಯಲ್ಲಿ ಗಂಡು ಮರಿಗೆ ಜನ್ಮ ನೀಡಿದ ಒಂಟೆಯನ್ನು ಅವರು 'ಬಹೀರ' ಎನ್ನುತ್ತಿದ್ದರು. ಅಜ್ಞಾನ ಕಾಲದಲ್ಲಿ ಅರಬರು ಅಂತಹ ಒಂಟೆಯ ಕಿವಿಯನ್ನು ಕತ್ತರಿಸಿ ಅದನ್ನು ಸ್ವತಂತ್ರವಾಗಿ ಬಿಟ್ಟು ಬಿಡುತ್ತಿದ್ದರು. ಅನಂತರ ಯಾರೂ ಅದರ ಮೇಲೆ ಸವಾರಿ ಮಾಡುವುದಾಗಲಿ, ಹಾಲು ಕರೆಯುವುದಾಗಲಿ, ಉಣ್ಣೆಯನ್ನು ತೆಗೆಯುವುದಾಗಲಿ ಮಾಡುತ್ತಿರಲಿಲ್ಲ. ಯಾವ ಹೊಲ ಅಥವಾ ಹುಲ್ಲುಗಾವಲಿನ ಹುಲ್ಲು ಮೇಯಲಿಕ್ಕೂ ಎಲ್ಲಿಂದ ಬೇಕಾದರೂ ನೀರು ಕುಡಿಯಲಿಕ್ಕೂ ಅದಕ್ಕೆ ಸ್ವಾತಂತ್ರ್ಯವಿತ್ತು. ಸಾಯಿಬಃ- ಯಾವುದಾದರೂ ಆಕಾಂಕ್ಷೆ ಈಡೇರಿದ, ರೋಗ ಶಮನವಾದ

104. "ಅಲ್ಲಾಹನು ಅವತೀರ್ಣಗೊಳಿಸಿದ ಶಾಸನದ ಕಡೆಗೂ ಆತನ ಸಂದೇಶವಾಹಕರ ಕಡೆಗೂ ಬನ್ನಿರಿ" ಎಂದು ಅವರೊಡನೆ ಹೇಳಿದಾಗ ಅವರು, "ನಾವು ನಮ್ಮ ಪೂರ್ವಿಕರನ್ನು ಯಾವ ಮಾರ್ಗದಲ್ಲಿ ಕಂಡಿದ್ದೆವೋ ಅದೇ ನಮಗೆ ಸಾಕು" ಎಂದು ಹೇಳುತ್ತಾರೆ. ಪೂರ್ವಿಕರು ಏನೂ ಅರಿತಿರದಿದ್ದರೂ ಮತ್ತು ಅವರಿಗೆ ಸನ್ಮಾರ್ಗದ ಅರಿವೇ ಇಲ್ಲದಿದ್ದರೂ ಇವರು ಅವರನ್ನೇ ಅನುಕರಿಸುತ್ತಲಿರುವರೇ?

وَإِذَا قِيلَ لَهُمْ تَعَالَوْا إِلَىٰ مَا أَنزَلَ اللَّهُ
وَإِلَى الرَّسُولِ قَالُوا حَسْبُنَا مَا وَجَدْنَا
عَلَيْهِ آبَاءَنَا ۚ أَوَلَوْ كَانَ آبَاؤُهُمْ
لَا يَعْلَمُونَ شَيْئًا وَلَا يَهْتَدُونَ ﴿١٠٤﴾

105. ಓ ಸತ್ಯವಿಶ್ವಾಸಿಗಳೇ, ನೀವು ನಿಮ್ಮ ಬಗ್ಗೆ ಚಿಂತಿಸಿಕೊಳ್ಳಿರಿ. ನೀವು ಸ್ವತಃ ಸತ್ಪಥದಲ್ಲಿದ್ದರೆ ಇತರರ ಪಥಭ್ರಷ್ಟತೆಯಿಂದ ನಿಮಗೇನೂ ಕೇಡುಂಟಾಗದು.[52] ನಿಮಗೆಲ್ಲರಿಗೂ ಅಲ್ಲಾಹನ ಕಡೆಗೆ ಮರಳಿ ಸಾಗಲಿಕ್ಕಿದೆ. ನೀವೇನು ಮಾಡುತ್ತಿದ್ದಿರೆಂದು ಆಗ ಅವನು ನಿಮಗೆ ತೋರಿಸಿ ಕೊಡುವನು.

يَا أَيُّهَا الَّذِينَ آمَنُوا عَلَيْكُمْ أَنفُسَكُمْ ۖ لَا
يَضُرُّكُم مَّن ضَلَّ إِذَا اهْتَدَيْتُمْ ۚ إِلَى
اللَّهِ مَرْجِعُكُمْ جَمِيعًا فَيُنَبِّئُكُم بِمَا
كُنتُمْ تَعْمَلُونَ ﴿١٠٥﴾

106. ಓ ಸತ್ಯವಿಶ್ವಾಸಿಗಳೇ, ನಿಮಗಾರಿಗಾದರೂ ಮರಣದ ಕಾಲ ಬಂದಾಗ ಮತ್ತು ಅವನು 'ಉಯಿಲು' ಮಾಡುತ್ತಿರುವಾಗ ನಿಮ್ಮ ಕೂಟದಿಂದ ಇಬ್ಬರು ನ್ಯಾಯಶೀಲರನ್ನು[53] ಸಾಕ್ಷಿ

يَا أَيُّهَا الَّذِينَ آمَنُوا شَهَادَةُ بَيْنِكُمْ إِذَا
حَضَرَ أَحَدَكُمُ الْمَوْتُ حِينَ الْوَصِيَّةِ

ಅಥವಾ ಅಪಾಯದಿಂದ ಪಾರಾದ ಕಾರಣಕ್ಕಾಗಿ ಕೃತಜ್ಞತೆಯ ರೂಪದಲ್ಲಿ ಹರಕೆಗೆ ಬಿಡಲಾದ ಒಂಟೆಯನ್ನು ಸಾಯಿಬಃ ಎನ್ನಲಾಗುತ್ತದೆ. ಅಲ್ಲದೆ ಹತ್ತು ಬಾರಿ ಹೆಣ್ಣು ಮರಿಯನ್ನೇ ಹಾಕಿದ ಒಂಟೆಯನ್ನೂ ಸ್ವತಂತ್ರವಾಗಿ ಬಿಟ್ಟು ಬಿಡಲಾಗುತ್ತಿತ್ತು.

ವಸೀಲ:- ಆಡಿನ ಮೊದಲ ಮರಿ ಗಂಡಾಗಿದ್ದರೆ ಅದನ್ನು ದೇವರುಗಳ ಹೆಸರಲ್ಲಿ ಬಲಿಯರ್ಪಿಸಲಾಗುತ್ತಿತ್ತು. ಹೆಣ್ಣು ಮರಿಯಾದರೆ ಅದನ್ನು ಇಟ್ಟುಕೊಳ್ಳಲಾಗುತ್ತಿತ್ತು. ಹೆಣ್ಣು ಮತ್ತು ಗಂಡು ಮರಿಗಳೆರಡೂ ಒಟ್ಟಿಗೆ ಜನಿಸಿದರೆ ಗಂಡು ಮರಿಯನ್ನು ಬಲಿಯರ್ಪಿಸುವ ಬದಲು ದೇವರುಗಳ ಹೆಸರಲ್ಲಿ ಸ್ವತಂತ್ರವಾಗಿ ಬಿಟ್ಟು ಬಿಡುತ್ತಿದ್ದರು. ಇದರ ಹೆಸರೇ 'ವಸೀಲ.'

ಹಾಮ್:- ಒಂಟೆಯೊಂದರ ಮೊಮ್ಮರಿಯು ಸವಾರಿ ಮಾಡಲರ್ಹವಾಗುವಷ್ಟು ಬೆಳೆದು ನಿಂತರೆ ಆ ಮುದಿ ಒಂಟೆಯನ್ನು ಸ್ವತಂತ್ರವಾಗಿ ಬಿಟ್ಟು ಬಿಡಲಾಗುತ್ತಿತ್ತು. ಹಾಗೆಯೇ ಯಾವುದಾದರೂ ಗಂಡು ಒಂಟೆಯ ವೀರ್ಯದಿಂದ ಹತ್ತು ಮರಿಗಳು ಹುಟ್ಟಿದ್ದರೆ ಅದನ್ನೂ ಸ್ವತಂತ್ರಗೊಳಿಸಲಾಗುತ್ತಿತ್ತು.

52. ಅರ್ಥಾತ್- ಸದಾ ಇನ್ನೊಬ್ಬ ಏನು ಮಾಡುತ್ತಿದ್ದಾನೆ, ಯಾರ ವಿಶ್ವಾಸದಲ್ಲಿ ಎಂತಹ ದೋಷಗಳಿವೆ, ಯಾರಲ್ಲಿ ಎಂತಹ ದುಷ್ಕೃತ್ಯಗಳಿವೆ ಎಂಬಿತ್ಯಾದಿಗಳನ್ನು ನೋಡುವ ಬದಲು ವ್ಯಕ್ತಿ ಸ್ವತಃ ತಾನೇನು ಮಾಡುತ್ತಿದ್ದೇನೆ ಎಂದು ನೋಡಿಕೊಳ್ಳಬೇಕು. ಆದರೆ ವ್ಯಕ್ತಿ ತನ್ನ ಮೋಕ್ಷದ ಬಗ್ಗೆ ಮಾತ್ರ ಚಿಂತಿಸಬೇಕು, ಇತರರ ಸುಧಾರಣೆಯ ಬಗ್ಗೆ ಆಲೋಚಿಸಬಾರದು ಎಂದು ಅರ್ಥವಲ್ಲ. ಈ ತಪ್ಪುಕಲ್ಪನೆಯನ್ನು ನೀಗಿಸುತ್ತಾ ಹ. ಅಬೂಬಕರ್ ಸಿದ್ದೀಕ್(ರ) ತಮ್ಮ ಪ್ರವಚನವೊಂದರಲ್ಲಿ ಹೀಗೆ ಹೇಳಿದ್ದಾರೆ, "ಜನರೇ,! ನೀವು ಈ ಸೂಕ್ತವನ್ನು ಓದುತ್ತೀರಿ ಮತ್ತು ಅದನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತೀರಿ. ಕೆಡುಕನ್ನು ನೋಡಿ ಅದನ್ನು ಪರಿವರ್ತಿಸಲು ಪ್ರಯತ್ನಿಸದ, ಅಕ್ರಮವನ್ನು ಕಂಡೂ ಅಕ್ರಮಿಯ ಕೈ ಹಿಡಿಯದ ಸ್ಥಿತಿಗೆ ಜನರು ತಲಪಿದರೆ ಅಲ್ಲಾಹನ ಯಾತನೆ ಎಲ್ಲರನ್ನೂ ಆವರಿಸಿಕೊಳ್ಳಬಹುದು ಎಂದು ಪ್ರವಾದಿವರ್ಯರು(ಸ) ಹೇಳಿದುದನ್ನು ನಾನು ಕೇಳಿದ್ದೇನೆ. ಆದ್ದರಿಂದ ದೇವನಾಣೆಗೂ ಒಳಿತಿನ ಆದೇಶ ಕೊಡುವುದು ಮತ್ತು ಕೆಡುಕಿನಿಂದ ತಡೆಯುವುದು ನಿಮ್ಮ ಮೇಲೆ ಕಡ್ಡಾಯ. ಅನ್ಯಥಾ ನಿಮ್ಮಲ್ಲಿ ಅತ್ಯಂತ ಕೀಳ್ಮಟ್ಟದವರನ್ನು ಅಲ್ಲಾಹನು ನಿಮ್ಮ ಮೇಲೆ ಅಧಿಕಾರ ಉಳ್ಳವರಾಗಿ ಮಾಡುವನು. ಅವರು ನಿಮಗೆ ತೀವ್ರತರ ಯಾತನೆಗಳನ್ನುಂಟು ಮಾಡುವರು. ಅಂತಹ ಸಂದರ್ಭದಲ್ಲಿ ನಿಮ್ಮಲ್ಲಿನ ಸದ್ಭಕ್ತರು ಅಲ್ಲಾಹನೊಡನೆ ಪ್ರಾರ್ಥಿಸುವರು, ಆದರೆ ಅದು ಸ್ವೀಕರಿಸಲ್ಪಡಲಾರದು."

53. ಅರ್ಥಾತ್- ಧರ್ಮಿಷ್ಠನೂ, ಸತ್ಯಸಂಧನೂ ನಂಬಲರ್ಹನೂ ಆದ ಓರ್ವ ಮುಸ್ಲಿಮ್.

ثْنٰنِ ذَوَا عَدْلٍ مِّنْكُمْ اَوْ اٰخَرٰنِ مِنْ
غَيْرِكُمْ اِنْ اَنْتُمْ ضَرَبْتُمْ فِى الْاَرْضِ
فَاَصَابَتْكُمْ مُّصِيْبَةُ الْمَوْتِ ؕ تَحْبِسُوْنَهُمَا
مِنْۢ بَعْدِ الصَّلٰوةِ فَيُقْسِمٰنِ بِاللّٰهِ اِنِ
ارْتَبْتُمْ لَا نَشْتَرِىْ بِهٖ ثَمَنًا وَّلَوْ كَانَ ذَا
قُرْبٰى ۙ وَلَا نَكْتُمُ شَهَادَةَ ۙ اللّٰهِ اِنَّاۤ اِذًا
لَّمِنَ الْاٰثِمِيْنَ ﴿١٠٦﴾

ಗಳನ್ನಾಗಿರಿಸಿಕೊಳ್ಳಬೇಕು ಅಥವಾ ನೀವು ಪ್ರಯಾಣದಲ್ಲಿದ್ದಾಗ ನಿಮಗೆ ಮರಣಯಾತನೆಯುಂಟಾದರೆ ಪರ(ಧರ್ಮೀಯ)ರಿಂದ ಲಾದರೂ ಇಬ್ಬರನ್ನು ಸಾಕ್ಷಿಗಳಾಗಿರಿಸಿಕೊಳ್ಳಿರಿ. ಆ ಬಳಿಕ ಸಂದೇಹವೇನಾದರೂ ಉಂಟಾದರೆ ಇಬ್ಬರು ಸಾಕ್ಷಿದಾರರನ್ನೂ ನಮಾಝಿನ ಬಳಿಕ (ಮಸೀದಿಯೊಳಗೆ) ತಡೆದಿರಿಸಬೇಕು. ಅವರು ಅಲ್ಲಾಹನ ಪ್ರಮಾಣ ಮಾಡುತ್ತ, "ಒಬ್ಬನು ನಮ್ಮ ಬಂಧು ಬಳಗದವನೇ ಆಗಿದ್ದರೂ (ನಾವು ಅವನಿಗೆ ರಿಯಾಯಿತಿ ತೋರಿಸುವವರಲ್ಲ) ನಾವು ಯಾವುದೇ ಸ್ವಂತ ಲಾಭಕ್ಕಾಗಿ ಸಾಕ್ಷ್ಯ ವಿಕ್ರಯ ಮಾಡುವವರಲ್ಲ ಮತ್ತು ಅಲ್ಲಾಹನಿಗೆ ಸಂಬಂಧಿ ಸಿದ ಸಾಕ್ಷ್ಯವನ್ನು ಅಡಗಿಸುವವರಲ್ಲ. ಒಂದು ವೇಳೆ ನಾವು ಹಾಗೆ ಮಾಡಿದರೆ ಪಾಪಿಗಳಲ್ಲಿ ಗಣಿಸಲ್ಪಡುವೆವು" ಎಂದು ಹೇಳಬೇಕು.

فَاِنْ عُثِرَ عَلٰۤى اَنَّهُمَا اسْتَحَقَّاۤ اِثْمًا فَاٰخَرٰنِ
يَقُوْمٰنِ مَقَامَهُمَا مِنَ الَّذِيْنَ اسْتَحَقَّ
عَلَيْهِمُ الْاَوْلَيٰنِ فَيُقْسِمٰنِ بِاللّٰهِ لَشَهَادَتُنَاۤ
اَحَقُّ مِنْ شَهَادَتِهِمَا وَمَا اعْتَدَيْنَاۤ ۖ اِنَّاۤ
اِذًا لَّمِنَ الظّٰلِمِيْنَ ﴿١٠٧﴾

107. ಆದರೆ ಅವರಿಬ್ಬರೂ ತಮ್ಮನ್ನು ತಾವೇ ಪಾಪಕ್ಕೆ ಗುರಿಪಡಿಸಿ ಕೊಂಡರೆಂದು ತಿಳಿದು ಬಂದರೆ ಅವರ ಸ್ಥಾನದಲ್ಲಿ, ಸಾಕ್ಷಿ ನೀಡುವುದರಲ್ಲಿ ಅವರಿಗಿಂತಲೂ ಹೆಚ್ಚು ಅರ್ಹತೆ ಪಡೆದ ಬೇರೆ ಇಬ್ಬರು, ಹಕ್ಕುಚ್ಯುತಿಗೆ ತುತ್ತಾದವರ ಪೈಕಿ - ಸಾಕ್ಷಿಗಳಾಗಿ ನಿಲ್ಲಬೇಕು. ಅವರು ಅಲ್ಲಾಹನ ಮೇಲೆ ಆಣೆ ಹಾಕಿ, "ನಮ್ಮ ಸಾಕ್ಷ್ಯವು ಅವರ ಸಾಕ್ಷ್ಯಕ್ಕಿಂತ ಅಧಿಕ ಸತ್ಯವಾಗಿರುತ್ತದೆ. ನಾವು ನಮ್ಮ ಸಾಕ್ಷ್ಯದಲ್ಲಿ ಯಾವುದೇ ಅತಿರೇಕಗೈದಿರುವುದಿಲ್ಲ. ಹಾಗೆ ಮಾಡಿದರೆ ನಾವು ಅಕ್ರಮಿಗಳಲ್ಲಾಗುವೆವು" ಎಂದು ಹೇಳಬೇಕು.

ذٰلِكَ اَدْنٰۤى اَنْ يَّاْتُوْا بِالشَّهَادَةِ عَلٰى وَجْهِهَاۤ
اَوْ يَخَافُوْۤا اَنْ تُرَدَّ اَيْمَانٌۢ بَعْدَ اَيْمَانِهِمْ ؕ
وَاتَّقُوا اللّٰهَ وَاسْمَعُوْا ؕ وَاللّٰهُ لَا يَهْدِى
الْقَوْمَ الْفٰسِقِيْنَ ﴿١٠٨﴾

108. ಈ ಕ್ರಮದಿಂದಾಗಿ ಜನರು ನಿಖರವಾಗಿ ಸಾಕ್ಷ್ಯ ಹೇಳುವರು. ಅಥವಾ ಕನಿಷ್ಠಪಕ್ಷ ಅವರ ಪ್ರಮಾಣ ವಚನಗಳ ನಂತರ ಇತರರ ಪ್ರಮಾಣ ವಚನಗಳ ಮೂಲಕ ತಮ್ಮ ಖಂಡನೆ ಯಾಗದಂತೆ ಭಯಪಡುವರೆಂದು ಹೆಚ್ಚಾಗಿ ನಿರೀಕ್ಷಿಸಬಹುದು. ಅಲ್ಲಾಹನನ್ನು ಭಯಪಡಿರಿ ಮತ್ತು ಕಿವಿಗೊಟ್ಟು ಕೇಳಿರಿ- ಅಲ್ಲಾಹನು ಆಜ್ಞೋಲ್ಲಂಘಕರನ್ನು ತನ್ನ ಸನ್ಮಾರ್ಗದಿಂದ ವಂಚಿತಗೊಳಿಸುತ್ತಾನೆ.

يَوْمَ يَجْمَعُ اللّٰهُ الرُّسُلَ فَيَقُوْلُ مَاذَاۤ
اُجِبْتُمْ ؕ قَالُوْا لَا عِلْمَ لَنَا ؕ اِنَّكَ

109. ಅಲ್ಲಾಹನು ಸಂದೇಶವಾಹಕರನ್ನೆಲ್ಲ ಒಟ್ಟುಗೂಡಿಸಿ, "ನಿಮಗೆ ಯಾವ ಉತ್ತರ ಕೊಡಲಾಯಿತೆಂದು"[54] ಕೇಳುವ ಆ ದಿನ

54. ಅರ್ಥಾತ್- ನಿರ್ಣಾಯಕ ದಿನದಂದು ಎಲ್ಲಾ ಪ್ರವಾದಿಗಳೊಡನೆ, ಇಸ್ಲಾಮಿನೆಡೆಗೆ ನೀವು ಜಗತ್ತಿಗೆ ನೀಡಿದ ಆಹ್ವಾನಕ್ಕೆ ಲೋಕದ ಜನರು ನಿಮಗೆ ಯಾವ ಪ್ರತ್ಯುತ್ತರ ನೀಡಿದರು ಎಂದು ಕೇಳಲಾಗುವುದು.

أَنْتَ عَلَّامُ الْغُيُوبِ ﴿١٠٩﴾

ಅವರು, "ನಮಗೇನೂ ಅರಿವಿಲ್ಲ. ನೀನೇ ರಹಸ್ಯವಾಗಿರುವ ಸಕಲ ಪರಮಾರ್ಥಗಳನ್ನು ಅರಿಯುವವನಾಗಿರುತ್ತೀ" ಎಂದೇ ನಿವೇದಿಸುವರು.

إِذْ قَالَ اللَّهُ يَٰعِيسَى ابْنَ مَرْيَمَ اذْكُرْ نِعْمَتِي عَلَيْكَ وَعَلَىٰ وَالِدَتِكَ إِذْ أَيَّدتُّكَ بِرُوحِ الْقُدُسِ تُكَلِّمُ النَّاسَ فِي الْمَهْدِ وَكَهْلًا وَإِذْ عَلَّمْتُكَ الْكِتَٰبَ وَالْحِكْمَةَ وَالتَّوْرَىٰةَ وَالْإِنجِيلَ وَإِذْ تَخْلُقُ مِنَ الطِّينِ كَهَيْـَٔةِ الطَّيْرِ بِإِذْنِي فَتَنفُخُ فِيهَا فَتَكُونُ طَيْرًا بِإِذْنِي وَتُبْرِئُ الْأَكْمَهَ وَالْأَبْرَصَ بِإِذْنِي وَإِذْ تُخْرِجُ الْمَوْتَىٰ بِإِذْنِي وَإِذْ كَفَفْتُ بَنِي إِسْرَٰٓءِيلَ عَنكَ إِذْ جِئْتَهُم بِالْبَيِّنَٰتِ فَقَالَ الَّذِينَ كَفَرُوا مِنْهُمْ إِنْ هَٰذَآ إِلَّا سِحْرٌ مُّبِينٌ ﴿١١٠﴾

110. ಅಲ್ಲಾಹನು ಹೀಗೆ ಹೇಳಲಿರುವ ಆ ಸಂದರ್ಭವನ್ನು ಊಹಿಸಿರಿ- "ಓ ಮರ್ಯಮರ ಪುತ್ರ ಈಸಾ, ನಾನು ನಿನಗೂ ನಿನ್ನ ಮಾತೆಗೂ ದಯಪಾಲಿಸಿದ್ದ 'ಭವ್ಯ ಕೊಡುಗೆಗಳನ್ನು' ಜ್ಞಾಪಿಸು. ನಾನು ಪವಿತ್ರಾತ್ಮನ ಮೂಲಕ ನಿನಗೆ ಸಹಾಯ ಮಾಡಿದೆ. ನೀನು ತೊಟ್ಟಿಲಲ್ಲಿಯೂ ವೃದ್ಧಾಪ್ಯದಲ್ಲಿಯೂ ಮಾತಾಡುತ್ತಿದ್ದೆ. ನಾನು ನಿನಗೆ ಗ್ರಂಥ ಮತ್ತು ಯುಕ್ತಿ, ತೌರಾತ್ ಮತ್ತು ಇಂಜೀಲ್‌ಗಳನ್ನು ಕೊಟ್ಟಿದ್ದೆ. ನೀನು ನನ್ನ ಅಪ್ಪಣೆಯಿಂದ ಮಣ್ಣಿನಿಂದ ಪಕ್ಷಿಯ ಪ್ರತಿರೂಪವನ್ನು ರಚಿಸುತ್ತಿದ್ದೆ ಮತ್ತು ಅದಕ್ಕೆ ಊದುತ್ತಿದ್ದೆ. ಅದು ನನ್ನ ಅಪ್ಪಣೆಯಿಂದ ಪಕ್ಷಿಯಾಗಿ ಬಿಡುತ್ತಿತ್ತು. ನೀನು ಹುಟ್ಟು ಕುರುಡರನ್ನೂ ಕುಷ್ಠ ರೋಗಿಗಳನ್ನೂ ನನ್ನ ಅಪ್ಪಣೆಯಿಂದ ವಾಸಿ ಮಾಡುತ್ತಿದ್ದೆ. ಮೃತ ದೇಹಗಳನ್ನು ನನ್ನ ಅಪ್ಪಣೆಯಿಂದ ಎಬ್ಬಿಸುತ್ತಿದ್ದೆ.[55] ಮುಂದೆ ನೀನು ಬನೀಇಸ್ರಾಈಲರ ಬಳಿಗೆ ಸುವ್ಯಕ್ತ ದೃಷ್ಟಾಂತಗಳನ್ನು ಕೊಂಡು ಹೋದಾಗ ಅವರಲ್ಲಿದ್ದ ಸತ್ಯನಿಷೇಧಿಗಳು ಈ ದೃಷ್ಟಾಂತಗಳು ಮಾಟಗಾರಿಕೆಯ ವಿನಾ ಬೇರೇನೂ ಅಲ್ಲವೆಂದರು. ಆಗ ನಾನೇ ನಿನ್ನನ್ನು ಅವರಿಂದ ರಕ್ಷಿಸಿದೆನು.

وَإِذْ أَوْحَيْتُ إِلَى الْحَوَارِيِّۦنَ أَنْ ءَامِنُوا بِي وَبِرَسُولِي قَالُوٓا ءَامَنَّا وَاشْهَدْ بِأَنَّنَا مُسْلِمُونَ ﴿١١١﴾

111. ನನ್ನ ಮೇಲೂ ನನ್ನ ಸಂದೇಶವಾಹಕರ ಮೇಲೂ ವಿಶ್ವಾಸ ವಿಡಿರೆಂದು ಹವಾರಿಗಳಿಗೆ ನಾನು ಸೂಚನೆ ಕೊಟ್ಟಾಗ, ನಾವು ವಿಶ್ವಾಸವಿಟ್ಟೆವೆಂದೂ ನಾವು ಮುಸ್ಲಿಮರಾಗಿರುವ ಬಗ್ಗೆ ಸಾಕ್ಷಿ ನಿಲ್ಲಿರೆಂದೂ ಅವರು ಹೇಳಿದರು.

إِذْ قَالَ الْحَوَارِيُّونَ يَٰعِيسَى ابْنَ مَرْيَمَ هَلْ يَسْتَطِيعُ رَبُّكَ أَن يُنَزِّلَ عَلَيْنَا

112. (ಹವಾರಿಗಳಿಗೆ ಸಂಬಂಧಿಸಿದ)[56] ಈ ಘಟನೆಯೂ ನೆನಪಿರಲಿ: ಹವಾರಿಗಳು, "ಓ ಮರ್ಯಮರ ಪುತ್ರ ಈಸಾ, ನಿಮ್ಮ ಪ್ರಭು

55. ಅರ್ಥಾತ್- ಮರಣಾವಸ್ಥೆಯಿಂದ ಎಬ್ಬಿಸಿ ಸಜೀವಾವಸ್ಥೆಗೆ ತಲುಪಿಸುತ್ತಿದ್ದೆ.

56. ಹವಾರಿಗಳ ಪ್ರಸ್ತಾಪ ಈ ಮೊದಲು ಬಂದಿತ್ತು. ಆದ್ದರಿಂದ ಇಲ್ಲಿ ಮಾತಿನ ಸರಣಿಯನ್ನು ಮುರಿದು ಉಪಮಾತಿನ ರೂಪದಲ್ಲಿ ಹವಾರಿಗಳಿಗೆ ಸಂಬಂಧಪಟ್ಟ ಇನ್ನೊಂದು ಘಟನೆಯೆಡೆಗೆ ಸೂಚಿಸಲಾಗಿದೆ. ಇದರಿಂದ ಮಸೀಹ್‌ರಿಂದ(ಅ) ನೇರವಾಗಿ ಬೋಧನೆಗಳನ್ನು ಪಡೆದಿದ್ದ ಶಿಷ್ಯಂದಿರು ಅವರನ್ನು ಓರ್ವ ಮನುಷ್ಯ ಮತ್ತು ಓರ್ವ ದೇವದಾಸನೆಂದು ಮಾತ್ರ ಭಾವಿಸುತ್ತಿದ್ದರೆಂದು ವ್ಯಕ್ತವಾಗುತ್ತದೆ. ತಮ್ಮ ಗುರು ದೇವರಾಗಿದ್ದಾರೆ, ದೇವನ ಸಹಭಾಗಿಯಾಗಿದ್ದಾರೆ ಅಥವಾ ದೇವಪುತ್ರನಾಗಿದ್ದಾರೆ ಎಂದು ಅವರು ಕನಸು ಮನಸ್ಸಿನಲ್ಲೂ ಭಾವಿಸಿರಲಿಲ್ಲ. ಮಸೀಹ್(ಅ) ಸ್ವತಃ ಅವರ ಮುಂದೆ ತಾನೊಬ್ಬ ಅಧಿಕಾರವಿಲ್ಲದ ದೇವದಾಸನಾಗಿದ್ದೇನೆ ಎಂಬ ಚಿತ್ರಣ ನೀಡಿದ್ದರೆಂದೂ ಇದರಿಂದ ವ್ಯಕ್ತವಾಗುತ್ತದೆ.

ನಮ್ಮ ಮೇಲೆ ಆಕಾಶದಿಂದ ಊಟದ ಹರಿವಾಣವನ್ನು ಇಳಿಸ ಬಲ್ಲನೇ?" ಎಂದು ಕೇಳಿದಾಗ ಈಸಾರವರು ನೀವು ಸತ್ಯವಾದಿ ಗಳಾಗಿದ್ದರೆ ಅಲ್ಲಾಹನನ್ನು ಭಯಪಡಿರೆಂದರು.

مَآئِدَةً مِّنَ السَّمَآءِ ۗ قَالَ اتَّقُوا اللّٰهَ
اِنْ كُنْتُمْ مُّؤْمِنِيْنَ ﴿١١٢﴾

113. ಆಗ ಅವರು, "ನಾವು ಆ ಹರಿವಾಣದಿಂದ ಉಣ್ಣುವಂತಾಗಲಿಕ್ಕೂ ಅದರಿಂದ ನಮ್ಮ ಮನಸ್ಸಿಗೆ ಶಾಂತಿಯುಂಟಾಗಲಿಕ್ಕೂ ತಾವು ನಮ್ಮೊಡನೆ ಹೇಳಿದುದೆಲ್ಲ ಸತ್ಯವೆಂದು ನಮಗೆ ತಿಳಿದುಬರಲಿಕ್ಕೂ ನಾವು ಅದರ ಬಗ್ಗೆ ಸಾಕ್ಷಿಗಳಾಗಿರಲಿಕ್ಕೂ ಬಯಸುತ್ತೇವೆ" ಎಂದರು.

قَالُوْا نُرِيْدُ اَنْ نَّاْكُلَ مِنْهَا وَتَطْمَئِنَّ
قُلُوْبُنَا وَنَعْلَمَ اَنْ قَدْ صَدَقْتَنَا وَنَكُوْنَ
عَلَيْهَا مِنَ الشّٰهِدِيْنَ ﴿١١٣﴾

114. ಆಗ ಮರ್ಯಮರ ಪುತ್ರ ಈಸಾರವರು ಹೀಗೆ ಪ್ರಾರ್ಥಿಸಿದರು: "ಓ ಅಲ್ಲಾಹ್, ನಮ್ಮ ಪ್ರಭೂ, ಆಕಾಶದಿಂದ ನಮಗೊಂದು ಊಟದ ಹರಿವಾಣವನ್ನು ಇಳಿಸು. ಅದು ನಮಗೂ ನಮ್ಮ ಹಿಂಗಾಮಿಗಳಿಗೂ ಮುಂಗಾಮಿಗಳಿಗೂ ಸಂತಸದ ಸಂದರ್ಭ ವಾಗಿಯೂ ನಿನ್ನ ಕಡೆಯಿಂದ ಒಂದು ದೃಷ್ಟಾಂತವಾಗಿಯೂ ಪರಿಣಮಿಸಲಿ. ನಮಗೆ ಆಹಾರ ಪ್ರದಾನ ಮಾಡು. ನೀನು ಅತ್ಯುತ್ತಮ ಅನ್ನದಾತನು."

قَالَ عِيْسَى ابْنُ مَرْيَمَ اللّٰهُمَّ رَبَّنَآ
اَنْزِلْ عَلَيْنَا مَآئِدَةً مِّنَ السَّمَآءِ تَكُوْنُ
لَنَا عِيْدًا لِّاَوَّلِنَا وَاٰخِرِنَا وَاٰيَةً مِّنْكَ ۚ
وَارْزُقْنَا وَاَنْتَ خَيْرُ الرّٰزِقِيْنَ ﴿١١٤﴾

115. ಅಲ್ಲಾಹ್ ಉತ್ತರವಿತ್ತನು: "ನಾನು ಅದನ್ನು ನಿಮ್ಮ ಮೇಲೆ ಇಳಿಸುವವನಿದ್ದೇನೆ. ಆದರೆ ಅನಂತರ ನಿಮ್ಮ ಪೈಕಿ ಸತ್ಯನಿಷೇಧ ಕೈಗೊಂಡವನಿಗೆ ಜಗತ್ತಿನಲ್ಲಿ ಬೇರಾರಿಗೂ ಕೊಡದಂತಹ ಶಿಕ್ಷೆ ಕೊಡುವೆನು."

قَالَ اللّٰهُ اِنِّيْ مُنَزِّلُهَا عَلَيْكُمْ ۚ فَمَنْ
يَّكْفُرْ بَعْدُ مِنْكُمْ فَاِنِّيْٓ اُعَذِّبُهٗ عَذَابًا
لَّآ اُعَذِّبُهٗٓ اَحَدًا مِّنَ الْعٰلَمِيْنَ ﴿١١٥﴾

116. (ಈ ಉಪಕಾರಗಳನ್ನೆಲ್ಲ ನೆನಪಿಸಿ) ಅಲ್ಲಾಹನು, "ಓ ಮರ್ಯಮರ ಪುತ್ರ ಈಸಾ, ಅಲ್ಲಾಹನ ಹೊರತು ನನ್ನನ್ನೂ ನನ್ನ ಮಾತೆಯನ್ನೂ ದೇವರನ್ನಾಗಿ ಮಾಡಿಕೊಳ್ಳಿರೆಂದು ನೀವು ಜನರೊಡನೆ ಹೇಳಿದ್ದಿರಾ?"[57] ಎಂದು ಕೇಳುವಾಗ ಅವರು ಉತ್ತರಿಸುವರು: ನೀನು ಪರಮ ಪಾವನನು. ನನಗೆ ಹೇಳಲು ಹಕ್ಕಿಲ್ಲದಂತಹ ಮಾತನ್ನು ಹೇಳುವ ಕಾರ್ಯ ನನ್ನದಾಗಿರಲಿಲ್ಲ. ನಾನು ಹಾಗೆ ಹೇಳಿರುತ್ತಿದ್ದರೆ ಅದು ನಿಶ್ಚಯವಾಗಿಯೂ ನಿನಗೆ ತಿಳಿದಿರುತ್ತಿತ್ತು.

وَاِذْ قَالَ اللّٰهُ يٰعِيْسَى ابْنَ مَرْيَمَ ءَاَنْتَ
قُلْتَ لِلنَّاسِ اتَّخِذُوْنِيْ وَاُمِّيَ اِلٰهَيْنِ
مِنْ دُوْنِ اللّٰهِ ۗ قَالَ سُبْحٰنَكَ مَا يَكُوْنُ
لِيْٓ اَنْ اَقُوْلَ مَا لَيْسَ لِيْ ۗ بِحَقٍّ ۗ اِنْ
كُنْتُ قُلْتُهٗ فَقَدْ عَلِمْتَهٗ ۗ تَعْلَمُ مَا فِيْ

57. ಕ್ರೈಸ್ತರು ಅಲ್ಲಾಹನ ಜತೆಗೆ ಮಸೀಹರನ್ನು(ಅ) ಮತ್ತು ಪವಿತ್ರಾತ್ಮನನ್ನು ಮಾತ್ರವಲ್ಲದೆ ಅವರ ತಾಯಿಯಾದ ಮರ್ಯಮ್‌ರನ್ನೂ(ಅ) ಶಾಶ್ವತವಾಗಿ ದೇವರನ್ನಾಗಿ ಮಾಡಿದರು. ಮಸೀಹರ(ಅ) ನಂತರ ಮೊದಲ ಮುನ್ನೂರು ವರ್ಷಗಳ ತನಕ ಇಂತಹ ಕಲ್ಪನೆಗಳಿಂದ ಕ್ರೈಸ್ತ ಜಗತ್ತು ಮುಕ್ತವಾಗಿತ್ತು. ಕ್ರಿ.ಶ. ಮೂರನೆಯ ಶತಮಾನದ ಕೊನೆಯ ಕಾಲದಲ್ಲಿ ಅಲೆಕ್ಸಾಂಡ್ರಿಯಾದ ಕೆಲವು ಧಾರ್ಮಿಕ ವಿದ್ವಾಂಸರು ಮೊಟ್ಟ ಮೊದಲ ಬಾರಿ ಮರ್ಯಮ್‌ರಿಗೆ 'ದೇವನ ತಾಯಿ', 'ದೇವತಾ ಮಾತೆ' ಮುಂತಾದ ಪದಗಳನ್ನು ಉಪಯೋಗಿಸಿದರು. ಅನಂತರ ಹಂತಹಂತವಾಗಿ ಮರ್ಯಮರ ಆರಾಧನೆಯೂ ಕ್ರೈಸ್ತರಲ್ಲಿ ರೂಢಿಯಾಯಿತು.

ನನ್ನ ಮನಸ್ಸಿನಲ್ಲಿರುವುದು ನಿನಗೆ ಗೊತ್ತಿದೆ. ನಿನ್ನ ಮನಸ್ಸಿನಲ್ಲಿರು ವುದು ನನಗೆ ಗೊತ್ತಿಲ್ಲ. ನೀನು ಸಕಲ ರಹಸ್ಯ ಪರಮಾರ್ಥಗಳ ಜ್ಞಾನಿಯಾಗಿರುತ್ತಿ.

نَفْسِي وَلَآ أَعْلَمُ مَا فِي نَفْسِكَ ۚ إِنَّكَ
أَنتَ عَلَّٰمُ ٱلْغُيُوبِ ﴿١١٦﴾

117. ನೀನು ನನಗೆ ನೀಡಿದ ಆಜ್ಞೆಯ ವಿನಾ ಇನ್ನೇನನ್ನೂ ನಾನು ಅವರಲ್ಲಿ ಹೇಳಿಲ್ಲ- ಅದು, "ನನ್ನ ಪ್ರಭುವೂ ನಿಮ್ಮ ಪ್ರಭುವೂ ಆಗಿರುವ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ" ಎಂದಾಗಿತ್ತು. "ನಾನು ಅವರ ನಡುವೆ ವಾಸಿಸಿದ್ದ ಕಾಲದ ವರೆಗೆ ಮಾತ್ರ ನಾನು ಅವರ ಮೇಲ್ವಿಚಾರಕನಾಗಿದ್ದೆ. ನೀನು ನನ್ನನ್ನು ಹಿಂದಕ್ಕೆ ಕರೆಸಿಕೊಂಡ ಮೇಲೆ ನೀನೇ ಅವರ ಮೇಲ್ವಿಚಾರಕನಾಗಿರುತ್ತಿ ಮತ್ತು ನೀನಂತು ಸಕಲ ವಸ್ತುಗಳ ಮೇಲ್ನೋಟವಿರಿಸು ವವನಾಗಿರುತ್ತಿ.

مَا قُلْتُ لَهُمْ إِلَّا مَآ أَمَرْتَنِي بِهِۦٓ أَنِ ٱعْبُدُوا
ٱللَّهَ رَبِّي وَرَبَّكُمْ ۚ وَكُنتُ عَلَيْهِمْ شَهِيدًا
مَّا دُمْتُ فِيهِمْ ۖ فَلَمَّا تَوَفَّيْتَنِي كُنتَ أَنتَ
ٱلرَّقِيبَ عَلَيْهِمْ ۚ وَأَنتَ عَلَىٰ كُلِّ شَيْءٍ شَهِيدٌ ﴿١١٧﴾

118. ನೀನು ಅವರಿಗೆ ಶಿಕ್ಷೆ ಕೊಟ್ಟರೆ ಖಂಡಿತವಾಗಿಯೂ ಅವರು ನಿನ್ನ ದಾಸರೇ ಮತ್ತು ಅವರನ್ನು ಕ್ಷಮಿಸಿ ಬಿಟ್ಟರೆ ನಿಶ್ಚಯವಾಗಿಯೂ ನೀನು ಅಜೇಯನೂ ಯುಕ್ತಿಪೂರ್ಣನೂ ಆಗಿರುತ್ತಿ."

إِن تُعَذِّبْهُمْ فَإِنَّهُمْ عِبَادُكَ ۖ وَإِن تَغْفِرْ
لَهُمْ فَإِنَّكَ أَنتَ ٱلْعَزِيزُ ٱلْحَكِيمُ ﴿١١٨﴾

119. ಆಗ ಅಲ್ಲಾಹ್ ಹೇಳುವನು- "ಸತ್ಯಸಂಧರಿಗೆ ಅವರ ಸತ್ಯ ಸಂಧತೆಯು ಫಲ ನೀಡುವ ದಿನವಿದು. ಅವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿವೆ. ಇಲ್ಲಿ ಅವರು ಸದಾ ಕಾಲವೂ ವಾಸಿಸುತ್ತಿರುವರು. ಅಲ್ಲಾಹ್ ಅವರಿಂದ ಸಂತುಷ್ಟನಾದನು ಮತ್ತು ಅವರು ಅವನಿಂದ ಸಂತುಷ್ಟರಾದರು. ಇದೇ ಅತ್ಯುತ್ಕೃಷ್ಟ ಯಶಸ್ಸು.

قَالَ ٱللَّهُ هَٰذَا يَوْمُ يَنفَعُ ٱلصَّٰدِقِينَ
صِدْقُهُمْ ۚ لَهُمْ جَنَّٰتٌ تَجْرِي مِن تَحْتِهَا
ٱلْأَنْهَٰرُ خَٰلِدِينَ فِيهَآ أَبَدًا ۚ رَّضِيَ ٱللَّهُ
عَنْهُمْ وَرَضُوا عَنْهُ ۚ ذَٰلِكَ ٱلْفَوْزُ ٱلْعَظِيمُ ﴿١١٩﴾

120. ಭೂಮಿ-ಆಕಾಶಗಳ ಮತ್ತು ಅವುಗಳೊಳಗಿರುವ ಸರ್ವಸ್ವದ ಸಾರ್ವಭೌಮತೆ ಅವನಿಗೇ ಇದೆ. ಮತ್ತು ಅವನು ಸಕಲ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನು.

لِلَّهِ مُلْكُ ٱلسَّمَٰوَٰتِ وَٱلْأَرْضِ وَمَا
فِيهِنَّ ۚ وَهُوَ عَلَىٰ كُلِّ شَيْءٍ قَدِيرٌ ﴿١٢٠﴾ ع